# ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಯಲ್ಲಿ ನಡೆಸಿದ ಪ್ರಗತಿ ಪರಿಶೀಲನಾ ಸಭೆಯ ವರದಿ

ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿ, ದಿನಾಂಕ: 17-12-2020 ರಂದು ನೆರೆ ಪರಿಸ್ಥಿತಿಯ ಕುರಿತು ಹಾಗೂ ಕೋವಿಡ್ ನಿಯಂತ್ರಣದ ಬಗ್ಗೆ ಜಿಲ್ಲಾಡಳಿತ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಸಭೆಯಲ್ಲಿ ಎಲ್ಲಾ ಇಲಾಖೆಗಳ ಜಿಲ್ಲಾ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಗಿರುತ್ತದೆ.

## ಕೋವಿಡ್ ಪರಿಸ್ಥಿತಿಯ ಕುರಿತು ವರದಿ:

ಜಿಲ್ಲೆಯಲ್ಲಿ ಇಲ್ಲಿಯವರೆಗೆ **332026** ಗಂಟಲು ಮಾದರಿಗಳನ್ನು ಸಂಗ್ರಹ ಮಾಡಲಾಗಿದ್ದು, ಇವುಗಳಲ್ಲಿ 25985 ಪಾಸಿಟಿವ್ ಪ್ರಕರಣಗಳು ಇರುತ್ತದೆ. 25436 ರೋಗಿಗಳು ಗುಣಮುಖರಾಗಿ ಬಿಡುಗಡೆ ಹೊಂದಿರುತ್ತಾರೆ. 207 ಸಕ್ರಿಯ ಪ್ರಕರಣಗಳಿದ್ದು, ಅದರಲ್ಲಿ 160 ಜನರು ಹೋಮ್ ಐಸೋಲೇಷನ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 47 ಪ್ರಕಣರಗಳಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಿಲ್ಲೆಯಲ್ಲಿ ಚಿಕಿತ್ಸೆಗಾಗಿ 2325 ಹಾಸಿಗೆಗಳು ಲಭ್ಯವಿದ್ದು, 47 ಹಾಸಿಗೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, 2278 ಹಾಸಿಗೆಗಳು ಖಾಲಿ ಇರುತ್ತವ. 17 ಖಾಸಗಿ 2278 ಆಸ್ಪತ್ರೆಗಳು ಚಿಕಿತ್ಸೆ ನೀಡಲು ಲಭ್ಯವಿರುತ್ತದೆ. ಮುಂದಿನ ದಿನಗಳಲ್ಲಿ ಕೋವಿಡ್ 19 ಸೋಂಕಿನ 2ನೇ ಅಲೆ ಬರುವ ಸಾಧ್ಯತೆ ಇರುವುದರಿಂದ, ಈ ಕುರಿತಂತೆ ಆರೋಗ್ಯ ಇಲಾಖೆಯವರು ಪೂರ್ವ ಸಿದ್ಧತೆಗಳನ್ನು ಹಾಡೂ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವಂತ ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿರುತ್ತದೆ.

ಕೋವಿಡ್ ಲಸಿಕೆಯ ಸಂಗ್ರಹಣೆ ಹಾಗೂ ಅವುಗಳ ಸಮರ್ಪಕ ಹಂಚಿಕೆಯ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು ಸೂಕ್ತ ಮಾರ್ಗದರ್ಶನಗಳನ್ನು ನೀಡಿರುತ್ತೇನೆ.

## ಅತಿವೃಷ್ಟಿ/ಪ್ರವಾಹ ಪರಿಸ್ಥಿತಿ ಕುರಿತು ವರದಿ:

2020 ನೇ ಸಾಲಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರ ಕಲ್ಪಿಸುವ ಹಿನ್ನಲೆಯಲ್ಲಿ ಆರ್‌ಜಿಆರ್‌ಹೆಚ್‌ಸಿಎಲ್ ತಂತ್ರಾಂಶದಲ್ಲಿ ಎ ವರ್ಗ-555, ಬಿ ವರ್ಗ-2280, ಸಿ ವರ್ಗ-2913 ಹೀಗೆ ಒಟ್ಟು 5748 ಮನೆಗಳ ವಿವರಗಳನ್ನು ದಾಖಲಿಸಲಾಗಿದೆ. 2020ನೇ ಸಾಲಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಅಂದಾಜು 152692.10 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು (ರೈತರ ಸಂಖ್ಯೆ:149141) ಮತ್ತು ಅಂದಾಜು 7231 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು (ರೈತರ ಸಂಖ್ಯೆ:9209) ಹಾನಿಯಾಗಿರುತ್ತವೆ. ಈ ಕುರಿತು ಪರಿಹಾರ ಕಲ್ಪಿಸುವ ಸಲುವಾಗಿ ದಿನಾಂಕ:15.12.2020 ರವರೆಗೆ ಪರಿಹಾರ ತಂತ್ರಾಂಶದಲ್ಲಿ 155253 ಪ್ರಕರಣಗಳ ಮಾಹಿತಿ ಅಳವಡಿಸಲಾಗಿದೆ. ಒಟ್ಟು 31140 ರೈತರಿಗೆ ರೂ.20.14 ಕೋಟಿ ಮೊತ್ತವು ನೇರವಾಗಿ ರೈತರ ಬ್ಯಾಂಕ ಖಾತೆಗಳಿಗೆ ಸಂದಾಯ ಮಾಡಲಾಗಿದೆ.

**2020 ರ ಹಿಂಗಾರು ಹಂಗಾಮಿನಲ್ಲಿ ಕೃಷಿ :** 3.24 ಲಕ್ಷ ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಹೊಂದಲಾಗಿದ್ದು, ಈ ಪೈಕಿ 2.76 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಶೇ 85.18 ರಷ್ಟು ಪ್ರಗತಿಯಾಗಿದೆ. ತೋಟಗಾರಿಕೆ : 1290 ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಹೊಂದಲಾಗಿದ್ದು, ಈ ಪೈಕಿ 1170 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಶೇ 90.70 ರಷ್ಟು ಪ್ರಗತಿಯಾಗಿದೆ. ಕೃಷಿ ಹಾಗೂ ತೋಟಗಾರಿಕೆ ಚಟುವಟಿಕೆಗಳಿಗೆ ಬೇಕಾದ ಬೀಜ, ರಸಗೊಬ್ಬರಗಳನ್ನು ಅವಶ್ಯಕತೆಯಿರುವ ಪ್ರಮಾಣದಲ್ಲಿ ದಾಸ್ತಾನುಗಳನ್ನು ಇಟ್ಟುಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೃಷಿ, ತೋಟಗಾರಿಕೆ ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಮುಂದುವರೆದು. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಮಾಡುವಂತೆ ಸೂಚನೆ ನೀಡಲಾಗಿರುತ್ತದೆ.

ಜಲ ಜೀವನ ಮಿಷನ್ ಯೋಜನೆಯಡಿ ಪ್ರಗತಿಯನ್ನು ತ್ವರತಿವಾಗಿ ಮಾಡುವಂತೆ ಹಾಗೂ ನಿರ್ವಹಣೆ ಹಾಗೂ ದುರಸ್ತಿ ಆಗಬೇಕಾದ ಘಟಕಗಳನ್ನು ಕೂಡಲೇ ಸರಿಪಡಿಸುವಂತೆ ಸೂಚನೆ ನೀಡಲಾಗಿದೆ.

ಜಿಲ್ಲೆಯ ಶಾಲೆ ಹಾಗೂ ತರಗತಿಗಳನ್ನು ಸ್ವಚ್ಛಗೊಳಿಸಲಾಗಿದ್ದು ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶಕ್ಕಾಗಿ ನಿರೀಕ್ಷೆಯಲ್ಲಿರುವುದಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳ ಬಗ್ಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಜರುಗಿಸಲು ಸೂಚನೆ ನೀಡಲಾಯಿತು.

ಕೋವಿಡ್-19 ಕೇರ್ ಕೇಂದ್ರಗಳನ್ನಾಗಿ ಉಪಯೋಗಿಸಲಾದ ಜಿಲ್ಲೆಯ ಎಲ್ಲಾ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ವಸತಿ ನಿಲಯಗಳನ್ನು ಆರೋಗ್ಯ ಇಲಾಖೆಯ ಎಸ್‌ಓಪಿ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಜಿಲ್ಲೆಯ ಎಲ್ಲಾ ಇಲಾಖೆಗಳವರು ಆಡಳಿತದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸಲು ನಿರ್ದೇಶನವನ್ನು ನೀಡಲಾಯಿತು.

ಎಲ್ಲಾ ಇಲಾಖೆಗಳಲ್ಲಿ ಎಸಸ್ಪಿ/ಟಿಎಸಪಿ ಯೋಜನೆಯನ್ನು ಸಮರ್ಪಕವಾಗಿ ಸಕಾಲದಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಜಾರಿಯಲ್ಲಿರುವ ಯೋಜನೆಗಳನ್ನು ತ್ವರಿತಗತಿಯಲ್ಲಿ ಸರ್ಕಾರ ನಿಗದಿಪಡಿಸಿ ಅವಧಿಯೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ನವೀನ್ ರಾಜ್ ಸಿಂಗ್ ಭಾ.ಆ.ಸೇ., ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 31-12-2020 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಕೋವಿಡ್-19 ಹಾಗೂ ಇತರೆ ವಿಷಯಗಳ ಸಂಬಂಧ ನಡೆದ ಸಭಾ ನಡವಳಿ.**

*******

**ಹಾಜರಿದ್ದವರು:**

1. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತ್, ಹಾಸನ ಜಿಲ್ಲೆ.
3. ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ.
4. ಅಪರ ಜಿಲ್ಲಾಧಿಕಾರಿಗಳು, ಹಾಸನ.
5. ಉಪವಿಭಾಗಾಧಿಕಾರಿಗಳು, ಸಕಲೇಶಪುರ ಉಪವಿಭಾಗ.
6. ನಿರ್ದೇಶಕರು, ಹಿಮ್ಸ್, ಹಾಸನ.
7. ಜಿಲ್ಲಾ ಶಸ್ತ್ರ ತಜ್ಞರು, ಹಿಮ್ಸ್, ಹಾಸನ.
8. ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಸನ.
9. ಇತರೆ ಅಧಿಕಾರಿಗಳು.
10. ತಾಲ್ಲೂಕು ತಹಸೀಲ್ದಾರ್/ಆರೋಗ್ಯಾಧಿಕಾರಿಗಳು ವಿಡಿಯೋ ಸಂವಾದದ ಮೂಲಕ ಹಾಜರಿದ್ದರು.

ಸಭೆಯಲ್ಲಿ ಉಪಸ್ಥಿತರಿದ್ದವರೆಲ್ಲರನ್ನು ಜಿಲ್ಲಾಧಿಕಾರಿಗಳು, ಹಾಸನ ರವರು ಸ್ವಾಗತಿಸುತ್ತಾ, ಅಧ್ಯಕ್ಷತೆವಹಿಸಿ ಸಭೆಯನ್ನು ನಡೆಸಿಕೊಡಲು ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಜಿಲ್ಲೆಯಲ್ಲಿ ಕೊರೋನಾ ವೈರಸ್ (COVID-19) ಹರಡದಂತೆ ಕಟ್ಟುನಿಟ್ಟಿನ ಕ್ರಮವಹಿಸುವ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಸಾರ್ವಜನಿಕ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಮತ್ತು ಸುರಕ್ಷತೆಯ ದೃಷ್ಟಿಯಿಂದ ಜಿಲ್ಲೆಯಲ್ಲಿ ಈವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಹಾಗೂ ಇತರೆ ವಿಷಯಗಳ ಸಂಬಂಧ ಪರಿಶೀಲನೆ ನಡೆಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು ಹಾಗೂ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಿ ಸೂಚನೆಗಳನ್ನು ನೀಡಲಾಯಿತು.

- ಜಿಲ್ಲೆಯ ಮಳೆ ಪರಿಸ್ಥಿತಿಯನ್ನು ಪರಿಶೀಲಿಸಲಾಗಿ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ಡಿಸೆಂಬರ್ 31 ರವರೆಗೆ 1142.00 ಮಿ.ಮೀ. ವಾಡಿಕೆ ಮಳೆಯಾಗಬೇಕಾಗಿದ್ದು, 1161.00 ಮಿ.ಮೀ. ಮಳೆ ವಾಸ್ತವಿಕವಾಗಿ ಉಂಟಾಗಿದ್ದು, ಶೇ.2 ರಷ್ಟು ಹೆಚ್ಚು ಮಳೆಯಾಗಿರುತ್ತದೆ. ಜಿಲ್ಲೆಯಲ್ಲಿ ಬಿತ್ತನೆ ಮಾಡಿರುವ ಬೆಳೆಗಳು ಉತ್ತಮವಾಗಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ಕೊರತೆ ಇರುವುದಿಲ್ಲ ಹಾಗೂ ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಇರುವುದಿಲ್ಲ. ಜನ-ಜಾನುವಾರುಗಳಿಗೆ ಯಾವುದೇ ಕೊರತೆ ಉಂಟಾಗದಂತೆ ನಿಯಮಾನುಸಾರ ಕ್ರಮವಹಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಮುಂಜಾಗ್ರತ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಲು ತಿಳಿಸಲಾಯಿತು.
- ಜಿಲ್ಲೆಯಲ್ಲಿ ಒಟ್ಟು 95,863 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 6.00 ಲಕ್ಷ ಮೆಟ್ರಿಕ್ ಟನ್‌ನಷ್ಟು ಮೆಕ್ಕೆಜೋಳ ಉತ್ಪಾದನೆ ಇರುತ್ತದೆ. ಕೆ.ಎಂ.ಎಫ್ ರವರು ವಾರ್ಷಿಕವಾಗಿ ಸುಮಾರು 72,000 ಮೆಟ್ರಿಕ್ ಟನ್‌ನಷ್ಟು ಮೆಕ್ಕೆಜೋಳವನ್ನು ಖರೀದಿ ಮಾಡಲಾಗುತ್ತಿರುತ್ತದೆ. ಮಾರುಕಟ್ಟೆಯಲ್ಲಿ ಸದರಿ ಬೆಳೆಗೆ ಸರಿಯಾದ

ಬೆಲೆ ಸಿಗದೆ ರೈತರು ಸಂಕಷ್ಟದಲ್ಲಿರುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಜಿಲ್ಲೆಯಲ್ಲಿ ಒಂದು ಸ್ಟಾರ್ಚ್ ಕಾರ್ಖಾನೆಯನ್ನು ಪ್ರಾರಂಭಿಸಿದ್ದಲ್ಲಿ ಮೆಕ್ಕೆಜೋಳ ಬೆಳೆಯುವ ರೈತರಿಗೆ ಅನುಕೂಲವಾಗುತ್ತದೆ ಎಂದು ಚರ್ಚಿಸಲಾಯಿತು. ನಂತರ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ರವರು ಮಾತನಾಡಿ ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಅನುಷ್ಠಾನಗೊಳಿಸಿರುವ ಸ್ಟಾರ್ಚ್ ಕಾರ್ಖಾನೆಯಂತೆ ಜಿಲ್ಲೆಯಲ್ಲಿಯೂ ಒಂದು ಕಾರ್ಖಾನೆಯನ್ನು ಸ್ಥಾಪಿಸಬಹುದಾಗಿರುತ್ತದೆ ಎಂದು ಅಭಿಪ್ರಾಯವನ್ನು ತಿಳಿಸಿದರು. ಆದ್ದರಿಂದ ಸದರಿ ವಿಷಯದ ಕುರಿತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ಹಾಗೂ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ವಲಯ, ಹಾಸನ ರವರು ಹರಿಹರದಲ್ಲಿನ ಕಾರ್ಗಿಲ್ ಕಾರ್ಖಾನೆಗೆ ಭೇಟಿ ನೀಡಿ ಜಂಟಿ ಪರಿಶೀಲನೆ ನಡೆಸಿ ಮುಂದಿನ 10 ದಿನದೊಳಗೆ ವರದಿ ಸಲ್ಲಿಸಲು ತಿಳಿಸಲಾಯಿತು. **(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ ಹಾಗೂ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ವಲಯ, ಹಾಸನ)**

- ನಂತರ ಜಿಲ್ಲೆಯಲ್ಲಿ ಒಂದು ಸ್ಟಾರ್ಚ್ ಕಾರ್ಖಾನೆಯನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.
- ಜಿಲ್ಲೆಯಲ್ಲಿ ರಾಗಿ ಬೆಳೆಯ ಉತ್ಪಾದನೆ ಬಗ್ಗೆ ಪರಿಶೀಲಿಸಲಾಗಿ, ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ರಾಗಿ ಬೆಳೆಯ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ದಿನಾಂಕ 31.01.2021 ರವರೆಗೆ ರೈತರು ನೊಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಒಟ್ಟು 1,13,877 ಕ್ವಿಂಟಾಲ್ ರಾಗಿಯನ್ನು ರೈತರಿಂದ ಎಂ.ಎಸ್.ಪಿ ದರದಲ್ಲಿ ಖರೀದಿಸುವ ಗುರಿಯಿದ್ದು, ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮಗಳನ್ನು ಕೈಗೊಳ್ಳಾಗುವುದೆಂದು ಸಭೆಗೆ ತಿಳಿಸಿದರು.
- ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳ ಬಗ್ಗೆ ಪರಿಶೀಲಿಸಲಾಯಿತು. ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಹಾಸನ ರವರು ಮಾತನಾಡಿ ಅತಿಯಾದ ಮಳೆಯಿಂದ ಒಟ್ಟು 8,563 ಹೆಕ್ಟೇರ್ ತೋಟಗಾರಿಕೆ ಬೆಳೆಗಳು ಹಾನಿಯಾಗಿದ್ದು, ಹಾನಿಯಾಗಿರುವ ಬೆಳೆಗಳಿಗೆ ಪರಿಹಾರ ಒದಗಿಸಲು ಬೆಳೆ ನಷ್ಟ ವರದಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ. 2020-21ನೇ ಸಾಲಿನ ಅತಿವೃಷ್ಟಿಯಿಂದ ಉಂಟಾಗಿರುವ ಬೆಳೆ ನಷ್ಟದ ಪ್ರಕರಣಗಳಿಗೆ ಸೂಕ್ತ ಪರಿಹಾರ ನೀಡುವ ಸಂಬಂಧ ಪರಿಹಾರ ತಂತ್ರಾಂಶದಲ್ಲಿ ಬೆಳೆ ನಷ್ಟದ ವಿವರಗಳನ್ನು ಸರ್ಕಾರದಿಂದ ನಿಗಧಿಪಡಿಸಿರುವ ಸಮಯದೊಳಗೆ ಅಳವಡಿಸಿ ಉತ್ತಮ ಪ್ರಗತಿ ಸಾಧಿಸಲು ನಿರ್ದೇಶನ ನೀಡಲಾಯಿತು.
- ಆಲೂಗಡ್ಡೆ ಸಸಿ ಉತ್ಪನ್ನ ಕಾರ್ಯಕ್ಕೆ ರೈತರು ತಮ್ಮ ಪೂರ್ಣ ಜಮೀನು ಬಳಸದಂತೆ ಕ್ರಮವಹಿಸಲು ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಹಾಸನ ರವರಿಗೆ ತಿಳಿಸಲಾಯಿತು.
- ಜಿಲ್ಲೆಯಲ್ಲಿ ಕಂಡು ಬಂದಿರುವ ಪಾಸಿಟೀವ್ ಪ್ರಕರಣಗಳ ಬಗ್ಗೆ ಪರಿಶೀಲಿಸಲಾಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ದಿನಾಂಕ 31.12.2020 ರಂದು ಒಟ್ಟು 06 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇಲ್ಲಿಯವರೆಗೆ ಒಟ್ಟು 28004 ಪ್ರಕರಣಗಳು ವರದಿಯಾಗಿವೆ, ಜಿಲ್ಲೆಯಲ್ಲಿ ಇಲ್ಲಿಯವರಗೆ ಒಟ್ಟು 27341 ರೋಗಿಗಳು ಬಿಡುಗಡೆ ಹೊಂದಿದ್ದು, ಪಸಕ್ತ 12 ಸಕ್ರಿಯ ಪ್ರಕರಣಗಳು ಇರುತ್ತವೆ ಹಾಗೂ ಈವರೆಗೆ ಇಟ್ಟು 463 ರೋಗಿಗಳು ಮೃತಪಟ್ಟಿರುತ್ತಾರೆಂದು ಸಭೆಗೆ ತಿಳಿಸಿದರು.
- ಹಿಮ್ಸ್‌ನ ಪ್ರಯೋಗಾಲಯದಲ್ಲಿ ಒಂದು ವಾರದ ಸರಾಸರಿಯಂತೆ ಕೋವಿಡ್ ಪರೀಕ್ಷೆಯು ಒಂದು ದಿನಕ್ಕೆ 2300 ಆಗಿದ್ದು, ಜಿಲ್ಲೆಯಲ್ಲಿ ಪಾಸಿಟಿವಿಟಿ ದರವು 0.88 % ಆಗಿದ್ದು, ಸಾವಿನ ಪ್ರಮಾಣ 1.22% ಇದೆಯೆಂದು ತಿಳಿಸಿದರು. ಹಾಗೂ ಒಂದು ದಿನಕ್ಕೆ ಗರಿಷ್ಠ 3000 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಈ ದಿನದಲ್ಲಿ ಒಟ್ಟು 30 ಹಾಸಿಗೆಗಳಲ್ಲಿ ಕೋವಿಡ್ ರೋಗಿಗಳು

ಆಕ್ರಮಿಸಿಕೊಂಡಿದ್ದು, ವೆಂಟಿಲೇಟರ್‌ನಲ್ಲಿ ೦೫ ರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆಂದು ಹಿಮ್ಸ್‌ನ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

- ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಯಲ್ಲಿ ಹೆಚ್ಚಿನ ಕಾಳಜಿವಹಿಸುವಂತೆಯೂ ಹಾಗೂ ಚಿಕಿತ್ಸೆಗೆ ಬೇಕಾದ ಔಷಧಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇರಿಸುವಂತೆ ತಿಳಿಸಲಾಯಿತು.
- ಜಿಲ್ಲೆಯ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ವಿವರವನ್ನು ಪರಿಶೀಲಿಸಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ DCHC ಯಲ್ಲಿ 4 ಕೋವಿಡ್ ಪಾಸಿಟೀವ್ ರೋಗಿಗಳು ಹಾಗೂ ಕೋವಿಡ್ ಕೇರ್ ಸೆಂಟರ್ ಸಕಲೇಶಪುರದಲ್ಲಿ 2 ಕೋವಿಡ್ ಪಾಸಿಟೀವ್ ರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದು, ಇತರೆ ತಾಲ್ಲೂಕುಗಳಲ್ಲಿ ರೋಗಿಗಳು ದಾಖಲಾತಿ ಇರುವುದಿಲ್ಲ ಎಂದು ತಿಳಿಸಿದರು.
- ಜಿಲ್ಲೆಯ ತಾಲ್ಲೂಕು ಆಸ್ಪತ್ರೆಯಲ್ಲಿರುವ DCHC ಯಲ್ಲಿ ಹಾಗೂ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಕೋವಿಡ್ ಪಾಸಿಟೀವ್ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಿ ತೀವ್ರತರವಾದ ರೋಗಿಗಳನ್ನು ಜಿಲ್ಲೆಯ ಹಿಮ್ಸ್‌ನಲ್ಲಿ ಚಿಕಿತ್ಸೆಗಾಗಿ ಕಳುಹಿಸುವಂತೆ ನಿರ್ದೇಶನ ನೀಡಲಾಯಿತು.
- ಜಿಲ್ಲೆಯ ಎಲ್ಲಾ DCHC ಹಾಗೂ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಆಕ್ಸಿಜನೇಟೆಡ್ ಬೆಡ್‌ಗಳು ಹಾಗೂ ಆಕ್ಸಿಜೆನ್ ಸಿಲಿಂಡರ್‌ಗಳ ಲಭ್ಯತೆ ಇದ್ದು, ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ 400 ಆಕ್ಸಿಜನೇಟೆಡ್ ಬೆಡ್‌ಗಳು ಹಾಗೂ ಪ್ರತೀ ತಾಲ್ಲೂಕಿನಲ್ಲಿ ತಲಾ 50 ಆಕ್ಸಿಜನೇಟೆಡ್ ಬೆಡ್‌ಗಳನ್ನು ತಯಾರಿಟ್ಟುಕೊಳ್ಳಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.
- ಹಿಮ್ಸ್ ಕೋವಿಡ್ ಪ್ರಯೋಗಾಲಯದ ಮುಖ್ಯಸ್ಥರು ಮಾತನಾಡಿ ಕೋವಿಡ್ ಸ್ಯಾಂಪಲ್‌ಗಳಿಗೆ ಲೇಬಲ್‌ಗಳನ್ನು ಅಂಟಿಸಲು ಜಿಲ್ಲೆಯ ಇತರೆ ಪ್ರಯೋಗಾಲಯದಿಂದ 4 ಜನ ಪ್ರಯೋಗಶಾಲಾ ತಂತ್ರಜ್ಞರನ್ನು ಹಿಮ್ಸ್‌ಗೆ ನಿಯೋಜಿಸಲಾಗಿದ್ದು, ಇದರಿಂದ ಅವರ ಆಸ್ಪತ್ರೆಗಳ ಕೆಲಸವು ಕುಂಠಿತಗೊಳ್ಳುತ್ತಿದೆ. ಆದುದರಿಂದ ಒಂದು ಲೇಬಲಿಂಗ್ ಮೆಷಿನ್‌ನ್ನು ಪ್ರಯೋಗಾಲಯಕ್ಕೆ ಒದಗಿಸಿಕೊಟ್ಟರೆ ಇದರಿಂದ ಕೆಲಸವು ಸುಲಭವಾಗುವುದೆಂದು ಮನವಿ ಮಾಡಿದರು. ಈ ಬಗ್ಗೆ ಪರಿಶೀಲಿಸಿ ಅವಶ್ಯಕತೆಗನುಗುಣವಾಗಿ ನಿಯಮಾನುಸಾರ ಕ್ರಮವಹಿಸಲು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆರವರಿಗೆ ತಿಳಿಸಲಾಯಿತು.
- ಜಿಲ್ಲೆಯಲ್ಲಿ ಇಂದಿನವರೆಗೆ ಯು.ಕೆ.ಯಿಂದ ಹಿಂದಿರುಗಿ ಬಂದವರ ಹಾಗೂ ಇವರ ಪತ್ತೆಯ ವಿವರವನ್ನು ಪಡೆಯಲಾಯಿತು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಇಲ್ಲಿಯವರೆಗೆ ಜಿಲ್ಲೆಯಲ್ಲಿ ೩೬ ಜನ ಯು.ಕೆ.ಯಿಂದ ಹಿಂದಿರುಗಿ ಬಂದಿದ್ದು, ಇವರಲ್ಲಿ ೩ ಜನ ಸಂಪರ್ಕದಲ್ಲಿರುವವರಾಗಿದ್ದು, ೩೮ ಜನ ಪತ್ತೆ ಮಾಡಲಾಗಿದ್ದು, ಇವರಲ್ಲಿ ಇತರೆ ಜಿಲ್ಲೆಯಲ್ಲಿ 6 ಜನರು ವಾಸವಾಗಿರುವರಾಗಿರುತ್ತಾರೆ. ಈ ಮಾಹಿತಿಯನ್ನು ಆಯಾ ಜಿಲ್ಲೆಗಳಿಗೆ ನೀಡಲಾಗಿದೆ. ಒಬ್ಬರ ವಿಳಾಸ ಪತ್ತೆಯಾಗದ ಕಾರಣ ಪೋಲಿಸ್ ಇಲಾಖೆಗೆ ದೂರು ನೀಡಲಾಗಿದೆ ಹಾಗೂ ಎಲ್ಲರ ಮೂಗು ಹಾಗೂ ಗಂಟಲು ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿದ್ದು, ಫಲಿತಾಂಶವು ನೆಗೆಟೀವ್ ಬಂದಿರುತ್ತದೆ. ಮುಂದಿನ ದಿನಗಳಲ್ಲಿ ಸದರಿ ಪ್ರಕರಣಗಳನ್ನು ನಿಭಾಯಿಸುವ ನಿಟ್ಟಿನಲ್ಲಿ ಒಟ್ಟು 60 ಪ್ರತ್ಯೇಕ ಬೆಡ್‌ಗಳನ್ನು ಮೀಸಲಿರಿಸಲಾಗಿರುತ್ತದೆ ಎಂದು ತಿಳಿಸಿದರು.
- ಕೋವಿಡ್-೧೯ ವಾಕ್ಸೀನೇಷನ್ ಕಾರ್ಯದ ಪ್ರಕ್ರಿಯೆ ಕುರಿತು ಪರಿಶೀಲಿಸಲಾಗಿ, ಕೋವಿಡ್ ವಾಕ್ಸಿನೇಷನ್ ಸಂಬಂಧ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿರುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ರವರು ತಿಳಿಸಿದರು. ಜಿಲ್ಲೆಯಲ್ಲಿ ಯಾವುದಾರೂ ಒಂದು ತಾಲೂಕಿನಲ್ಲಿ ಕೋವಿಡ್ ಲಸಿಕೆಯನ್ನು ನೀಡುವ ಅಣುಕು ಪ್ರದರ್ಶನವನ್ನು (Dry Run) ದಿನಾಂಕ: ೦೭-೦೧-೨೦೨೦ ರೊಳಗೆ ನಿಯಮಾನುಸಾರ ಏರ್ಪಡಿಸುವಂತೆ ಸೂಚಿಸಲಾಯಿತು. ಪ್ರತೀ

ತಾಲ್ಲೂಕಿನಲ್ಲಿ ಶಾಲೆಗಳನ್ನು ಗುರುತುಪಡಿಸಿ ಕ್ರಮವಹಿಸಲು ತಹಶೀಲ್ದಾರ್ /ಬಿ.ಇ.ಓ/ಟಿ.ಹೆಚ್.ಓ ರವರಿಗೆ ತಿಳಿಸಲಾಯಿತು.

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಹಾಸನ ರವರು ಮಾತನಾಡಿ ಜಿಲ್ಲೆಯಲ್ಲಿ ದಿನಾಂಕ 01.01.2021 ರಿಂದ 06 ರಿಂದ 10ನೇ ತರಗತಿಯ ವರೆಗಿನ ಶಾಲೆಗಳನ್ನು ಪ್ರಾರಂಭಿಸುತ್ತಿರುವ ಬಗ್ಗೆ ಮಾಹಿತಿಯನ್ನು ಸಲ್ಲಿಸಿದರು. ಮಕ್ಕಳು ಶಾಲೆಗೆ ಹಾಜರಾಗುವ ಮುಂಚೆ ಎಲ್ಲಾ ತರಗತಿಗಳನ್ನು ಸ್ಯಾನಿಟೈಜ್ ಮಾಡಿ ತರಗತಿಗಳನ್ನು ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳೊಂದಿಗೆ ತಯಾರಿರುವ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರೊಂದಿಗೆ ಪರಿಶೀಲನೆ ನಡೆಸಿ ಖಚಿತಪಡಿಸಿಕೊಳ್ಳಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ರವರಿಗೆ ತಿಳಿಸಲಾಯಿತು. ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ರವರು ಮಾತನಾಡಿ ನಗರ ವ್ಯಾಪ್ತಿಯ ಶಾಲೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಂದ ಹಾಗೂ ಗ್ರಾಮಾಂತರ ಪ್ರದೇಶದ ಶಾಲೆಗಳನ್ನು ಜಿಲ್ಲಾ ಪಂಚಾಯತ್ ವತಿಯಿಂದ ಸ್ಯಾನಿಟೈಸ್ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ಪಾಸಿಟಿವ್ ಪ್ರಕರಣ ಕಂಡುಬಂದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಲೆಯನ್ನು ಸ್ಯಾನಿಟೈಜ್ ಮಾಡುವ ಬಗ್ಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.
- ವಿಡಿಯೋ ಸಂವಾದದ ಮೂಲಕ ಸಭೆಯಲ್ಲಿ ಭಾಗವಹಿಸಿದ್ದ ತಹಶೀಲ್ದಾರ್ ರವರೊಂದಿಗೆ ಮಾತನಾಡಿ ಗ್ರಾಮ ಪಂಚಾಯ್ತಿ ಚುನಾವಣೆ ಹಿನ್ನೆಲೆಯಲ್ಲಿ ತಾಲ್ಲೂಕುಗಳಿಗೆ ನೀಡಲಾಗಿದ್ದ ಥರ್ಮಲ್‌ಸ್ಕ್ಯಾನರ್ ಗಳನ್ನು ಶಾಲೆಗಳ ಉಪಯೋಗಕ್ಕಾಗಿ ಬಳಸಲು ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಒದಗಿಸಲು ತಿಳಿಸಲಾಯಿತು. ಈ ವಿಷಯದ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಹಾಸನ ರವರು ಮೇಲುಸ್ತುವಾರಿ ನಡೆಸಲು ತಿಳಿಸಲಾಯಿತು.

**ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**(ನವೀನ್‌ರಾಜ್ ಸಿಂಗ್, ಭಾ.ಆ.ಸೇ.)**
**ಮಾನ್ಯ ಪ್ರಾದೇಶಿಕ ಆಯುಕ್ತರು,**
**ಬೆಂಗಳೂರು ವಿಭಾಗ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ**
**ಕಾರ್ಯದರ್ಶಿಗಳು.**

ದಿನಾಂಕ: 11-01-2021

ಸಲ್ಲಿಸಿದೆ,

ವಿಷಯ: ದಿನಾಂಕ 04-12-2020ರಂದು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಿ, ಇಲಾಖಾವಾರು ನಡೆಸಿದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಕುರಿತು.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 09 ಇಸಪ 2020 ದಿನಾಂಕ: 09.10.2020

------

ಜಿಲ್ಲಾ ಉಸ್ತುವಾರಿ ಅಧಿಕಾರಿಯಾಗಿ ದಿನಾಂಕ:04.12.2020 ರಂದು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡುವ ಮೂಲಕ ವಿವಿಧ ಕ್ಷೇತ್ರಗಳ ಅಡಿಯಲ್ಲಿ ಜಿಲ್ಲಾ ಪ್ರಗತಿ ಪರಿಶೀಲನೆಯನ್ನು ಕೈಗೊಂಡಿರುತ್ತೇನೆ. ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಗಳು ಮಾತನಾಡಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಜಿಲ್ಲಾ ರಕ್ಷಣಾಧಿಕಾರಿಗಳನ್ನು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಹಾಗೂ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುವ ಮೂಲಕ ಈ ಕೆಳಗಿನ ಕ್ಷೇತ್ರಗಳ ಪ್ರಸಕ್ತ ಮಾಹಿತಿಯನ್ನು ಅವಲೋಕಿಸಲು ನೆರವಾಗಿರುತ್ತಾರೆ. ಪ್ರಗತಿ ಪರಿಶೀಲನೆಯಲ್ಲಿನ ಪ್ರಮುಖ ಅಂಶಗಳು ಹೀಗಿವೆ.

- ಜಿಲ್ಲಾಧಿಕಾರಿಗಳು, ಋತುಮಾನ/ಪರಿಸ್ಥಿತಿ ಮಳೆ ವಿವರ ನೀಡುತ್ತಾ, ಚಿತ್ರದುರ್ಗ ಜಿಲ್ಲೆಯಲ್ಲಿ ನವೆಂಬರ್ ಅಂತ್ಯಕ್ಕೆ ಒಟ್ಟು 533 ಮಿ.ಮೀ.ಮಳೆ ಬರಬೇಕಾಗಿದ್ದು, ವಾಸ್ತವಿಕವಾಗಿ 753 ಮಿ.ಮೀ.ಮಳೆ ಬಂದಿದ್ದು, ಶೇ.41ರಷ್ಟು ಮಳೆ ಹೆಚ್ಚಳವಾಗಿರುವುದಾಗಿ ಸಭೆಯಲ್ಲಿ ವಿವರಿಸಿರುತ್ತಾರೆ. 2020ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ವಿಸ್ತೀರ್ಣದ ಗುರಿ 57200 ಇದ್ದು 51851 ಸಾಧನೆ ಶೇ.91ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಲಾಗಿದ್ದು, ಮಳೆ ವಿಕೋಪದಿಂದ ಜಿಲ್ಲೆಯಲ್ಲಿ ಒಟ್ಟು 8 ಜೀವಹಾನಿ, 26 ಜಾನುವಾರು ಹಾನಿ, 409 ಮನೆಗಳ ಹಾನಿಯಾಗಿದ್ದು, ಒಟ್ಟು ರೂ.63.87ಲಕ್ಷ ಪರಿಹಾರದ ಮೊತ್ತ ನೀಡಲಾಗಿದೆಯೆಂದು ಜಿಲ್ಲಾಧಿಕಾರಿಗಳು ತಮ್ಮ ಪ್ರಾಸ್ತಾವಿಕದಲ್ಲಿ ಸಭೆಯ ಗಮನಕ್ಕೆ ತಂದಿರುತ್ತಾರೆ.

1. **ಕೃಷಿ ಇಲಾಖೆ:**

ಜಿಲ್ಲೆಯಲ್ಲಿ ನಡೆದ ರೈತರ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಜಿಲ್ಲಾಧಿಕಾರಿಗಳು ಮಾತನಾಡಿ, ಚಿತ್ರದುರ್ಗ ಜಿಲ್ಲೆಯಲ್ಲಿ 2003-2004ರಿಂದ 2020-21ರವರೆಗೆ **ಚಳ್ಳಕೆರೆ ತಾಲೂಕಿನಲ್ಲಿ** ಒಟ್ಟು 61 ಪ್ರಕರಣಗಳು ವರದಿಯಾಗಿದ್ದು, 25 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 36 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ. **ಚಿತ್ರದುರ್ಗ ತಾಲೂಕಿನಲ್ಲಿ** ಒಟ್ಟು 106 ಪ್ರಕರಣಗಳು ವರದಿಯಾಗಿದ್ದು, 39 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 65 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ. **ಹಿರಿಯೂರು ತಾಲೂಕಿನಲ್ಲಿ** ಒಟ್ಟು 107 ಪ್ರಕರಣಗಳು ವರದಿಯಾಗಿದ್ದು, 62 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 45 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ ಎಂಬ ಮಾಹಿತಿ ಲಭ್ಯವಾಗಿರುತ್ತದೆ.

**ಹೊಳಲ್ಕೆರೆ ತಾಲೂಕಿನಲ್ಲಿ** ಒಟ್ಟು 114 ಪ್ರಕರಣಗಳು ವರದಿಯಾಗಿದ್ದು, 71 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 41 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. **ಹೊಸದುರ್ಗ ತಾಲೂಕಿನಲ್ಲಿ** ಒಟ್ಟು 90 ಪ್ರಕರಣಗಳು ವರದಿಯಾಗಿದ್ದು, 52 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 37 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ, **ಮೊಳಕಾಲ್ಮೂರು ತಾಲೂಕಿನಲ್ಲಿ** ಒಟ್ಟು 6 ಪ್ರಕರಣಗಳು ವರದಿಯಾಗಿದ್ದು, 2 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 4 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ, ಒಟ್ಟಾರೆ ಜಿಲ್ಲೆಯಲ್ಲಿ 484 ಪ್ರಕರಣಗಳಲ್ಲಿ 228 ಪ್ರಕರಣಗಳನ್ನು ತಿರಸ್ಕರಿಸಲಾಗಿದ್ದು, 251 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 5 ಪ್ರಕರಣಗಳು ಬಾಕಿ ಇರುವುದಾಗಿ ತಿಳಿಸಿದರು. ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಮಾತನಾಡಿ ಜಿಲ್ಲೆಯಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಹೆಚ್ಚಿನ ಮಳೆಯಾಗಿರುವುದರಿಂದ ಶೇಂಗ ಇಳುವರಿ ಕುಂಠಿತವಾಗಿದ್ದು, ಯಾವುದೇ ಬೆಳೆ ಹಾನಿಯಾಗಿರುವುದಿಲ್ಲವೆಂದು ಸಭೆಗೆ ತಿಳಿಸಿರುತ್ತಾರೆ.

**ಅ) ಕೃಷಿ ಸಿಂಚಾಯಿ ಯೋಜನೆ:**

ಕೃಷಿ ಸಿಂಚಾಯಿ ಯೋಜನೆ ಬಗ್ಗೆ ಪ್ರಸ್ತಾಪಿಸಿದಾಗ, ಅಧಿಕಾರಿಗಳು ಮಾತನಾಡಿ, ಈ ಯೋಜನೆಗೆ ರೂ.825.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.724.00ಲಕ್ಷ ವೆಚ್ಚ ಮಾಡಲಾಗಿದ್ದು, ರೂ.102.00ಲಕ್ಷ ಬಾಕಿಯಿದ್ದು, ಡಿಸೆಂಬರ್ ಅಂತ್ಯದೊಳಗೆ ಪೂರ್ಣ ವೆಚ್ಚ ಭರಿಸಲಾಗುವುದಾಗಿ ತಿಳಿಸಿರುತ್ತಾರೆ.

**ಆ) ಫಸಲ್ ಭೀಮಾ ಯೋಜನೆ:**

ಫಸಲ್ ಭೀಮಾ ಯೋಜನೆಯಡಿ ರೈತರ ನೋಂದಣಿ ಕಡಿಮೆಯಾಗಿರುವ ಬಗ್ಗೆ ಆಕ್ಷೇಪಿಸಿದಾಗ, ಅಧಿಕಾರಿಗಳು ಮಾತನಾಡಿ, ಕಳೆದ 2 ವರ್ಷದಿಂದ ನೋಂದಣಿಯಾದ ರೈತರಿಗೆ ಪರಿಹಾರ ಮೊತ್ತವು ಬಾರದಿರುವುದರಿಂದ ಹೆಚ್ಚಿನ ರೈತರು ನೋಂದಣಿ ಮಾಡಿಸಲು ನಿರಾಕರಿಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಮುಂದುವರೆದು, ಈ ವರ್ಷದಿಂದ ಬ್ಯಾಂಕ್ ಸಾಲ ಪಡೆದ ರೈತರು ಇಷ್ಟಪಟ್ಟಲ್ಲಿ ಮಾತ್ರ ಬೆಳೆ ವಿಮೆ ಯೋಜನೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

**ರೈತರು ಬೆಳೆ ವಿಮೆ ಮಾಡಿಸಲು ಹೆಚ್ಚಿನ ಪ್ರಚಾರ ನಡೆಸಿ, ಯೋಜನೆಯ ಅನುಷ್ಠಾನವನ್ನು ಯಶಸ್ವಿಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.**
**(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ)**

**2. ತೋಟಗಾರಿಕೆ ಇಲಾಖೆ:**

ಉಪ ನಿರ್ದೇಶಕರು ಮಾತನಾಡಿ, ತೋಟಗಾರಿಕೆ ಇಲಾಖೆಗೆ ಕೇಂದ್ರ ವಲಯ ಯೋಜನೆಯಡಿ ಬಿಡುಗಡೆಗೆ ಶೇ.97ರಷ್ಟು ಪ್ರಗತಿಯಾಗಿದೆ, ರಾಜ್ಯ ವಲಯ ಯೋಜನೆಯಡಿ ಶೇ.100ರಷ್ಟು ಪ್ರಗತಿಯಾಗಿದೆ, ಜಿಲ್ಲಾ ಪಂಚಾಯತ್ ಯೋಜನೆಯಡಿ ಶೇ.72ರಷ್ಟು ಪ್ರಗತಿಯಾಗಿದೆ, ಮುಂಗಾರಿನಲ್ಲಿ ಈರುಳ್ಳಿ ಬೆಳೆ 209081 ಹೆಕ್ಟೇರ್ ಬಿತ್ತನೆ ಆಗಿದ್ದು, 12900 ಹೆಕ್ಟೇರ್ ಬೆಳೆ ಹಾನಿ ಆಗಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದು ವಿವರಿಸಿರುತ್ತಾರೆ.

3. **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ**

ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಕಳೆದ ವರ್ಷ 72 ಲಕ್ಷ ಮಾನವ ದಿನ ಸೃಜನೆ ಮಾಡುವ ಗುರಿ ನಿಗಧಿಯಾಗಿದ್ದು, ಡಿಸೆಂಬರ್ ಮಾಹೆಗೆ ಶೇ.58.3 ಪ್ರಗತಿ ಸಾಧಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 75 ಲಕ್ಷ ಮಾನವ ದಿನ ಗುರಿ ನಿಗಧಿಯಾಗಿದ್ದು ಡಿಸೆಂಬರ್ ಮಾಹೆಗೆ ಶೇ 76.69 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ. ನಮ್ಮ ಜಿಲ್ಲೆ 16ನೇ ಸ್ಥಾನದಲ್ಲಿದೆ. 18–19ನೇ ಸಾಲಿನಲ್ಲಿ ಸಾಮಗ್ರಿ ವೆಚ್ಚ ಬಾಕಿ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಪೌಷ್ಠಿಕ ಕೈತೋಟ ಮತ್ತು ಇಂಗುಗುಂಡಿ ನಿರ್ಮಾಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಹಾಗೂ ಒಗ್ಗೂಡಿಸುವಿಕೆಯಡಿ ಸಾಮಾನ್ಯ ಅರಣ್ಯ ಇಲಾಖೆಯಲ್ಲಿ ಪಾಲಿಥೀನ್ ಬ್ಯಾಗ್‌ಗಳನ್ನು ಸರಬರಾಜು ಮಾಡುವಲ್ಲಿ ತೊಂದರೆಯಾದ ಪ್ರಯುಕ್ತ ಕಳೆದ ವರ್ಷ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲವೆಂಬ ಮಾಹಿತಿಯು ಸದರಿ ಸಭೆಯಲ್ಲಿ ವ್ಯಕ್ತವಾಗಿರುತ್ತದೆ.

4. **ಸಾಮಾಜಿಕ ಅರಣ್ಯ ಇಲಾಖೆ:**

ಇಲಾಖೆ ವತಿಯಿಂದ ನರೇಗಾ ಯೋಜನೆಯಡಿ ರಕ್ತಚಂದನ, ಶ್ರೀಗಂಧ, ಮಾವು, ಹೊಂಗೆ ಹಾಗೂ ಹಣ್ಣಿನ 10ಲಕ್ಷ ಗಿಡಗಳನ್ನು ಬೆಳೆಸಲಾಗಿದೆ, ಈ ವರ್ಷ ಜೂನ್, ಜುಲೈ ತಿಂಗಳಿನಲ್ಲಿ ಸರ್ಕಾರಿ ಜಮೀನು, ಸರ್ಕಾರಿ ಶಾಲೆಗಳು/ಕಾಲೇಜುಗಳ ಕ್ಯಾಂಪಸ್, ರಸ್ತೆ ಬದಿಗಳಲ್ಲಿ ಹಾಗೂ ಸುರಕ್ಷತೆ ಇರುವ ಹಾಗೂ ಗೇಟ್ ಹೊಂದಿರುವ ಶಾಲೆಗಳನ್ನು ಗುರುತಿಸಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

5. **ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ:**

ಯೋಜನೆಯನ್ನು ಪಂಚಾಯತ್ ರಾಜ್ ಇಂ.ವಿಭಾಗ, ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ಮಿತಿ ಕೇಂದ್ರದಿಂದ ಅನುಷ್ಠಾನಗೊಳಿಸಿದ್ದು, ಶೇ.90ರಷ್ಟು ಪ್ರಗತಿಯಾಗಿರುವ ಬಗ್ಗೆ ವರದಿಯನ್ನು ಮಂಡಿಸಿರುತ್ತಾರೆ.

6. **ಸ್ವಚ್ಛ ಭಾರತ್ ಮಿಷನ್ ಯೋಜನೆ:**

ಸದರಿ ಯೋಜನೆಯಡಿಯಲ್ಲಿ 2214.32ಲಕ್ಷ ಅನುದಾನ ಬಿಡುಗಡೆಯಾಗಿದ್ದು, 1547.07ಲಕ್ಷ ವೆಚ್ಚ ಮಾಡಿ, ಶೇ.70ರಷ್ಟು ಪ್ರಗತಿ ಸಾಧಿಸಲಾಗಿರುವುದಾಗಿ ತಿಳಿಸಿದರು.

7. **ರಾಜೀವ್ ಗಾಂಧಿ ವಸತಿ ಯೋಜನೆ:**

ಎಂಪಿಕ್ ಪ್ರಕಾರ 6296 ಗುರಿ ನಿಗದಿಪಡಿಸಿದ್ದು, 2441 ಮನೆಗಳು ಪೂರ್ಣಗೊಂಡಿವೆ. ಉಳಿದ ಮನೆಗಳು ವಿವಿಧ ಹಂತದಲ್ಲಿವೆ. ರಾಜೀವ್ ಗಾಂಧಿ ನಿಗಮದಿಂದ ಅನುದಾನ ಬಿಡುಗಡೆಯಾಗುವುದು ತಡವಾದ್ದರಿಂದ ಪ್ರಗತಿ ಕಡಿಮೆಯಾಗಿದೆ, ಈಗ ಅನುದಾನ ಬಿಡುಗಡೆಯಾಗುತ್ತಿದ್ದು, ಪ್ರಾರಂಭವಾಗದೇ ಇರುವ ಮನೆಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ

ನೀಡಲಾಗಿರುವುದಾಗಿ ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಇವರು ಸದರಿ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

**8. ನಗರ ವಸತಿ ಯೋಜನೆಗಳು**

**ಎ) ಬಿ.ಎಲ್.ಸಿ:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನುಮೋದನೆಗೊಂಡ ಮನೆಗಳ ಸಂಖ್ಯೆ 1753 ರಲ್ಲಿ ದಿನಾಂಕ 01-04-2019 ರಿಂದ 31-03-2020 ರವರೆಗೆ ನೀಡಿದ ವಾರ್ಷಿಕ ಗುರಿ 856 ರಲ್ಲಿ 221 ಮನೆಗಳು ಪೂರ್ಣಗೊಂಡಿದ್ದು 609 ಮನೆಗಳು ಪ್ರಗತಿಯಲ್ಲಿರುತ್ತದೆ, 26 ಮನೆಗಳು ನಾಯಕನಹಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನ್ಯಾಯಾಲಯ ಪ್ರಕರಣದಲ್ಲಿರುವುದರಿಂದ ಇನ್ನು ಪ್ರಾರಂಭವಾಗಿರುವುದಿಲ್ಲ. ಸದರಿ ಪ್ರಾರಂಭವಾಗದಿರುವ ಮನೆಗಳನ್ನು ಶೀಘ್ರದಲ್ಲಿ ಪ್ರಾರಂಭಿಸಲು ಹಾಗೂ ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಿದೆ.

**ಬಿ) ಎ.ಎಚ್.ಪಿ:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎ.ಎಚ್.ಪಿ ಯೋಜನೆಯಡಿ ಒಟ್ಟು ಅನುಮೋದನೆಗೊಂಡ ಮನೆಗಳ ಸಂಖ್ಯೆ 5481 ಇದರಲ್ಲಿ ಚಳ್ಳಕೆರೆ ನಗರಸಭೆಗೆ 1008 ಜಿ+2 ಮಾದರಿ ಮನೆಗಳ ನಿರ್ಮಾಣ ಮಾಡಲು ಹಾಗೂ ಚಿತ್ರದುರ್ಗ ನಗರಸಭೆಗೆ 1001 ಜಿ+2 ಮಾದರಿ ಮನೆಗಳ ನಿರ್ಮಾಣ ಮಾಡಲು ಟೆಂಡರ್ ಕರೆಯಲಾಗಿರುತ್ತದೆ. ಹಿರಿಯೂರು ನಗರಸಭೆಗೆ 624 ಮತ್ತು 1248 ಜಿ+2 ಮಾದರಿ ಮನೆಗಳ ನಿರ್ಮಾಣ ಮಾಡಲು ಡಿ.ಪಿ.ಆರ್ ತಯಾರಿಸಿದ್ದು ಟೆಂಡರ್ ಕರೆಯಲು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ರವರಿಗೆ ಡಿ.ಪಿ.ಆರ್ ಸಲ್ಲಿಸಲಾಗಿರುತ್ತದೆ.

ಹೊಳಲ್ಕೆರೆ ಪಟ್ಟಣ ಪಂಚಾಯ್ತಿಗೆ 173 ಮತ್ತು 627 ಜಿ.ಎಫ್ ಮಾದರಿ ಮನೆಗಳ ನಿರ್ಮಾಣ ಮಾಡಲು ಈ ಹಿಂದೆ ಡಿ.ಪಿ.ಆರ್ ಸಲ್ಲಿಸಲಾಗಿದ್ದು, ಪ್ರಯುಕ್ತ ಕಾರ್ಯಪಾಲಕ ಅಭಿಯಂತರರು ರಾ.ಗಾ.ವ.ನಿ.ನಿ ಬೆಂಗಳೂರು ರವರು ಸ್ಥಳ ಪರಿಶೀಲನೆ ನಡೆಸಿ ಜಿ+2 ಮಾದರಿ ಮನೆಗಳ ನಿರ್ಮಾಣ ಮಾಡಲು ಪರಿಷ್ಕೃತ ಡಿ.ಪಿ.ಆರ್ ಸಲ್ಲಿಸಲು ಆರ್.ಜಿ.ಆರ್.ಹೆಚ್.ಸಿ.ಎಲ್ ಕ್ರಮ ವಹಿಸಿರುತ್ತಾರೆಂದು ಸಭೆಯಲ್ಲಿ ತಿಳಿಸಲಾಗಿದ್ದು, ಪರಿಷ್ಕೃತ ಡಿ.ಪಿ.ಆರ್ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

**ಹೊಸದುರ್ಗ** ಪುರಸಭೆಗೆ 800 ಜಿ+2 ಮಾದರಿ ಮನೆಗಳ ನಿರ್ಮಾಣ ಮಾಡುವ ಸಲುವಾಗಿ ಕಾರ್ಯಪಾಲಕ ಅಭಿಯಂತರರು ರಾ.ಗಾ.ವ.ನಿ.ನಿ ಬೆಂಗಳೂರು ರವರು ಸ್ಥಳ ಪರಿಶೀಲನೆ ನಡೆಸಿ ಉದ್ದೇಶಿತ ಜಮೀನಿನ ಸ್ಥಳ ತಾಂತ್ರಿಕವಾಗಿ ಸದೃಢವಾಗಿಲ್ಲವೆಂದು ಬದಲಾಗಿ ಬೇರೆ ಜಮೀನನ್ನು ಗುರುತಿಸಲು ಸೂಚಿಸಿರುತ್ತಾರೆ, ಪ್ರಯುಕ್ತ ಬೇರೆ ಜಮೀನನ್ನು ಗುರುತಿಸಲು ಕ್ರಮವಹಿಸಲಾಗುತ್ತಿದೆ.

ನಗರ ವ್ಯಾಪ್ತಿಯ ವಸತಿ ಯೋಜನೆ ಬಗ್ಗೆ ಪ್ರಸ್ತಾಪಿಸಿದಾಗ, ಅದರಂತೆ **ಸಿ.ಎಲ್.ಎಸ್.ಎಸ್** ವಸತಿ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ

ಸಂಬಂಧ ಪಟ್ಟ ಬ್ಯಾಂಕ್‌ಗಳಿಗೆ 2845 ಅರ್ಜಿಗಳು ಸಲ್ಲಿಕೆಯಾಗಿದ್ದು, ಬ್ಯಾಂಕ್‌ಗಳಿಂದ 2505 ಅರ್ಜಿಗಳು ತಿರಸ್ಕೃತಗೊಂಡಿದ್ದು, ಉಳಿದಂತೆ 375 ಫಲಾನುಭವಿಗಳಿಗೆ ಸದರಿ ಯೋಜನೆಯಡಿ ಅನುದಾನ ಬಿಡುಗಡೆಯಾಗಿರುತ್ತದೆ. ಮುಂದುವರೆದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬ್ಯಾಂಕಿನ ಸಹಯೋಗದೊಂದಿಗೆ ಲೋನ್ ಮೇಳ ನಡೆಸಲು ಕ್ರಮವಹಿಸಿ ಪ್ರಗತಿಯನ್ನು ನಿರ್ವಹಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

**9. ಸಾರ್ವಜನಿಕ ಶಿಕ್ಷಣ ಇಲಾಖೆ**

ಮಧ್ಯಾಹ್ನದ ಉಪಾಹಾರ ಯೋಜನೆ ಬಗ್ಗೆ ಪ್ರಸ್ತಾಪಿಸಿದಾಗ, ಅಧಿಕಾರಿಗಳು ಮಾತನಾಡಿ, ಸರ್ಕಾರದ ಆದೇಶದ ಪ್ರಕಾರ ಜೂನ್, ಜುಲೈ ತಿಂಗಳಿನಲ್ಲಿ 53 ದಿನಗಳಿಗೆ 1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಯ ಮಕ್ಕಳಿಗೆ ಅಕ್ಕಿ, ಗೋಧಿ ಹಾಗೂ ಬೇಳೆಯನ್ನು ವಿತರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಹೆಚ್ಚುವರಿ ಬೇಳೆಗೆ ಇನ್‌ಡೆಂಟ್ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಒಂದು ವಾರದೊಳಗೆ ನಿಗದಿಪಡಿಸಿದಂತೆ ಎಲ್ಲಾ ಮಕ್ಕಳಿಗೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಿ, ಶೇ.100ರಷ್ಟು ಪ್ರಗತಿ ಸಾಧಿಸಲು ಸೂಚಿಸಲಾಗಿರುತ್ತದೆ. **(ಕ್ರಮ: ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಕಾರ್ಯಕ್ರಮ)**

1 ರಿಂದ 9ನೇ ತರಗತಿಯ ಮಕ್ಕಳು ಯಾವ ರೀತಿ ನಿರಂತರ ಕಲಿಕೆ ಮಾಡುತ್ತಿದ್ದಾರೆಂದು ಪ್ರಶ್ನಿಸಲಾಯಿತು. ವಿಶೇಷವಾಗಿ 10ನೇ ತರಗತಿಯ ಮಕ್ಕಳ ಬಗ್ಗೆ ಗಮನ ನೀಡಲು ಸೂಚಿಸಿದರು. ಈ ಬಗ್ಗೆ ಹೆಚ್ಚಿನ ವಿವರವನ್ನು ರಾಜ್ಯ ಕಚೇರಿಗೆ ಸಲ್ಲಿಸುವಂತೆ ತಿಳಿಸಲಾಯಿತು. **'ಓದುವ ಬೆಳಕು'** ಕಾರ್ಯಕ್ರಮದಲ್ಲಿ ಎಲ್ಲಾ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಿರ್ದೇಶಿಸಿದೆ. ಅಗತ್ಯವಿದ್ದಲ್ಲಿ ಪುಸ್ತಕಗಳನ್ನು ಕೊಡಿಸಿ, ಎಲ್ಲಾ ಮಕ್ಕಳು ಓದುತ್ತಿದ್ದಾರೆಯೇ ಎಂದು ಪರಿಶೀಲಿಸಬೇಕು, ಮುಂದಿನ ಸಭೆಯಲ್ಲಿ ಈ ಬಗ್ಗೆ ಮಾಹಿತಿ ಪ್ರಗತಿ ವಿವರ ನೀಡಬೇಕೆಂದು ನಿರ್ದೇಶಿಸುವುದರ ಜೊತೆಗೆ ಮಕ್ಕಳ ನಿರಂತರ ಕಲಿಕೆಗೆ ಸಾಂಕ್ರಾಮಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಪೂರಕ ಅವಕಾಶಗಳನ್ನು ನಿರ್ಮಿಸಲು ಉಪನಿರ್ದೇಶಕರು ಆಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತಿಳಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, ಹಿಂದುಳಿದ ಪ್ರದೇಶದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಟ್ಯಾಬ್ ಕೊಡಿಸಲು ತೀರ್ಮಾನಿಸಿದ್ದು, ಸರ್ಕಾರಿ ಶಾಲೆಯ ಎಸ್.ಎಸ್.ಎಲ್.ಸಿ. ಮಕ್ಕಳು ಎಷ್ಟು ಜನ ಇದ್ದಾರೆ ಎಂದು ಪರಿಶೀಲಿಸಿ ಪಟ್ಟಿ ನೀಡಲು ಡಿಡಿಪಿಐ ರವರಿಗೆ ಸೂಚಿಸಲಾಗಿದೆಯೆಂದು ತಿಳಿಸಿದರು.

ಶಾಲೆಯಿಂದ ಹೊರಗುಳಿದ 244 ಮಕ್ಕಳನ್ನು ಗುರ್ತಿಸಲಾಗಿದ್ದು, ಇದರಲ್ಲಿ 158 ಮಕ್ಕಳನ್ನು ಮುಖ್ಯ ವಾಹಿನಿಗೆ ತರಲಾಗಿದೆ, 25 ಮಕ್ಕಳು ಒರಿಸ್ಸಾ ರಾಜ್ಯದವರಾಗಿದ್ದು, ತಮ್ಮ ಊರಿಗೆ ಮರಳಿದ್ದಾರೆ, 8 ಮಕ್ಕಳು ರಾಯಚೂರು ಜಿಲ್ಲೆಯಿಂದ ವಲಸೆ ಬಂದಿದ್ದು, ಪುನ: ಸ್ವಂತ ಸ್ಥಳಕ್ಕೆ ಮರಳಿದ್ದಾರೆ. ಹೊಸದುರ್ಗ ತಾ:ನಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿ ನಿಮಿತ್ತ ತೆಲಂಗಾಣ ರಾಜ್ಯದಿಂದ ವಲಸೆ ಬಂದಿದ್ದ ಮಕ್ಕಳು ಸ್ವಂತ ಸ್ಥಳಕ್ಕೆ ವಾಪಸ್ಸು ಹೋಗಿದ್ದು, ಕ್ರಮ ವಹಿಸಲು ಬಿ.ಇ.ಓ.ಗಳಿಗೆ ಪತ್ರ ಬರೆಯಲಾಗಿದೆ ಎಂದು ಉಪನಿರ್ದೇಶಕರು ತಿಳಿಸಿರುತ್ತಾರೆ. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ, ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಇನ್ನೊಂದು ಪತ್ರವನ್ನು

ಬರೆದು ಮಕ್ಕಳ ಮಾಹಿತಿಯನ್ನು ಟ್ರೇಸ್‌ಔಟ್ ಮಾಡಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. **(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

**10. ಕಂದಾಯ ಇಲಾಖೆ:**

ಮಾನ್ಯ ಜಿಲ್ಲಾಧಿಕಾರಿಗಳು, ರುದ್ರಭೂಮಿ ಮಂಜೂರಾತಿ ಪ್ರಗತಿ ವಿವರವನ್ನು ನೀಡುತ್ತಾ, ಜಿಲ್ಲೆಯಲ್ಲಿ ಒಟ್ಟು 1245 ಗ್ರಾಮಗಳಿದ್ದು, 786 ಗ್ರಾಮಗಳಲ್ಲಿ ಸ್ಮಶಾನದ ಭೂಮಿ ಹೊಂದಿದ್ದು, ಇನ್ನೂ 459 ಗ್ರಾಮಗಳು ಬಾಕಿ ಇರುವುದಾಗಿ ತಿಳಿಸಿದರು. ರೈತರ ಸಾಲ ಮನ್ನಾ ಯೋಜನೆಯಡಿ, ವಾಣಿಜ್ಯ ಬ್ಯಾಂಕ್ ನಿಂದ ರೂ.77.96ಲಕ್ಷ ಹಾಗೂ ಸಹಕಾರ ವಲಯದಿಂದ ರೂ.18.58ಲಕ್ಷ ಬಿಡುಗಡೆಗೆ ಬಾಕಿ ಇರುವುದಾಗಿ ತಿಳಿಸಿದರು.

ಸಾಮಾಜಿಕ ಭದ್ರತೆ ಯೋಜನೆಗಳು ವಿವಿಧ ಪಿಂಚಣಿಗಳ ಮಂಜೂರಾತಿ ಯೋಜನೆಯ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ವೃದ್ಧಾಪ್ಯ ವೇತನಕ್ಕೆ ಒಟ್ಟು 9072, ವಿಧವಾ ವೇತನಕ್ಕೆ 4187, ಅಂಗವಿಕಲ ವೇತನಕ್ಕೆ 2745, ಮನಸ್ವಿನಿ ಯೋಜನೆಯಡಿ 406, ಮೈತ್ರಿ ಯೋಜನೆಯಡಿ 10, ಸಂಧ್ಯಾ ಸುರಕ್ಷಾ ಯೋಜನೆಯಡಿ 1654473, ಮೃತ ರೈತ 11 ಪತ್ನಿಗೆ ವಿಧವಾ ವೇತನಕ್ಕೆ 27 ಲಕ್ಷ ವಿತರಿಸಲಾಗಿದೆ ಎಂದು ತಿಳಿಸಿದರು.

ಎಂ.ಎಲ್.ಎ.-ಲ್ಯಾಡ್ ಪ್ರಗತಿ ವಿವರ ನೀಡುತ್ತಾ, 2020-21ರಲ್ಲಿ ರೂ.350.00ಲಕ್ಷ ಬಿಡುಗಡೆಯಾಗಿದ್ದು, ನವೆಂಬರ್ ಅಂತ್ಯಕ್ಕೆ 349.23ಲಕ್ಷ ವೆಚ್ಚ ಮಾಡಲಾಗಿದೆ, 35.00ಲಕ್ಷ ಆಡಳಿತಾತ್ಮಕ ಅನುಮೋದನೆ ಮಾಡಲು ಬಾಕಿಯಿದೆ, ಕೆ.ಆರ್.ಐ.ಡಿ.ಎಲ್., ನಿರ್ಮಿತಿ ಕೇಂದ್ರ, ಲೋಕೋಪಯೋಗಿ ಇಲಾಖೆಯಿಂದ ಬಾಕಿ ಇರುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ/ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯಗಳ ನಿವೇಶನಗಳ ಮಂಜೂರಾತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 74 ನಿವೇಶನಗಳಲ್ಲಿ 73 ಮಂಜೂರಾತಿಯಾಗಿದ್ದು, 1 ಬಾಕಿ ಇದೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ 50 ನಿವೇಶನಗಳಲ್ಲಿ 49 ಮಂಜೂರಾತಿಯಾಗಿದ್ದು, 1 ಬಾಕಿ ಇದೆ ಎಂದು ತಿಳಿಸಿರುತ್ತಾರೆ.

ಕಂದಾಯ ನ್ಯಾಯಾಲಯಗಳ ಪ್ರಕರಣಗಳ ವಿಲೇವಾರಿಯಲ್ಲಿ 2 ವರ್ಷ ಮೇಲ್ಪಟ್ಟ 1654 ಪ್ರಕರಣಗಳು ಇರುವುದಾಗಿ ತಿಳಿಸಿದರು. ಚಿತ್ರದುರ್ಗ ಪೋಡಿ ಮುಕ್ತ ಅದಾಲತ್‌ನಲ್ಲಿ ಬಾಕಿಯಿರುವ 109 ಗ್ರಾಮಗಳಲ್ಲಿ 13330 ಬ್ಲಾಕ್‌ಗಳಲ್ಲಿ ಅಭಿಯಾನವು ಮುಕ್ತಾಯಗೊಂಡಿರುವುದಾಗಿ ತಿಳಿಸಿದರು. ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಸೌಲಭ್ಯ ನೀಡುವ ಯೋಜನೆಯಡಿ, ಒಟ್ಟು 7458 ಫಲಾನುಭವಿಗಳಿಗೆ 6,98,26,699 ಜಮಾ ಮಾಡಲಾಗಿದೆ ಎಂಬ ಅಂಶ ತಿಳಿದುಬಂದಿದೆ.

ನ್ಯಾಯಾಲಯ ಪ್ರಕರಣಗಳ ವಿಲೇವಾರಿ ಬಗ್ಗೆ ಪ್ರಸ್ತಾಪಿಸಿದಾಗ, ಅಧಿಕಾರಿಗಳು ಮಾತನಾಡಿ, ಚಿತ್ರದುರ್ಗ ಪ್ರಕರಣಗಳ ವಿಲೇವಾರಿಯಲ್ಲಿ 13ನೇ ಸ್ಥಾನದಲ್ಲಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಬಾಕಿ ಇರುವ ಭೂಮಾಪನದ ಬಗ್ಗೆ ಪ್ರಸ್ತಾಪಿಸಿದಾಗ, ಅಧಿಕಾರಿಗಳು, 4275 ಪ್ರಕರಣಗಳಲ್ಲಿ 8187

ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿರುವುದನ್ನು ಮಂಡನೆಯಲ್ಲಿ ಗುರುತಿಸಲಾಯಿತು.

**11. ಕಾರ್ಮಿಕ ಇಲಾಖೆ:**

ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಶೈಕ್ಷಣಿಕ ಧನ ಸಹಾಯ, ಮದುವೆ ಧನ ಸಹಾಯ, ಹೆರಿಗೆ ಧನ ಸಹಾಯ, ವೈದ್ಯಕೀಯ/ಪ್ರಮುಖ ವೈದ್ಯಕೀಯ ಧನ ಸಹಾಯ ಹಾಗೂ ತಾಯಿ ಮಗು ಸಹಾಯ ಹಸ್ತ ಸೇರಿ ಒಟ್ಟು 7458 ಫಲಾನುಭವಿಗಳ ಖಾತೆಗೆ 6,98,26,699 ಜಮಾ ಮಾಡಲಾಗಿರುವುದಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ ಅಗಸ ಮತ್ತು ಕ್ಷೌರಿಕ ವೃತ್ತಿಯ ಕಾರ್ಮಿಕರಿಗೆ ಕೋವಿಡ್–19 ಪ್ರಯುಕ್ತ ರೂ.5000ಗಳ ಪರಿಹಾರ ನೀಡುವಲ್ಲಿ ಒಟ್ಟು 548 ಅರ್ಜಿಗಳು ಬಂದಿದ್ದು, 126 ಅರ್ಜಿಗಳು ತಿರಸ್ಕೃತಗೊಂಡಿದ್ದು, 4518 ಜನರಿಗೆ ಪರಿಹಾರ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು.

**12. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:**

ಹೊಸ ಪಡಿತರ ಚೀಟಿಗಳನ್ನು ಕೋರಿ ಜಿಲ್ಲೆಯಿಂದ ಒಟ್ಟು 10499 ಅರ್ಜಿಗಳನ್ನು ಸಲ್ಲಿಸಲಾಗಿದ್ದು, 7659 ಅರ್ಜಿಗಳು ಅನುಮೋದನೆಗೊಂಡಿದ್ದು, 9628 ಅರ್ಜಿಗಳನ್ನು ವಿಲೇಗೊಳಿಸಿದ್ದು, 871 ಅರ್ಜಿಗಳು ಬಾಕಿಯಿರುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ.

**13. ನಗರೋತ್ಥಾನ (ಮುನಿಸಿಪಾಲಿಟಿ)–3 ರ ಯೋಜನೆ:–**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)–3 ರ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರು ಮಾಡಲಾಗಿರುತ್ತದೆ. ಪ್ರಮುಖಾಂಶಗಳು ಹೀಗಿವೆ.

| ಕ್ರ ಸಂ. | ಸ್ಥಳೀಯ ಸಂಸ್ಥೆ ಹೆಸರು | ಕ್ರಿಯಾ ಯೋಜನೆ ಅನುಮೋದನೆ ನೀಡಿದ ಮೊತ್ತ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಪ್ರಗತಿ | ಆವರ್ತಕ ವೆಚ್ಚ | ಶೇ. ಆರ್ಥಿಕ ಸಾಧನೆ |
|---|---|---|---|---|---|---|
| 1 | ಚಿತ್ರದುರ್ಗ ನಗರಸಭೆ | 2975.00 | 33 | 1 | 2642.30 | 88.82 |
| 2 | ಚಳ್ಳಕೆರೆ ನಗರಸಭೆ | 2125.00 | 17 | 4 | 1350.08 | 63.53 |
| 3 | ಹಿರಿಯೂರು ನಗರಸಭೆ | 2125.00 | 17 | 8 | 1157.98 | 54.49 |

| | | | | | | |
|---|---|---|---|---|---|---|
| 4 | **ಹೊಸದುರ್ಗ ಪುರಸಭೆ** | **637.50** | **10** | **5** | **375.96** | 58.97 |
| 5 | **ಹೊಳಲ್ಕೆರೆ ಪ.ಪಂ** | **170.00** | **8** | **1** | **154.41** | 90.83 |
| 6 | **ಮೊಳಕಾಲ್ಮುರು ಪ.ಪಂ** | **170.00** | **4** | **0** | **161.25** | 94.85 |
| 7 | **ನಾಯಕನಹಟ್ಟಿ ಪ.ಪಂ** | **425.00** | **9** | **3** | **264.30** | 62.19 |
| | **ಒಟ್ಟು** | **8627.50** | **98** | **22** | **6106.28** | 70.78 |

ಒಟ್ಟು ಮೊತ್ತ ರೂ. 8827.50 ಲಕ್ಷಗಳಿಗೆ 98 ಕಾಮಗಾರಿಗಳು ಮಂಜೂರಾಗಿದ್ದು, ಸದರಿ ಯೋಜನೆಯಲ್ಲಿ 22 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈವರೆವಿಗೂ ಅನುದಾನ ಬಳಕೆ ಮಾಡಿದ ಮೊತ್ತ ರೂ.6106.28 ಲಕ್ಷಗಳಲ್ಲಿ ಶೇ.70.78 ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ. 5 ಕಾಮಗಾರಿಗಳು ಹಿರಿಯೂರು ನಗರಸಭೆಯ ಮೂರು ಕಾಮಗಾರಿಗಳು ಹೊಸದುರ್ಗ ಪುರಸಭೆಯ ಒಂದು ಕಾಮಗಾರಿ ಮತ್ತು ಹೊಳಲ್ಕೆರೆ ಪಟ್ಟಣ ಪಂಚಾಯಿತಿಯ ಒಂದು ಕಾಮಗಾರಿಯನ್ನು ಪರಿಷ್ಕೃತ ಕ್ರಿಯಾ ಯೋಜನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಂದ ಇತ್ತೀಚೆಗೆ ಅನುಮೋದನೆ ಪಡೆಯಲಾಗಿದ್ದು, 3 ಕಾಮಗಾರಿಗಳು ಚಳ್ಳಕೆರೆ ನಗರಸಭೆ ಕಚೇರಿ ಕಟ್ಟಡ ಪರಿಷ್ಕೃತ ಅಂದಾಜು ಪತ್ರಿಕೆ ಮಾನ್ಯ ನಿರ್ದೇಶಕರ ಕಾರ್ಯಾಲಯದಿಂದ ಅನುಮೋದನೆ ಪತ್ರ ವ್ಯವಹಾರದಲ್ಲಿದ್ದು, ನಾಯಕನಹಟ್ಟಿ ಪಟ್ಟಣ ಪಂಚಾಯಿತಿ ವಾಣಿಜ್ಯ ಸಂಕೀರ್ಣ ಕಾಮಗಾರಿ, ಜಿ.ಎಲ್.ಎಸ್.ಆರ್ ಪಂಪ್‌ಹೌಸ್ ಕಾಮಗಾರಿ, ನ್ಯಾಯಾಲಯ ಪ್ರಕರಣ, ಸ್ಥಳದ ತೊಂದರೆಯಿಂದ ವಿಳಂಭವಾಗಿರುತ್ತದೆ. ಇನ್ನುಳಿದ 14 ಕಾಮಗಾರಿಗಳು ಡಾಂಬರೀಕರಣ ಕಾಮಗಾರಿಯಾಗಿದ್ದು, ಮಳೆಗಾಲ ಅವಧಿ ಮತ್ತು ಎಂ.ಎಲ್.ಸಿ ನೀತಿ ಸಂಹಿತೆ ದಿನಾಂಕ: 13/11/2020 ರವರೆಗೆ ಇರುವುದರಿಂದ ವಿಳಂಭವಾಗಿದ್ದು, ಈಗ ಪ್ರಾರಂಭವಾಗಿದ್ದು ಈ ತಿಂಗಳ ಅಂತ್ಯದವರೆಗೆ 5 ಕಾಮಗಾರಿಗಳು ಜನವರಿ ಅಂತ್ಯದೊಳಗೆ 9 ಕಾಮಗಾರಿಗಳು ಮುಕ್ತಾಯ ಮಾಡಲು ಯೋಜನಾ ಸಮಾಲೋಚಕರಿಗೆ ನಗರ ಸ್ಥಳೀಯ ಸಂಸ್ಥೆಯ ಅಭಿಯಂತರರಿಗೆ ನಿರ್ದೇಶಿಸಲಾಗಿದೆ ಎಂದು ಸಭೆಯಲ್ಲಿ ವಿವರಿಸಲಾಯಿತು. ಬಾಕಿ ಇರುವ ಕಾಮಗಾರಿಗಳನ್ನು ತುರ್ತು ಅನುಷ್ಠಾನಗೊಳಿಸಲು ತಿಳಿಸಲಾಗಿದೆ.

**(ಕ್ರಮ:-ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು / ಯೋಜನಾ ಸಮಾಲೋಚಕರು)**

**14. 14ನೇ ಹಣಕಾಸು ಯೋಜನೆ 2019-20:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ 14ನೇ ಹಣಕಾಸು ಯೋಜನೆಯಡಿಯಲ್ಲಿ 2019-20ನೇ ಸಾಲಿಗೆ ಮೊತ್ತ ರೂ. 2295.00 ಲಕ್ಷಗಳು ಹಂಚಿಕೆಯಾಗಿದ್ದು, 276

ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಸದರಿ ಸಾಲಿನಲ್ಲಿ ರೂ. 2296.32 ಲಕ್ಷ ಬಿಡುಗಡೆಯಾಗಿದ್ದು, ರೂ. 1303.00ಲಕ್ಷಗಳು ಖರ್ಚಾಗಿರುತ್ತದೆ. ಸದರಿ ಅನುದಾನದಲ್ಲಿ 201 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 51 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇನ್ನುಳಿದ 25 ಕಾಮಗಾರಿಗಳಲ್ಲಿ ಚಿತ್ರದುರ್ಗ ನಗರಸಭೆಯ 15, ಹಿರಿಯೂರು ನಗರಸಭೆಯ 6, ಹೊಸದುರ್ಗ ಪುರಸಭೆ 4 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಎಂ.ಎಲ್.ಸಿ. ನೀತಿ ಸಂಹಿತೆಯಿಂದ ವಿಳಂಭವಾಗಿರುತ್ತದೆ ಎಂದು ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ರವರು ಸಭೆಯಲ್ಲಿ ತಿಳಿಸಿದರು. ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಹಾಗೂ ಸರ್ಕಾರದ ಮಾರ್ಗಸೂಚಿಯಂತೆ ಅನುಮೋದನೆ ತೆಗೆದುಕೊಳ್ಳಲು ಕ್ರಮವಹಿಸಲು ಸೂಚಿಸಿದರು.

**(ಕ್ರಮ:- ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು)**

**15. 15ನೇ ಹಣಕಾಸು ಯೋಜನೆ 2020-21:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ 15ನೇ ಹಣಕಾಸು ಯೋಜನೆಯಡಿಯಲ್ಲಿ 2020-21ನೇ ಸಾಲಿಗೆ ಮೊತ್ತ ರೂ. 2277.00 ಲಕ್ಷಗಳು ಹಂಚಿಕೆಯಾಗಿದ್ದು, 207 ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ದಿನಾಂಕ: 26/08/2020 ರಿಂದ 28/09/2020 ರೊಳಗಾಗಿ ಕ್ರಿಯಾ ಯೋಜನೆ ನೀರು ನಿರ್ವಹಣೆಗೆ ರೂ. 31.73 ಲಕ್ಷ ಮತ್ತು ಪೂರಕ ದಾಖಲೆ ನೀಡಲು ಹಿರಿಯೂರು, ಹೊಸದುರ್ಗ ಮತ್ತು ನಾಯಕನಹಟ್ಟಿ ಸ್ಥಳೀಯ ಸಂಸ್ಥೆಗಳಿಗೆ ರೂ. 140.85 ಲಕ್ಷಗಳನ್ನು ತಡೆಹಿಡಿದು ಕ್ರಿಯಾ ಯೋಜನೆ ಆಗ್ನೇಯ ಪದವೀಧರ ಕ್ಷೇತ್ರ ಚುನಾವಣೆ ನೀತಿ ಸಂಹಿತೆ ಬರುವುದರೊಳಗಾಗಿ 207 ಕಾಮಗಾರಿಗಳಿಗೆ ನೀಡಿರುವಂತೆ 29 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. 178 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಇರುತ್ತದೆ. ದಿನಾಂಕ: 29/09/2020 ರಿಂದ 13/11/2020 ರವರೆಗೆ ಆಗ್ನೇಯ ಪದವೀಧರ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರಯುಕ್ತ ಟೆಂಡರ್ ಪ್ರಚುರಪಡಿಸಿರುವುದಿಲ್ಲ. ದಿನಾಂಕ: 14/11/2020 ರಂದು ಪ್ರಚುರಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಸಭೆಯಲ್ಲಿ ತಿಳಿಸಿದರು. ಬಾಕಿ ಕ್ರಿಯಾ ಯೋಜನೆ ಅನುಮೋದನೆ ನೀಡುವ, ಪ್ರಗತಿಯಲ್ಲಿರುವ ಕಾಮಗಾರಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಇರುವ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸೂಚಿಸಿದರು.

**(ಕ್ರಮ:- ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು)**

**16. ಎಸ್.ಎಫ್.ಸಿ ಕುಡಿಯುವ ನೀರು ಯೋಜನೆ 2020-21:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ 2020-21ನೇ ಸಾಲಿಗೆ ಮೊತ್ತ ರೂ. 28.75 ಲಕ್ಷಗಳು ಹಂಚಿಕೆಯಾಗಿದ್ದು, 7 ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಸದರಿ ಸಾಲಿನಲ್ಲಿ ರೂ. 28.75 ಲಕ್ಷ ಬಿಡುಗಡೆಯಾಗಿದ್ದು, ಸದರಿ ಮೊತ್ತದಲ್ಲಿ ರೂ. 12.00 ಲಕ್ಷ

ಬಳಕೆ ಮಾಡಲಾಗಿದ್ದು, ಉಳಿದ ಮೊತ್ತ ರೂ. 16.75 ಲಕ್ಷಗಳು ಇರುತ್ತದೆ. ಸದರಿ ಮೊತ್ತಕ್ಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದ್ಯಕ್ಕೆ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ ಎಂದು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಸಭೆಯಲ್ಲಿ ವಿವರಿಸಿದರು. ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

**(ಕ್ರಮ:– ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು)**

**17. ಎಸ್.ಎಫ್.ಸಿ ಮುಕ್ತನಿಧಿ 2019–20:–**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿಯಲ್ಲಿ 2019–20ನೇ ಸಾಲಿಗೆ ಮೊತ್ತ ರೂ. 1323.00 ಲಕ್ಷಗಳು ಹಂಚಿಕೆಯಾಗಿದ್ದು, 164 ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಸದರಿ ಸಾಲಿನಲ್ಲಿ ರೂ.1323.00 ಲಕ್ಷ ಬಿಡುಗಡೆಯಾಗಿದ್ದು, ರೂ.808.00 ಲಕ್ಷಗಳು ಖರ್ಚಾಗಿರುತ್ತದೆ. ಸದರಿ ಅನುದಾನದಲ್ಲಿ 115 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಬಾಕಿ ಕಾಮಗಾರಿಗಳಲ್ಲಿ ಚಿತ್ರದುರ್ಗ ನಗರಸಭೆಯ 5, ಚಳ್ಳಕೆರೆ ನಗರಸಭೆ 3, ಹಿರಿಯೂರು ನಗರಸಭೆಯ 18, ಹೊಸದುರ್ಗ ಪುರಸಭೆ 9, ಹೊಳಲ್ಕೆರೆ ಪ.ಪಂ. 5, ಮೊಳಕಾಲ್ಮುರು ಪ.ಪಂ 5 ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯಲ್ಲಿ 4 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಎಂದು ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಸಭೆಯಲ್ಲಿ ತಿಳಿಸಿದರು. ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

**(ಕ್ರಮ:– ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು)**

**18. ಎಸ್.ಎಫ್.ಸಿ ಮುಕ್ತನಿಧಿ 2020–21:–**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿಯಲ್ಲಿ 2020–21ನೇ ಸಾಲಿಗೆ ಮೊತ್ತ ರೂ. 488.00 ಲಕ್ಷಗಳು ಹಂಚಿಕೆಯಾಗಿದ್ದು, 46 ಕಾಮಗಾರಿಗಳು ಅನುಮೋದನೆಯಾಗಿರುತ್ತದೆ. ಸದರಿ ಸಾಲಿನಲ್ಲಿ ರೂ. 173.00 ಲಕ್ಷ ಬಿಡುಗಡೆಯಾಗಿದ್ದು, ರೂ. 31.00 ಲಕ್ಷಗಳು ಖರ್ಚಾಗಿರುತ್ತದೆ. ಸದರಿ ಅನುದಾನದಲ್ಲಿ 3 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಬಾಕಿ ಕಾಮಗಾರಿಗಳಲ್ಲಿ ಚಿತ್ರದುರ್ಗ ನಗರಸಭೆಯ 13, ಚಳ್ಳಕೆರೆ ನಗರಸಭೆ 4, ಹೊಳಲ್ಕೆರೆ ಪ.ಪಂ. 7, ಮೊಳಕಾಲ್ಮುರು ಪ.ಪಂ 15 ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಯಲ್ಲಿ 1 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಎಂದು ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶರವರು ಸಭೆಯಲ್ಲಿ ತಿಳಿಸಿದರು ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ತಿಳಿಸಲಾಯಿತು.

**(ಕ್ರಮ:– ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್ ಮತ್ತು ಪೌರಾಯುಕ್ತರು / ಮುಖ್ಯಾಧಿಕಾರಿಗಳು)**

**19. ಸ್ವಚ್ಛ ಭಾರತ್ ಮಿಷನ್:-**

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ವಚ್ಛ ಸರ್ವೇಕ್ಷಣಾ 2020 ರಲ್ಲಿ ಹೊಳಲ್ಕೆರೆ ಪಟ್ಟಣ ಪಂಚಾಯಿತಿಯು ದಕ್ಷಿಣ ಭಾರತದಲ್ಲಿ 5ನೇ ಸ್ಥಾನ ಪಡೆದಿರುತ್ತದೆ. 11,844 ವೈಯಕ್ತಿಕ ಶೌಚಾಲಯಗಳ ಗುರಿಯಿದ್ದು, ಅದರಲ್ಲಿ 11,309 ವೈಯಕ್ತಿಕ ಶೌಚಾಲಯಗಳು ನಿರ್ಮಾಣವಾಗಿರುತ್ತದೆ. 7 ನಗರ ಸ್ಥಳೀಯ ಸಂಸ್ಥೆಗಳ ಡಿ.ಪಿ.ಆರ್‌ಗಳಲ್ಲಿ 6 ಡಿ.ಪಿ.ಆರ್‌ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. 6 ನಗರ ಸ್ಥಳೀಯ ಸಂಸ್ಥೆಗಳು 80 ಸಿವಿಲ್ ಕಾಮಗಾರಿಗಳ ಅಂದಾಜು ಮೊತ್ತ ರೂ. 833.47 ಲಕ್ಷಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. 13 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 67 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. 7 ನಗರ ಸ್ಥಳೀಯ ಸಂಸ್ಥೆಗಳಲ್ಲಿ 7 ನಗರ ಸ್ಥಳೀಯ ಸಂಸ್ಥೆಗಳು ಓ.ಡಿ.ಎಫ್ ಘೋಷಿಸಲಾಗಿದೆ.

**20. ಇಂದಿರಾ ಕ್ಯಾಂಟೀನ್:-**

ಚಿತ್ರದುರ್ಗ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರ ಸ್ಥಳೀಯ ಸಂಸ್ಥೆಗಳ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಪೂರೈಕೆಗೆ ಮೆ: ರಿವಾರ್ಡ್ಸ್ ಸಂಸ್ಥೆಗೆ ಕಾರ್ಯಾದೇಶ ನೀಡಿರುವಂತೆ ಚಿತ್ರದುರ್ಗ ಜಿಲ್ಲೆಯ ಸ್ಥಳೀಯ ಸಂಸ್ಥೆಯ 6 ಸ್ಥಳಗಳಲ್ಲಿ ದಿನಾಂಕ: 24/03/2018 ರಿಂದ ಈ ತಹಲ್‌ವರೆವಿಗೂ ಪ್ರಾರಂಭವಿದ್ದು, ಮೊಳಕಾಲ್ಮುರು ವಿಧಾನಸಭಾ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಕಟ್ಟಡ ಪ್ರಗತಿಯಲ್ಲಿರುತ್ತದೆ. ಬಿಡುಗಡೆಯಾದ ಅನುದಾನ ಬಳಕೆಯಾಗಿರುತ್ತದೆಂದು ಅಧಿಕಾರಿಗಳು ತಿಳಿಸಿದರು.

**21. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,**

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರು ಮಾತನಾಡಿ, ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ ಗರ್ಭಿಣಿ/ಬಾಣಂತಿ ಮಹಿಳೆಯರಿಗೆ ಮೊದಲ ಜೀವಂತ ಹೆರಿಗೆಗೆ ರೂ.5000/- ಗಳ ಸಹಾಯ ಧನ ನೀಡುವಲ್ಲಿ 10556 ಫಲಾನುಭವಿಗಳು ಸೌಲಭ್ಯವನ್ನು ಪಡೆದಿದ್ದು, ಶೇ.100.17 ಸಾಧನೆ ಮಾಡಲಾಗಿದೆ.

ಭಾಗ್ಯಲಕ್ಷ್ಮಿ ಯೋಜನೆಯಡಿ ಅರ್ಹ ಬಿ.ಪಿ.ಎಲ್. ಕುಟುಂಬದ ಮೊದಲನೇ ಹೆಣ್ಣು ಮಗುವಿಗೆ 19300/- ಹಾಗೂ ಎರಡನೇ ಹೆಣ್ಣು ಮಗುವಿಗೆ ರೂ.18350/-ಗಳ ಠೇವಣಿಯನ್ನು ನೇರವಾಗಿ ಜಮೆ ಮಾಡಲಾಗಿದ್ದು, 2020-21ನೇ ಸಾಲಿಗೆ ಒಟ್ಟು 3296 ಅರ್ಜಿಗಳಿಗೆ ಮಂಜೂರಾತಿ ನೀಡಿರುವ ಅಂಶ ತಿಳಿಯಿತು.

ಉದ್ಯೋಗ ಯೋಜನೆಯಡಿ ಅರ್ಜಿಗಳನ್ನು ಸಲ್ಲಿಸಲಾದ ಫಲಾನುಭವಿಗಳಿಗೆ ಬ್ಯಾಂಕ್ ಗಳಿಂದ ಸಾಲವನ್ನು ಶೀಘ್ರವಾಗಿ ಮಂಜೂರು ಮಾಡಿಸಿಕೊಡಲು ಈಗಾಗಲೇ ಬ್ಯಾಂಕ್‌ಗಳಿಗೆ ಸಲ್ಲಿಸಿರುವುದಾಗಿ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುವ ಉದ್ಯೋಗಿನಿ, ಸಮೃದ್ಧಿ, ಚೇತನ ಕಾರ್ಯಕ್ರಮದಡಿ ಗುರುತಿಸಲಾದ ಫಲಾನುಭವಿಗಳಿಗೆ ಮಂಜೂರಾತಿ ನೀಡಿರುವ ಕುರಿತು ವರದಿಯನ್ನು ಸಲ್ಲಿಸಲು ನಿರ್ದೇಶಿಸಲಾಯಿತು.

22. ಅರಣ್ಯ ಹಕ್ಕು ಕಾಯ್ದೆ

ಸದರಿ ಕಾಯ್ದೆಯಡಿ ಜಿಲ್ಲೆಯಲ್ಲಿ ಒಟ್ಟು 5272 ಅರ್ಜಿಗಳನ್ನು ಸ್ವೀಕರಿಸಿದ್ದು, 347 ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ, 4642 ಅರ್ಜಿಗಳು ತಿರಸ್ಕೃತಗೊಂಡಿವೆ, 283 ಅರ್ಜಿಗಳು ಬಾಕಿ ಇವೆ, ಆರ್.ಟಿ.ಸಿ.ಯಲ್ಲಿ 286 ಅರ್ಜಿಗಳನ್ನು ಇಂಡೀಕರಣ ಮಾಡಿದ್ದು, 61 ಇಂಡೀಕರಣ ಮಾಡಲು ಬಾಕಿ ಇರುವುದಾಗಿ ಅಧಿಕಾರಿಗಳು ತಿಳಿಸಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಡೀಮ್ಡ್ ಫಾರೆಸ್ಟ್ ಎಂದು 32270.12 ಹೆಕ್ಟೇರ್ ಗುರುತಿಸಿದ್ದು, ಅದರಲ್ಲಿ 11125.03 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಇಲಾಖೆಗೆ ಉಳಿಸಿಕೊಳ್ಳಲು ಹಾಗೂ 16859.92 ಹೆಕ್ಟೇರ್ ಪ್ರದೇಶವನ್ನು ಕಂದಾಯ ಇಲಾಖೆಯಲ್ಲಿ ಉಳಿಸಿಕೊಳ್ಳಲು ವರದಿಯನ್ನು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅವಗಾಹನೆಗೆ ಸಲ್ಲಿಸಲಾಗಿರುವುದಾಗಿ ತಿಳಿಸಿದರು.

ವಿದ್ಯಾಗಮ ಯೋಜನೆ ಅಭಿಯಾನ ಮಾಡಲು ಆದೇಶ ಮಾಡಿದಂತೆ ಶೀಘ್ರದಲ್ಲಿ ಕಾರ್ಯಕ್ರಮ ಮಾಡಲಾಗುವುದು. ಹಾಗೂ ಸಭೆಯಲ್ಲಿ ಸೂಚಿಸಿದಂತೆ ಎಲ್ಲಾ ಇಲಾಖೆ ವತಿಯಿಂದ ಮುಂದಿನ ಸಭೆಯ ಒಳಗೆ ಪ್ರಗತಿ ಸಾಧಿಸಲಾಗುವುದು ಎಂದು ಭರವಸೆ ನೀಡಿದರು.

ದಿನಾಂಕ: 04.12.2020ರಂದು ಚಿತ್ರದುರ್ಗ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯಾಗಿ ಭೇಟಿ ನೀಡಿದ ಸಭೆಯಲ್ಲಿನ ಪ್ರಮುಖಾಂಶಗಳ ವರದಿಯನ್ನು ಮಾನ್ಯರ ಅವಗಾಹನೆಗೆ ಕೋರಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಎಂ.ದೀಪಾ., ಭಾ.ಆ.ಸೇ
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ–ಕರ್ನಾಟಕ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ: 02.12.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೋವಿಡ್-19 ಮತ್ತು ಅತಿವೃಷ್ಟಿ ಹಾಗೂ ಪ್ರವಾಹ ಕುರಿತು ನಡೆದ ಸಭೆಯ ನಡುವಳಿಗಳು**

**ಹಾಜರಿದ್ದ ಅಧಿಕಾರಿಗಳು:-**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬಳ್ಳಾರಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ.
4. ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
5. ನಿರ್ದೇಶಕರು, ವಿಜಯನಗರ ವೈದ್ಯಕೀಯ ಸಂಸ್ಥೆ, ಬಳ್ಳಾರಿ.
6. ಜಿಲ್ಲಾ ಆರೋಗ್ಯ ಅಧಿಕಾರಿಗಳು, ಬಳ್ಳಾರಿ.
7. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ.
8. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಳ್ಳಾರಿ.

******

ಜಿಲ್ಲಾಧಿಕಾರಿಗಳು ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿದರು. ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿದರು ಕೋವಿಡ್-19 ಪ್ರಸ್ತುತ ಸ್ಥಿತಿಯ ಬಗ್ಗೆ ಹಾಗೂ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ಕುರಿತು ವಿವರಣೆ ನೀಡಲು ಸೂಚಿಸಿದರು.

ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮಾತನಾಡಿ ಜಿಲ್ಲೆಯಲ್ಲಿ ಅತೀವೃಷ್ಠಿಗೆ ಸಂಬಂಧ ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ಮತ್ತು ಕೋವಿಡ್-19 ಗೆ ಸಂಬಂಧಿಸಿದಂತೆ ಸೊಂಕು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಕುರಿತು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

## ಪ್ರಕೃತಿ ವಿಕೋಪ

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ 2020ರ ಅಗಷ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಅದ ನಷ್ಟದ ಬಗ್ಗೆ ವಿವರಿಸಲು ತಿಳಿಸಿದರು.
- ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ (1ನೇ ಅಕ್ಟೋಬರ್ ರಿಂದ 30 ನವೆಂಬರ್ ವರೆಗೆ) ಸರಾಸರಿ ಮಿ.ಮಿ. ಗೆ ಮಿ.ಮೀ. ಮಳೆಯಾಗಿರುತ್ತದೆ.
- ಸರ್ಕಾರವು 2020ರ ಅಗಷ್ಟ್ ಮಾಹೆಯಲ್ಲಿ ಅತೀವೃಷ್ಟಿ ಎಂದು 6 ತಾಲೂಕುಗಳನ್ನು (ಹಡಗಲಿ, ಹರಪನಹಳ್ಳಿ, ಹ.ಬೊ.ಹಳ್ಳಿ, ಹೊಸಪೇಟೆ, ಕಂಪ್ಲಿ ಮತ್ತು ಸಿರುಗುಪ್ಪ) ಹಾಗೂ ಸೆಪ್ಟೆಂಬರ್ ತಿಂಗಳ ಮಾಹೆಯಲ್ಲಿ 03 ತಾಲೂಕಗಳನ್ನು (ಬಳ್ಳಾರಿ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳು) ಹಾಗೂ ಅಕ್ಟೋಬರ್ ತಿಂಗಳ ಮಾಹೆಯಲ್ಲಿ 02 ತಾಲೂಕಗಳನ್ನು (ಕುರುಗೋಡು ಮತ್ತು ಕೊಟ್ಟೂರು ತಾಲ್ಲೂಕುಗಳು) ಅತೀವೃಷ್ಠಿ ಎಂದು ಘೋಷಣೆ ಮಾಡಿರುತ್ತದೆ.

- ಜಿಲ್ಲೆಯಲ್ಲಿ 2020ರ ಆಗಷ್ಟ, ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಅತೀವೃಷ್ಠಿಯಿಂದ 11 ತಾಲ್ಲೂಕುಗಳಲ್ಲಿ ಒಟ್ಟು 1008 ಮನೆಗಳು ಹಾನಿಯಾಗಿವೆ ಎಂದು ತಿಳಿಸಿದರು. ಅದರಲ್ಲಿ 15 ಮನೆಗಳು ತೀವ್ರ ತರಹ ("ಬಿ" ವರ್ಗ) ಮತ್ತು 993 ಮನೆಗಳು ಭಾಗಶಃ ಹಾನಿಯಾಗಿವೆ ("ಸಿ" ವರ್ಗ) ಎಂದು ತಿಳಿಸಿದರು.
- ಅಕ್ಟೋಬರ್ ಮಾಹೆಯಲ್ಲಿ ಘೋಷಣೆಯಾದ ಕಂಪ್ಲಿ ಮತ್ತು ಕೊಟ್ಟೂರು ತಾಲ್ಲೂಕುಗಳ ಲಾಗಿನ್ ಸಮಸ್ಯೆ ಬಗೆಹರಿದಿದ್ದು ಸದರಿ ತಾಲ್ಲೂಕುಗಳ ಆರ್.ಜಿ.ಆರ್.ಹೆಚ್.ಸಿ.ಎಲ್. ಲಾಗಿನ್ ಸಕ್ರಿಯಗೊಂಡಿದ್ದು ಈ ತಾಲ್ಲೂಕುಗಳ ಹಾನಿಯಾದ ಎಲ್ಲಾ ಮನೆಗಳ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.
- ಈವರೆಗೆ 11 ತಾಲ್ಲೂಕುಗಳಲ್ಲಿ ಹಾನಿಯಾದ ಎಲ್ಲಾ 1008 ಮನೆಗಳ ವಿವರಗಳನ್ನು RGRHCL login ನಲ್ಲಿ ನಮೂದಿಸಿದ್ದು ಎಲ್ಲಾ 1008 ಮನೆಗಳಿಗೆ ಡಿ.ಸಿ. ಲಾಗಿನ್ ನಲ್ಲಿ ಅನುಮೋದನೆ ನೀಡಲಾಗಿದ್ದು, ಈವರೆಗೆ 885 ಮನೆಗಳ ಜಿ.ಪಿ.ಎಸ್. ಕಾರ್ಯ ಪೂರ್ಣಗೊಂಡಿದ್ದು ಇದರ ಪೈಕಿ 475 ಮನೆಗಳಿಗೆ ರೂ.50000/- ದಂತೆ ಪರಿಹಾರ ಮೊತ್ತವನ್ನು ವಿತರಣೆ ಮಾಡಲಾಗಿದೆ.
- ಜಿಲ್ಲೆಯಲ್ಲಿ 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಭಾರಿ ಮಳೆಯಿಂದ ಒಟ್ಟು 10384.66 ಹೆಕ್ಟರ್ ಬೆಳೆ ನಷ್ಟುವಾಗಿರುತ್ತದೆ ಎಂದು ತಿಳಿಸುತ್ತಾ, ಸರ್ಕಾರದ ನಿರ್ದೇಶನದಂತೆ ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡಲಾಗುತ್ತಿದ್ದು ಈವರೆಗೆ ಪರಿಹಾರ ತಂತ್ರಾಂಶದಲ್ಲಿ ಒಟ್ಟು 8145.00 ಹೆಕ್ಟರ್ ಬೆಳೆ ವಿವರಗಳನ್ನು ಡೇಟಾ ಎಂಟ್ರಿ ಮಾಡಲಾಗಿದ್ದು ಇನ್ನು ಬಾಕಿ ವಿಸ್ತೀರ್ಣವನ್ನು 07 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.
- ಇದಲ್ಲದೇ ಜಿಲ್ಲೆಯಲ್ಲಿ ಆಗಸ್ಟ್ 2020 ರಿಂದ ನವೆಂಬರ್ 2020 ರವರೆಗೆ ಪ್ರಕೃತಿ ವಿಕೋಪದಿಂದ ಮರಣ ಹೊಂದಿದ ಒಟ್ಟು 63 ಪ್ರಾಣಿ ಹಾನಿ ಪ್ರಕರಣಗಳಿಗೆ ಒಟ್ಟು ರೂ.4.61 ಲಕ್ಷ ಪರಿಹಾರ ನೀಡಲಾಗಿದೆ ಹಾಗೂ 04 ಜೀವ ಹಾನಿಗೆ ಒಟ್ಟು ರೂ.20.00 ಲಕ್ಷ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು. ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದ್ದು, ಪ್ರತ್ಯೇಕವಾಗಿ ಈ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂದು ತಿಳಿಸಿದರು.
- ಡಿಸೆಂಬರ್ 2019 ರಿಂದ ಪ್ರಾರಂಭಿಸಲಾಗಿದ್ದ "Training on Disaster Management and First Aid to Vas, RIs, and PDOs" ತರಬೇತಿಯನ್ನು ಎಲ್ಲಾ ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದ್ದು, ಇದರಿಂದ ಮುಂಬರುವ ದಿನಗಳಲ್ಲಿ ವಿವಿಧ ತರಹದ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ತಕ್ಷಣವೇ ಗ್ರಾಮ ಮಟ್ಟಗಳಲ್ಲಿ ಎದುರಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1) 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹಾನಿಯಾದ ಮನೆಗಳ ಡೇಟಾ ಎಂಟ್ರಿ ಪೂರ್ಣಗೊಂಡು ಪರಿಹಾರ ವಿತರಿಸದೇ ಬಾಕಿ ಇರುವ 518 ಮನೆಗಳಿಗೆ ಸರ್ಕಾರ ನಿಗಧಿಪಡಿಸಿದ ಪರಿಷ್ಕೃತ ಧರದಲ್ಲಿ ಪರಿಹಾರ ವಿತರಣೆ ಮಾಡಲು ಸೂಚಿಸಿದರು.

2) 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹಾನಿಯಾದ ಬೆಳೆಗಳ ಹಾನಿಯ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡಲು ಬಾಕಿ ಇರುವ 2239 ಹೆಕ್ಟರ್ ವಿಸ್ತೀರ್ಣವನ್ನು ಒಂದು ವಾರದೊಳಗೆ ಡೇಟಾ ಎಂಟ್ರಿ ಮಾಡಿ ಪೂರ್ಣಗೊಳಿಸಲು ಸೂಚಿಸಿದರು.

## ಕೋವಿಡ್-19

- **ಕೊವೀಡ್-19 ಪರೀಕ್ಷೆ:-** ಜಿಲ್ಲೆಯಲ್ಲಿ ಒಟ್ಟಾರೆ 338062 ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಇದರಲ್ಲಿ RTPCR-160477 ಹಾಗೂ ANTIGEN-177585 ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 38242 ದೃಢ ಪ್ರಕರಣಗಳು ಪತ್ತೆಯಾಗಿದ್ದು, ಈಗ ಕೇವಲ 223 ಸಕ್ರೀಯ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು ಜಿಲ್ಲೆಯಲ್ಲಿ ಒಟ್ಟು 582 ಮರಣ ಹೊಂದಿದ ಪ್ರಕರಣಗಳು ವರದಿಯಾಗಿರುತ್ತವೆ ಎಂದು ತಿಳಿಸಿದರು.
- ಕೋವಿಡ್- 19 ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಳ್ಳಾರಿ ಜಿಲ್ಲೆಗೆ ಪ್ರತಿ ದಿನ RAT 400 ಮತ್ತು RTPCR-2200 ಕೋವಿಡ್-19 ಪರೀಕ್ಷೆಯ ಗುರಿ ನಿಗಧಿಪಡಿಸಲಾಗಿದ್ದು, ಆದರೆ ದಿನ ನಿತ್ಯ ಸರಾಸರಿ 1500 ಪರೀಕ್ಷೆಗಳು ಮಾತ್ರ ಮಾಡಲಾಗುತ್ತಿದೆ ಇದನ್ನು ಹೆಚ್ಚಿಸುವ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.
- ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ರಾಜ್ಯ ಮಟ್ಟದಿಂದ ನಿಗಧಿಪಡಿಸಿರುವ ಗುರಿಯಂತೆ RTPCR ಪರೀಕ್ಷೆಯಲ್ಲಿ ಗುರಿ ತಲುಪುವುದು ಅತೀ ಮುಖ್ಯವಾಗಿದ್ದು, ಸರ್ಕಾರದ ನಿರ್ದೇಶನದಂತೆ ನಿಗಧಿಪಡಿಸಿರುವ ಗುರಿಯನ್ನು ಸಾಧಿಸಲು ನಿರ್ದೇಶನಗಳನ್ನು ನೀಡಿದರು.
- ಇದಕ್ಕೆ ಜಿಲ್ಲಾಧಿಕಾರಿಗಳು ಮಾತನಾಡಿ, ನಿಗಧಿತ ಪರೀಕ್ಷೆಗಳ ಗುರಿಯನ್ನು ತಲುಪಲು ಪ್ರತಿ ತಾಲ್ಲೂಕಿಗೆ ಪರೀಕ್ಷೆ ಮಾಡಲು ಗುರಿಯನ್ನು ನಿಗಧಿಪಡಿಸಲಾಗಿದೆ ಎಂದು ತಿಳಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ No. of patients with NIL PC contact ಸಂಖ್ಯೆ ಹೆಚ್ಚಿರುವುದರಿಂದ ಇದರ ಬಗ್ಗೆ ಗಮನ ಹರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಸಂಪರ್ಕಿತರನ್ನು ಪತ್ತೆಹಚ್ಚಲು ಕ್ರಮ ವಹಿಸಲು ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ HOME-ISOLATION ಆರೈಕೆ ಪಡೆಯುತ್ತಿರುವವರಿಗೆ ಆರೋಗ್ಯ ಇಲಾಖೆಯವರು ಮನೆಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿರುವ ಸಂಖ್ಯೆ ತುಂಬಾ ಕಡಿಮೆ ಇದ್ದು ಇದನ್ನು ಹೆಚ್ಚಿಸಲು ಕ್ರಮ ವಹಿಸುವಂತೆ ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ Health Survey ಕಾರ್ಯ ಶೇ.93.86% ಪೂರ್ಣಗೊಂಡಿದ್ದು ಆದಷ್ಟು ಬೇಗನೆ ಶೇ.100% ರಷ್ಟು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.
- **ಕೊವೀಡ್-19 ಪ್ರಕರಣಗಳ ಮರಣಕ್ಕೆ ಸಂಬಂಧಿಸಿದಂತೆ:** ಕಳೆದ 7 ದಿನಗಳಲ್ಲಿ ಒಟ್ಟು 123 ದೃಢ ಪ್ರಕರಣಗಳು ವರದಿಯಾಗಿದ್ದು ಇದರ ಪೈಕಿ ಒಟ್ಟು 03 ಪ್ರಕರಣಗಳು ಮರಣ ಹೊಂದಿರುವುದಾಗಿ ಸಭೆಗೆ ವಿವರಿಸಿದರು. ಮರಣ ಪ್ರಮಾಣ ಕಡಿಮೆ ಮಾಡಲು ಮುಂಚಿತವಾಗಿಯೇ ILI, SARI & ಆಮ್ಲಜನಕ ಕೊರತೆ ಇರುವ ಪ್ರಕರಣಗಳನ್ನು ಮೊದಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

➢ ಜಿಲ್ಲೆಯಲ್ಲಿ ಒಟ್ಟು 1128 Oxygenated beds, 116 ventilator beds & 210 ICU beds ಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸುತ್ತಾ, ಪ್ರಸ್ತುತ ಯಾವುದೇ ತರಹದ ಬೆಡ್ಸ್ ಗಳ ತೊಂದರೆ ಇರುವುದಿಲ್ಲ ಎಂದು ತಿಳಿಸಿದರು.

➢ ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆಯಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿರುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1) ಜಿಲ್ಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಕೋವಿಡ್ ಕರ್ತವ್ಯ ನಿರತ ಸರ್ಕಾರಿ ನೌಕರರು ಕೋವಿಡ್-19 ಸೋಂಕಿನಿಂದ ಮೃತ ಹೊಂದಿದ ಬಾಕಿ ಇರುವ ಎಲ್ಲಾ ಪ್ರಕರಣಗಳಲ್ಲಿ ಕೂಡಲೇ ನಿಯಮಾನುಸಾರ ಪರಿಹಾರ ವಿತರಣೆ ಮಾಡಲು ಕ್ರಮ ವಹಿಸುವುದು.
2) ಕೋವಿಡ್ ಪರೀಕ್ಷೆಯಲ್ಲಿ ಸರ್ಕಾರ ನಿಗಧಿಪಡಿಸಿದ ಜಿಲ್ಲಾವಾರು ಗುರಿಯನ್ನು ಪ್ರತಿ ದಿನ ತಲುಪುವಂತೆ ಕ್ರಮ ವಹಿಸಲು ಸೂಚಿಸಿದರು.
3) ಜನವರಿ 2021 ರಿಂದ COVID-19 Second Wave ಬರುವ ಸಾಧ್ಯತೆಗಳು ಹೆಚ್ಚಿರುವುದರಿಂದ ಸರ್ಕಾರದ ನಿರ್ದೇಶನದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.
4) ಎಲ್ಲಾ ದೃಢ ಪ್ರಕರಣಗಳಿಗೆ ಸಂಬಂಧ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿ ಪರೀಕ್ಷೆಗೆ ಒಳಪಡಿಸಲು ಕ್ರಮ ವಹಿಸುವಂತೆ ಸೂಚಿಸಿದರು.
5) ಕೋವಿಡ್ ಸೊಂಕು ತಡೆಗಟ್ಟಲು ಸಾರ್ವಜನಿಕರು ಮಾಸ್ಕ್ ಗಳನ್ನು ಕಡ್ಡಾಯವಾಗಿ ಧರಿಸಿ ಓಡಾಡಲು ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು ಕ್ರಮ ವಹಿಸುವಂತೆ ತಪ್ಪಿದ್ದಾಲ್ಲಿ ಸರ್ಕಾರ ನಿಗಧಿಪಡಿಸಿದ ದಂಡವನ್ನು ವಸೂಲಿ ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.
6) ILI ಮತ್ತು SARI ಹಾಗೂ ಆಮ್ಲಜನಕ 94% ಕಡಿಮೆಯಿರುವ ಜನರನ್ನು ಕೂಡಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ದೃಢ ಪ್ರಕರಣಗಳಲ್ಲಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮ ವಹಿಸಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಎಂ.ಎಸ್.ಶ್ರೀಕರ್ ಭಾ.ಆ.ಸೇ)
ಆಯುಕ್ತರು, ವಾಣಿಜ್ಯ ತೆರಿಗೆಗಳ ಇಲಾಖೆ
ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸಾ/ಕೇಕ/ವ್ಯನಿ/ 94 /2020-21

ದಿನಾಂಕ.13.01.2021

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ),
ಕೊಠಡಿ ಸಂ.612, 6ನೇ ಮಹಡಿ,
2ನೇ ಹಂತ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಮಾನ್ಯರೇ,

ವಿಷಯ : **ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿದ ಮಾಹಿತಿಯನ್ನು ಕಳುಹಿಸುತ್ತಿರುವ ಕುರಿತು.**
ಉಲ್ಲೇಖ : ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ರವರ ಪತ್ರ ಸಂ.ಸಿಆಸುಇ 02 ಇಸಪ 2019 ದಿ.22.04.2020

---

ದಿನಾಂಕ 23.12.2020 ರಿಂದ 25.12.2020ರವರೆಗೆ, ಬಾಗಲಕೋಟೆ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಪ್ರವಾಸ ಕೈಗೊಂಡು, ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲೆಯ ಇತರೆ ಅಧಿಕಾರಿಗಳೊಡನೆ ಈ ಕೆಳಗಿನಂತೆ ಸಭೆ/ಪರಾಮರ್ಶೆ ನಡೆಸಲಾಗಿದೆ :

1) ಬಾಗಲಕೋಟೆ ಜಿಲ್ಲೆಯ Roll Observer ಆಗಿ, ದಿ.1.1.2021ರಲ್ಲಿರುವಂತೆ Special Summary Revision of Photo Electoral Rolls ಕುರಿತು ಹಾಗೂ ER Observer ಆಗಿ During the period of disposal of claims and objections by the EROs ಸಮಯದಲ್ಲಿ ಎರಡನೆ ಭೇಟಿ ಕುರಿತು ಬಾಗಲಕೋಟೆ ಜಿಲ್ಲೆಯ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್ ಹಾಗೂ ಬಾಗಲಕೋಟೆ ನಗರ ಸಭೆಯ ಆಯುಕ್ತರೊಂದಿಗೆ ಚರ್ಚೆ ಹಾಗೂ ಪ್ರಗತಿ ಪರಿಶೀಲನೆ.
2) ಕೊರೋನಾ ವೈರಾಣು ಸೋಂಕು ಹರಡದಂತೆ ತೆಗೆದುಕೊಂಡ ಕ್ರಮಗಳ ಪರಾಮರ್ಶೆ
3) ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪರಾಮರ್ಶೆ
4) ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ವಿಷಯಗಳ ಕುರಿತು ಪರಿಶೀಲನೆ.

ಮೇಲೆ ತಿಳಿಸಿದ ವಿಷಯಗಳ ಕುರಿತು ದಿನಾಂಕ 24.12.2020ರಂದು ನಡೆಸಿದ ಸಭಾ ನಡವಳಿಯ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

**(ಶಿವಯೋಗಿ ಸಿ.ಕಳಸದ, ಭಾಆಸೇ.,)**
ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ ಹಾಗೂ
ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಅಡಕ :
ದಿನಾಂಕ 24.12.2020ರಂದು ನಡೆಸಿದ ಸಭೆಯ ನಡವಳಿಗಳು

ಪ್ರತಿಯನ್ನು :

(1) ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಮೇಲಿನ ವಿಷಯವನ್ನು ಮಾನ್ಯರ ಆದ್ಯ ಗಮನಕ್ಕೆ ತರಲು ಕೋರಲಾಗಿದೆ.
(2) ಸನ್ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳ ಆದ್ಯ ಮಾಹಿತಿಗಾಗಿ ಕಳುಹಿಸಲಾಗಿದೆ.
(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಕೊಠಡಿ ಸಂ.627, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರ ಆದ್ಯ ಮಾಹಿತಿಗಾಗಿ ಕಳುಹಿಸಲಾಗಿದೆ.
(4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆರವರ ಆದ್ಯ ಮಾಹಿತಿಗಾಗಿ ಕಳುಹಿಸಲಾಗಿದೆ.
(5) ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ, ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು, ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮೇಲಿನ ವಿಷಯವನ್ನು ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.

ದಿನಾಂಕ:24-12-2020 ರಂದು ಮಧ್ಯಾಹ್ನ 04-30 ಗಂಟೆಗೆ ಬಾಗಲಕೋಟೆ ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಗ್ರಾಮ ಪಂಚಾಯತ ಚುನಾವಣೆಯ ಮುಂಜಾಗ್ರತಾ ಕ್ರಮ, ಕೋವಿಡ್-19ರ ಪ್ರಗತಿ, ಪ್ರವಾಹ/ಅತಿವೃಷ್ಟಿ, ಮತ್ತು ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು.

*-*-*-*-*-*-*-*-*-*-*-*

<u>ಅಧ್ಯಕ್ಷತೆ :</u>

ಶ್ರೀ ಶಿವಯೋಗಿ ಸಿ. ಕಳಸದ, ಭಾಆಸೇ.,

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು,

ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಾಗಲಕೋಟೆ ಜಿಲ್ಲೆ

<u>ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳು</u>

1. ಜಿಲ್ಲಾಧಿಕಾರಿಗಳು, ಬಾಗಲಕೋಟೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ
4. ಶ್ರೀ ಯಶವಂತ್ ವಿ. ಗುರುಕಾರ, ಐ.ಎ.ಎಸ್. ಪರೀಕ್ಷಾರ್ಥ ಅಧಿಕಾರಿಗಳು ಬಾಗಲಕೋಟೆ
5. ಅಪರ ಜಿಲ್ಲಾಧಿಕಾರಿಗಳು ಬಾಗಲಕೋಟೆ
6. ಉಪ ವಿಭಾಗಾಧಿಕಾರಿಗಳು, ಬಾಗಲಕೋಟೆ
7. ಉಪ ಕೃಷಿ ನಿರ್ದೇಶಕರು, ಬಾಗಲಕೋಟೆ
8. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಾಗಲಕೋಟೆ
9. ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬಾಗಲಕೋಟೆ
10. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಬಾಗಲಕೋಟೆ
11. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
12. ಪೌರಾಯುಕ್ತರು, ನಗರಸಭೆ ಬಾಗಲಕೋಟೆ
13. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಬಾಗಲಕೋಟೆ
14. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ
15. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಾಗಲಕೋಟೆ
16. ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
17. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬಾಗಲಕೋಟೆ
18. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬಾಗಲಕೋಟೆ
19. ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕಿಯ ಸೇವೆ, ಬಾಗಲಕೋಟೆ
20. ಉಪ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಾಗಲಕೋಟೆ
21. ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ
22. ಎಲ್ಲ ತಹಶೀಲದಾರರು
23. ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ
24. ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು

*-*-*-*-*-*-*-*-*-*-*-*-*-*

ಪ್ರಾಸ್ತಾವಿಕವಾಗಿ ಅಪರ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರು ಸಭೆಯ ಅಧ್ಯಕ್ಷರಿಗೆ ಸ್ವಾಗತವನ್ನು ಬಯಸುತ್ತಾ, ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ಎಲ್ಲ ತಹಶೀಲದಾರರು, ಎಲ್ಲ ಇಲಾಖೆಯ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಪ್ರಗತಿ ಪರಿಶೀಲನಾ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರಲ್ಲಿ ಕೋರಿದರು.

**ಮತದಾರ ಪಟ್ಟಿ ಪರಿಷ್ಕರಣೆ ಕುರಿತು ಕೈಗೊಂಡ ಕ್ರಮಗಳ ಬಗ್ಗೆ :**

ಪ್ರಥಮವಾಗಿ ಮಾತನಾಡುತ್ತಾ, ಇಂದು ನಾನು ಕೆಲವು ತಾಲ್ಲೂಕುಗಳ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿದಾಗ ಮತದಾರ ಪಟ್ಟಿ ಪರಿಷ್ಕರಣೆ ಕುರಿತು ಕೆಲವು ಬಿಎಲ್‌ಓಗಳು ಮತದಾರ ಪಟ್ಟಿ ಪರಿಷ್ಕರಣೆ ಕುರಿತು ಪರಿಶೀಲಿಸಿದಾಗ ಮನೆ ಮನೆಗಳಿಗೆ ಭೇಟಿ ನೀಡದೇ ಇರುವದು ಗಮನಕ್ಕೆ ಬಂದಿದೆ. ಅಂತಹವರು ನೀಡಿರುವ ವರದಿಯನ್ನು ಸರಿಯಾಗಿ ಪರಿಶೀಲಿಸಿ, ತಿದ್ದುಪಡಿಗಳನ್ನು ಪ್ರತಿಶತ 100 ರಷ್ಟು ಮತ್ತು ಎಲ್ಲಾ ಬಿಎಲ್‌ಓಗಳಿಂದ ಸಂಪೂರ್ಣ 100% ಮತದಾರ ಪಟ್ಟಿ ಪರಿಶೀಲಿಸುವ ಕೆಲಸ ಆಗಬೇಕು, ಬಿಎಲ್‌ಓಗಳು ಸಲ್ಲಿಸಿರುವಂತಹ ವರದಿಯನ್ನು ರ್‍ಯಾಂಡಮ್ ಆಗಿ AERO(ತಹಶೀಲದಾರರು) ಕೆಲವು ಮನೆಗೆ ಭೇಟಿ ನೀಡಿ ಪರಿಶೀಲಿಸಿ, ಈ ಕುರಿತು AERO(ತಹಶೀಲದಾರರು) ಹಾಗೂ ERO(ಉಪ ವಿಭಾಗಾಧಿಕಾರಿಗಳು) ಇನ್ನೂ ಹೆಚ್ಚಿನ ಗಮನ ಕೊಡಬೇಕೆಂದು ಸೂಚಿಸಲಾಯಿತು.

ಮತದಾರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸ್ವೀಕೃತವಾದ ನಮೂನೆ 6, 7, 8, 8ಎ ಅರ್ಜಿಗಳ ಬಗ್ಗೆ ಕ್ರಮ ಕೈಕೊಳ್ಳುವ ಮೊದಲು ಮತಗಟ್ಟೆವಾರು ಎಲ್ಲ ದಾಖಲೆಗಳನ್ನು ಸರಿಯಾಗಿ ಜೋಡಿಸಿ, ದಾಖಲೆ ಪರಿಶೀಲಿಸಿ, ಬಿಎಲ್‌ಓ ಗಳಿಂದ ದೃಢೀಕರಿಸಿ ನಿಗದಿತ ದಿನಾಂಕದೊಂದಿಗೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಕುರಿತು AERO(ತಹಶೀಲದಾರ) ಕ್ರಮ ವಹಿಸಬೇಕು AERO(ತಹಶೀಲದಾರ)1% ರಷ್ಟು, ERO(ಉಪ ವಿಭಾಗಾಧಿಕಾರಿಗಳು) 10% ಹಾಗೂ, DEO(ಜಿಲ್ಲಾಧಿಕಾರಿಗಳು) 1% ರಷ್ಟು ಮತ್ತು ವೀಕ್ಷಕರು 1% ರಷ್ಟು ದಾಖಲೆ ಪರಿಶೀಲಿಸಲು ಚುನಾವಣೆ ಆಯೋಗದ ನಿರ್ದೇಶನವನ್ನು ಪರಿಶೀಲಿಸಿ, AERO(ತಹಶೀಲದಾರ) 5% ಕೆಲಸವನ್ನು ನಿರ್ವಹಿಸಬೇಕು ಹಾಗೂ ಸಂಬಂಧಿಸಿದ ಎಲ್ಲ ಅಧಿಕಾರಿಗಳು ವರದಿಯನ್ನು ಪರಿಶೀಲಿಸಿ, ಜವಾಬ್ದಾರಿಯಿಂದ ತಮ್ಮ ರುಜುವನ್ನು ಮಾಡಬೇಕೆಂದು ಸಭೆಯ ಗಮನಕ್ಕೆ ತರಲಾಯಿತು.

**ಮತದಾರ ಪಟ್ಟಿಯಲ್ಲಿ ಗಣ್ಯವ್ಯಕ್ತಿಗಳ, ಲಿಂಗ ಅನುಪಾತ ಹಾಗೂ ಭಾವಚಿತ್ರ ಕುರಿತು :**

ಮತದಾರ ಪಟ್ಟಿಯಲ್ಲಿ ಎಲ್ಲ ಗಣ್ಯವ್ಯಕ್ತಿಗಳ ಹೆಸರನ್ನು ಕ್ಷೇತ್ರವಾರು ಪ್ರತ್ಯೇಕಿಸಿ, ಅಂತಹ ಎಲ್ಲಾ ಹೆಸರುಗಳನ್ನು ಮತದಾರ ಪಟ್ಟಿಯಲ್ಲಿ ಪರಿಶೀಲಿಸಲಾಗುತ್ತಿದೆ, ಮತದಾರ ಪಟ್ಟಿಯಲ್ಲಿ ಲಿಂಗ ಅಸಾಮರಸ್ಯದಂತಹ ಸಂಪೂರ್ಣ ದೋಷಗಳಿಗೆ ಹೆಚ್ಚಿನ ಗಮನ ಹಾಗೂ ಉತ್ತಮ ದರ್ಜೆಯ ಭಾವಚಿತ್ರಕ್ಕೆ (Quality of Photograph) ಹೆಚ್ಚಿನ ಗಮನ ಹರಿಸಬೇಕೆಂದು ಸೂಚಿಸಲಾಯಿತು.

**ಮತದಾರ ಪಟ್ಟಿಯಲ್ಲಿ ಅನಿವಾಸಿ ಭಾರತಿಯರನ್ನು ಕುರಿತು :**

ಮತದಾರ ಪಟ್ಟಿಯಲ್ಲಿ ಅನಿವಾಸಿ ಭಾರತಿಯರು ಇದ್ದಾರೆಯೇ? ಎಂದು ಪ್ರಶ್ನಿಸಲಾಗಿ, ಜಿಲ್ಲೆಯಲ್ಲಿ ಯಾರೂ ಅನಿವಾಸಿ ಭಾರತಿಯರು ಇರುವುದಿಲ್ಲವೆಂದು ಸಭಾಧ್ಯಕ್ಷರ ಗಮನಕ್ಕೆ ತಂದರು ಹಾಗೂ ಹಿಂದಿನ ವರ್ಷ 18 ಜನ ಅನಿವಾಸಿ ಭಾರತಿಯರು ಬಂದಿದ್ದು, ಅಂತಹವರನ್ನು ಮತದಾರ ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂದು ಚುನಾವಣಾಧಿಕಾರಿಗಳು ಸಭೆಗೆ ವಿವರಿಸಿದರು.

**ಆನ್‌ಲೈನ್ ಅಪ್ಲಿಕೇಶನ್ ವರದಿ ಕುರಿತು :**

ಜಮಖಂಡಿ ತಾಲ್ಲೂಕುಗಳಿಂದ 1591, ಹಾಗೂ ತೇರದಾಳ (ರಬಕವಿ-ಬನಹಟ್ಟಿ) ತಾಲ್ಲೂಕುಗಳಿಂದ 1165 ಮತದಾರ ನೋಂದಣಿ ಕುರಿತು ಆನ್‌ಲೈನ್ ಅಪ್ಲಿಕೇಶನ್‌ಗಳು ಬಂದಿದ್ದು, ಒಟ್ಟಾರೆ ಜಿಲ್ಲೆಯ ಶೇ.50 ರಷ್ಟು ರಬಕವಿ-ಬನಹಟ್ಟಿ ಭಾಗದಲ್ಲಿ ಬಂದಿರುವುದಾಗಿ ವಿವರಿಸುತ್ತಾ, ಉಪ ವಿಭಾಗಾಧಿಕಾರಿ ಜಮಖಂಡಿ ಹಾಗೂ ತಹಶೀಲದಾರ ರಬಕವಿ-ಬನಹಟ್ಟಿರವರನ್ನು ಪ್ರಶ್ನಿಸಲಾಯಿತು.

ಕೆಎಸ್‌ಆರ್‌ಟಿಸಿ : ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಣೆ ಮಾಡುವ ಕುರಿತು :

ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಸಾಫ್ಟ್‌ವೇರ್‌ದಲ್ಲಿ ತಾಂತ್ರಿಕ ತೊಂದರೆಯಿಂದಾಗಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ವಿತರಿಸಲು ತೊಂದರೆಯಾಗುತ್ತಿದೆ ಎಂದು ವಿಭಾಗೀಯ ನಿಯಂತ್ರಕರು, ಕೆಎಸ್‌ಆರ್‌ಟಿಸಿ, ಬಾಗಲಕೋಟೆರವರು ಸಭಾಧ್ಯಕ್ಷರ ಗಮನಕ್ಕೆ ತಂದರು.

ಜಿಲ್ಲೆಯ ವಿದ್ಯಾರ್ಥಿಗಳಿಗೆ ತಾಂತ್ರಿಕದೋಷ ನಿವಾರಣೆಯಾಗುವವರೆಗೆ ಕೆಎಸ್‌ಆರ್‌ಟಿಸಿ ನಿಯಮದಂತೆ ಕಳೆದ ವರ್ಷ ನೀಡಿರುವ ಬಸ್‌ಪಾಸ್‌ನ್ನು ಜಾರಿಯಲ್ಲಿ ತರಲು ಸೂಚಿಸಲಾಯಿತು.

ಎಸ್‌ಸಿ/ಎಸ್‌ಟಿ ಯೋಜನೆ ಅಡಿಯಲ್ಲಿ ಭೂ ಖರೀದಿ ಕುರಿತು :

ಬಾಗಲಕೋಟೆ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಯರಿಗೆ ನಿಗಮದಿಂದ ಜಮೀನು ಕೊಡಿಸುವ ಯೋಜನೆ ಜಾರಿಯಲ್ಲಿದ್ದು, ಜಮೀನನ್ನು ಖರೀದಿಸಿ ನೀಡುವಾಗ ಸರ್ಕಾರದ ನಿಯಮಾವಳಿಗಳನ್ನು ಅನುಸರಿಸಲು ಸಭೆಯಲ್ಲಿ ಸೂಚಿಸಲಾಯಿತು.

ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಪ್ರಗತಿ ಕುರಿತು :

2020-21ನೇ ಸಾಲಿನ ಜಿಲ್ಲೆಯ ಭೌತಿಕ ಪ್ರಗತಿ ವಿವರಿಸುತ್ತಾ ವೈಯಕ್ತಿಕ ಶೌಚಾಲಯಕ್ಕೆ ಸಂಬಂಧಿಸಿದಂತೆ 15,222 ಒಟ್ಟು ಗುರಿ ಇದ್ದು, ಅದರಲ್ಲಿ 1253 ಡಿಲೀಷನ್ ಮಾಡಲಾಗಿದ್ದು, ಎಪ್‌ಟಿಓ ಒಟ್ಟು ಜನರೇಷನ್ 13,969 ಆಗಿದ್ದು, ಹಿಂದಿನ ತಿಂಗಳವರೆಗೆ ಸಾಧನೆ 13,613, ಈ ತಿಂಗಳಲ್ಲಿ ಆದ ಸಾಧನೆ 356 ಒಟ್ಟು ಸಾಧನೆ 13,969 ಆಗಿರುತ್ತದೆ. ಅದೇ ರೀತಿ ಘನ ತ್ಯಾಜ್ಯ ವಿಲೇವಾರಿ 198 ಗುರಿ ಹೊಂದಿದ್ದು, 68ಕ್ಕೆ ಡಿಪಿಆರ್‌ಗಳು ಅನುಮೋದನೆ ಆಗಿರುತ್ತದೆ. ಸಮುದಾಯ ಶೌಚಾಲಯಗಳಿಗೆ ಸಂಬಂಧಿಸಿದಂತೆ 40 ಗುರಿಯನ್ನು ಹೊಂದಿದ್ದು, 19 ಡಿಪಿಆರ್ ಅನುಮೋದನೆ ಆಗಿರುತ್ತದೆ. ಅಂಗನವಾಡಿ ಶೌಚಾಲಯ ನಿರ್ಮಾಣ ಕುರಿತಂತೆ 238 ಗುರಿಯನ್ನು ಹೊಂದಿದ್ದು 230 ಸಾಧನೆಯಾಗಿರುತ್ತದೆ ಹಾಗೂ ಶಾಲಾ ಶೌಚಾಲಯ ಕುರಿತಂತೆ 28 ಗುರಿಯನ್ನು ಹೊಂದಿದ್ದು, 28 ಗುರಿಯನ್ನು ಸಾಧಿಸಿರುವುದಾಗಿ ಸಭಾಧ್ಯಕ್ಷರ ಗಮನಕ್ಕೆ ತಂದರು.

ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ :

ಜಿಲ್ಲೆಯಲ್ಲಿ 2019-20ನೇ ಸಾಲಿನ ಒಟ್ಟು 11 ಮೆಟ್ರಿಕ್ ನಂತರ ಹಾಗೂ ಒಟ್ಟು 5 ಮೆಟ್ರಿಕ್ ಪೂರ್ವ ವಸತಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು 950 ವಿದ್ಯಾರ್ಥಿಗಳ ದಾಖಲಾತಿಗಳನ್ನು ಹೊಂದಿರುತ್ತದೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಹೆಯಾನ ಊಟದ ವೆಚ್ಚಕ್ಕಾಗಿ ರೂ.1600 ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1500 ಊಟದ ವೆಚ್ಚಕ್ಕಾಗಿ ಖರ್ಚು ಭರಿಸಲಾಗುತ್ತಿದೆ ಹಾಗೂ 14 ವಸತಿ ನಿಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಳಿದ 2 ವಸತಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸ್ವಂತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದವರು ಸಭಾಧ್ಯಕ್ಷರಿಗೆ ಮಾಹಿತಿಯನ್ನು ಸಲ್ಲಿಸಿದರು.

<u>ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರವರು :</u>

ಹಿಂದಿನ ಸಭೆಯಲ್ಲಿ ಚರ್ಚಿಸಿದಂತಹ ನಿಗಮದ ಯೋಜನೆಗಳಾದ **"ಲಿಂಗತ್ವ ಅಲ್ಪ ಸಂಖ್ಯಾತರ ಪುನರ ವಸತಿ ಯೋಜನೆ"**(ಮಂಗಳಮುಖಿಯರಿಗೆ ಸಾಲ ಯೋಜನೆ), **"ಚೇತನ ಯೋಜನೆ"**(ಲೈಂಗಿಕ ಕಾರ್ಯನಿರತ ಮಹಿಳೆ ಸಾಲ ಯೋಜನೆ), **"ಧನಶ್ರೀ ಯೋಜನೆ"** (ಎಚ್‌ಐವಿ ಸೋಂಕಿತ ಮಹಿಳೆ ಸಾಲ ಯೋಜನೆ) ಅಡಿಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಮಾಡಿ ಸಾಲ ಮಂಜೂರಾತಿಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಧಾನ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ಉಪ ನಿರ್ದೇಶಕರು, ಮ.ಮ.ಕ.ಇ.ರವರು ಸಭಾಧ್ಯಕ್ಷರಿಗೆ ಮಾಹಿತಿಯನ್ನು ಸಲ್ಲಿಸಿದರು.

ಕೊನೆಯಲ್ಲಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಶಿವಯೋಗಿ ಸಿ. ಕಳಸದ, ಭಾಆಸೇ)**
ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ಸಂಸ್ಥೆ, ಬೆಂಗಳೂರು,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಾಗಲಕೋಟೆ ಜಿಲ್ಲೆ

ತಹಶೀಲದಾರ ರಬಕವಿ-ಬನಹಟ್ಟಿಯವರು ಮಾತನಾಡಿ ನಮ್ಮ ತಾಲ್ಲೂಕುಗಳಲ್ಲಿ ಸಿಎಸ್‌ಸಿ(CSC) ಸೆಂಟರ್‌ಗಳು ಹಾಗೂ ಆನ್‌ಲೈನ್ ಸೆಂಟರ್‌ಗಳು ಹೆಚ್ಚು ಇರುತ್ತವೆ ಎಂದು ಸಭಾಧ್ಯಕ್ಷರ ಗಮನಕ್ಕೆ ತಂದರು. ಅವುಗಳನ್ನು ಪರಿಶೀಲಿಸಿ, ಶೇ.50 ರಷ್ಟು ನಕಲು ಇರಬಹುದು, ಮುಂದಿನ 7 ದಿನಗಳಲ್ಲಿ ಅವುಗಳನ್ನು ನಿಷೇಧಿಸಿ, ಆನ್‌ಲೈನ್ ಅಪ್ಲಿಕೇಶನ್ ಸಲ್ಲಿಸಿದವರಿಗೆ ಎಸ್‌ಎಮ್‌ಎಸ್ ಹೋಗುತ್ತದೆ ಮತ್ತು ಯಾವ ಸಿಎಸ್‌ಸಿ(CSC) ಸೆಂಟರ್‌ನವರು ಹೆಚ್ಚು ಆನ್‌ಲೈನ್ ಅಪ್ಲಿಕೇಷನ್ ಮಾಡುತ್ತಾ ಇದ್ದಾರೆ ಗಮನಿಸಿ, 2-3 ದಿನಗಳಲ್ಲಿ ಕ್ರಮ ಕೈಗೊಂಡು, ಆನ್‌ಲೈನ್ ಹಾಗೂ ಅಪ್‌ಲೈನ್‌ನ ನಿಖರವಾದ ವರದಿಯನ್ನು ಸಲ್ಲಿಸುವಂತೆ ಜಮಖಂಡಿ ಉಪ ವಿಭಾಗಾಧಿಕಾರಿಗಳವರಿಗೆ ಸೂಚಿಸಲಾಯಿತು.

**(ಕ್ರಮ : ತಹಶೀಲದಾರರು ರಬಕವಿ-ಬನಹಟ್ಟಿ ಹಾಗೂ ಉಪ ವಿಭಾಗಾಧಿಕಾರಿಗಳು ಜಮಖಂಡಿ)**

**<u>ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟುವ ಕುರಿತು ಪ್ರಗತಿ ಪರಿಶೀಲನೆ :</u>**

ಜಿಲ್ಲೆಯಲ್ಲಿ 2,50,142 (ಸ್ಯಾಂಪಲ್) ಮಾದರಿಗಳನ್ನು ಪಡೆದಿದ್ದು, 2,34,676 ನೆಗೆಟಿವ್ ವರದಿಗಳು, 13647 ಪಾಸಿಟಿವ್ ವರಿದಿಗಳು, ಅವುಗಳಲ್ಲಿ 13,475 (ಡಿಸ್‌ಚಾರ್ಜ್) ಬಿಡುಗಡೆಯಾಗಿದ್ದು, 36 ಪ್ರಕರಣಗಳು ಸಕ್ರಿಯವಾಗಿರುತ್ತವೆ, 413 ಮಾದರಿಗಳು ತಿರಸ್ಕೃತವಾಗಿದ್ದು ಇರುತ್ತವೆ. ಇನ್ನು 1308 ಮಾದರಿಯ ವರದಿಗಳು ಬರಬೇಕಾಗಿರುತ್ತವೆ ಹಾಗೂ 136 ಸಾವಿನ ಪ್ರಕರಣಗಳಾಗಿರುತ್ತವೆ ಹಾಗೂ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಯಂತೆ ಪ್ರತಿದಿನ 3500 ಕೋವಿಡ್-19 ಮಾದರಿಯ ಗುರಿಯನ್ನು ಹೊಂದಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಮುಖ್ಯವಾಗಿ 136 ಸಾವಿನ ಪ್ರಕರಣಗಳಲ್ಲಿ 91 ಜನರು ಕೋಮಾರ್ಬಿಡ್ (ಇತರೆ ಕಾಯಿಲೆ) ದಿಂದ ಮರಣವನ್ನು ಹೊಂದಿರುವುದೆಂದು ಸಭೆಯ ಗಮನಕ್ಕೆ ತಂದರು. ಮುಖ್ಯವಾಗಿ ಜಿಲ್ಲಾ ಆಸ್ಪತ್ರೆಯ ಆರ್‌ಟಿಪಿಸಿಆರ್ ಪ್ರಯೋಗಾಲಯದಲ್ಲಿ ಅತೀ ಕಡಿಮೆ ದಿನಗಳಲ್ಲಿ 1 ಲಕ್ಷ ಜನರ ಕೋವಿಡ್-19ರ ಪರೀಕ್ಷೆಯನ್ನು ಮಾಡಿರುವುದನ್ನು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಯಂತೆ ಪ್ರತಿದಿನ 3500 ಕೋವಿಡ್-19ರ ಗುರಿಯನ್ನು ತಲುಪಲು ಸರ್ಕಾರಿ, ಖಾಸಗಿ ಶಾಲಾ ಶಿಕ್ಷಕರನ್ನು, ಆಸ್ಪತ್ರೆಗಳಿಗೆ ಬರುವಂತಹ ರೋಗಿಗಳನ್ನು, ಕೆಎಸ್‌ಆರ್‌ಟಿಸಿ. ಸಿಬ್ಬಂದಿಯನ್ನು, ಎಪಿಎಂಸಿ ಬರುವಂತಹ ಜನರನ್ನು ಹಾಗೂ ಮದುವೆ ಮಂಟಪಗಳಲ್ಲಿ ಸೇರಿರುವ ನಾಗರೀಕರನ್ನು ಆರ್‌ಟಿಪಿಸಿಆರ್ ಮೂಲಕ ಪರೀಕ್ಷೆಯನ್ನು ಮಾಡಿದಲ್ಲಿ, ಸರ್ಕಾರದವರು ನಿಗದಿಪಡಿಸಿದ ಗುರಿಯನ್ನು ತಲುಪಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಎಲ್ಲ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು)**

**<u>ಕೋವಿಡ್-19ರ ಲಸಿಕೆ ನೀಡುವ ಕ್ರಮಗಳನ್ನು ಕುರಿತು :</u>**

ಜಿಲ್ಲೆಯಲ್ಲಿ ಪ್ರಥಮ ಹಂತವಾಗಿ ಕೋವಿಡ್ ವಾರಿಯರ್ಸ್‌ರವರಿಗೆ (ವೈದ್ಯಕೀಯ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು) ಒಟ್ಟು 767 ಲಸಿಕೆ ನೀಡಲಾಗುವುದು ಹಾಗೂ ದ್ವಿತೀಯ ಹಂತವಾಗಿ ಕೋವಿಡ್ ವಾರಿಯರ್ಸ್‌ರವರಿಗೆ (ಪೊಲೀಸ್ ಇಲಾಖೆ ಹಾಗೂ

ಕಂದಾಯ ಇಲಾಖೆಯ ಸಿಬ್ಬಂದಿ) ಒಟ್ಟು 1700 ಲಸಿಕೆಯನ್ನು ನೀಡುವ ಕುರಿತು ಪೂರ್ವಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರ ಗಮನಕ್ಕೆ ತಂದರು.

ಕೆಎಸ್‌ಆರ್‌ಟಿಸಿ ಸಿಬ್ಬಂದಿಯು ಪ್ರತಿ ನಿತ್ಯ ಜನರ ಮಧ್ಯದಲ್ಲಿ ಒಡನಾಟ ಹೊಂದಿರುವುದರಿಂದ ಅವರಿಗೂ ಕೂಡಾ ಕೋವಿಡ್-19ರ ಲಸಿಕೆಯನ್ನು ನೀಡಲು ಸಲಹೆ ನೀಡಲಾಯಿತು.

**ಕೃಷಿ ಇಲಾಖೆಯ ಪ್ರಗತಿ ಕುರಿತು :**

2019-20ನೇ ಸಾಲಿನ ಜಿಲ್ಲೆಯಲ್ಲಿ ಪ್ರವಾಹ ಹಾಗೂ ಅತಿವೃಷ್ಟಿಯಿಂದ ಕೃಷಿ ಇಲಾಖೆಯ 65,489 ಹೆಕ್ಟರ್ ಕ್ಷೇತ್ರ ಹಾಗೂ ತೋಟಗಾರಿಕೆ ಇಲಾಖೆಯ 47,036 ಹೆಕ್ಟರ್ ಕ್ಷೇತ್ರ ಹಾಗೂ ರೇಷ್ಮೆ ಇಲಾಖೆಯ 8.40 ಹೆಕ್ಟರ್ ಕ್ಷೇತ್ರ ಹೀಗೆ ಒಟ್ಟು 11,2533.40 ಹೆಕ್ಟರ ಕ್ಷೇತ್ರ ಬೆಳೆ ಹಾನಿಯಾಗಿರುತ್ತದೆ. ಬೆಳೆ ಹಾನಿಗೆ ಸಂಬಂಧಿಸಿದಂತೆ ಐದು ಹಂತಗಳಲ್ಲಿ ಒಟ್ಟು 61757 ಫಲಾನುಭವಿಗಳಿಗೆ ರೂ.5461.86 ಲಕ್ಷಗಳ ಇನ್‌ಪುಟ್ ಸಬ್ಸಿಡಿಯನ್ನು ನೇರವಾಗಿ ಸರ್ಕಾರದಿಂದ ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ಸಂತ್ರಸ್ತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಜಮೆಯಾಗಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಸಭೆಗೆ ವಿವರಿಸಿದರು.

**ರಸಗೊಬ್ಬ ವಿತರಣೆಯಲ್ಲಿ ಏನಾದರೂ ತೊಂದರೆಯಾಗಿದೆಯೇ? ಎಂದು ಪರಿಶೀಲಿಸಲಾಯಿತು.**

ಜಿಲ್ಲೆಯಲ್ಲಿ ಪ್ರತಿ ರಸಗೊಬ್ಬರಗಳ ವರ್ತಕರ ಮಾಹಿತಿಯನ್ನು ಪರಿಶೀಲಿಸುತ್ತಿದ್ದು, ರಸಗೊಬ್ಬರಗಳ ವರ್ತಕರು ಜಾಸ್ತಿ ಬೆಲೆಗೆ ಮಾರಾಟವಾಗಲೀ, ಸಂಗ್ರಹಣೆ ಮಾಡುವುದಾಗಲೀ, ಮಾಡಿದ್ದು ಕಂಡುಬಂದಲ್ಲಿ ಅಂತಹವರ ಬಗ್ಗೆ ಕಟ್ಟೆಚ್ಚರ ಕ್ರಮಗಳನ್ನು ಕೈಗೊಂಡಿದ್ದು, ಜಿಲ್ಲೆಯಲ್ಲಿ ಬೀಜ, ರಸಗೊಬ್ಬರ ಕುರಿತು ಯಾವ ಸಮಸ್ಯೆಯೂ ಇರುವುದಿಲ್ಲವೆಂದು ಜಂಟಿ ಕೃಷಿ ನಿರ್ದೇಶಕರವರು, ಸಭಾಧ್ಯಕ್ಷರ ಗಮನಕ್ಕೆ ತಂದರು.

**ಮನೆ ಹಾನಿ ಪ್ರಗತಿ ಸಮೀಕ್ಷೆ ಕುರಿತು :**

ಜಿಲ್ಲೆಯಲ್ಲಿ ಪ್ರವಾಹ ಮತ್ತು ಅತಿವೃಷ್ಟಿಯಿಂದ ಬಾಗಲಕೋಟೆ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 19, 'ಸಿ' ಕೆಟಗೆರಿ 521 ಮನೆಗಳು ಹಾನಿಯಾಗಿದ್ದು, ಬದಾಮಿ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 28, 'ಸಿ' ಕೆಟಗೆರಿ ಮನೆಗಳು 562 ಹಾನಿಯಾಗಿದ್ದು, ಗುಳೇದಗುಡ್ಡ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 5, 'ಸಿ' ಕೆಟಗೆರಿ ಮನೆಗಳು 444 ಹಾನಿಯಾಗಿದ್ದು, ಹುನಗುಂದ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 9, 'ಸಿ' ಕೆಟಗೆರಿ ಮನೆಗಳು 352 ಹಾನಿಯಾಗಿದ್ದು, ಇಲಕಲ್ಲ ತಾಲ್ಲೂಕಿನಲ್ಲಿ 'ಸಿ' ಕೆಟಗೆರಿ ಮನೆಗಳು 348 ಹಾನಿಯಾಗಿದ್ದು, ಜಮಖಂಡಿ ತಾಲ್ಲೂಕಿನಲ್ಲಿ 'ಎ' ಕೆಟಗೆರಿ ಮನೆಗಳು 3, 'ಬಿ' ಕೆಟಗೆರಿ ಮನೆಗಳು 176, 'ಸಿ' ಕೆಟಗೆರಿ ಮನೆಗಳು 467 ಹಾನಿಯಾಗಿದ್ದು, ಮುಧೋಳ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 401, 'ಸಿ' ಕೆಟಗೆರಿ ಮನೆಗಳು 809 ಹಾನಿಯಾಗಿದ್ದು, ರಬಕವಿ-ಬನಹಟ್ಟಿ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 280, 'ಸಿ' ಕೆಟಗೆರಿ ಮನೆಗಳು 469 ಹಾನಿಯಾಗಿದ್ದು, ಬೀಳಗಿ ತಾಲ್ಲೂಕಿನಲ್ಲಿ 'ಬಿ' ಕೆಟಗೆರಿ ಮನೆಗಳು 39, 'ಸಿ' ಕೆಟಗೆರಿ ಮನೆಗಳು 395 ಹಾನಿಯಾಗಿದ್ದು, ಹೀಗೆ ಒಟ್ಟು 'ಎ' ಕೆಟಗೆರಿ ಮನೆಗಳು 3 'ಬಿ' ಕೆಟಗೆರಿ ಮನೆಗಳು 957 ಹಾನಿಯಾಗಿದ್ದು, ಹಾಗೂ 'ಸಿ' ಕೆಟಗೆರಿ ಮನೆಗಳು 4367 ಹಾನಿಯಾಗಿರುತ್ತವೆ ಎಂದು ಜಿಲ್ಲಾಧಿಕಾರಿಗಳು ವಿವರಿಸಿದರು.

ಈಗಾಗಲೇ ಜಿಲ್ಲೆಯಲ್ಲಿ ಪ್ರವಾಹ ಮತ್ತು ಅತಿವೃಷ್ಟಿಯಿಂದ 'ಸಿ' ಕೆಟಗೆರಿ 4367 ಮನೆಗಳ ಫಲಾನುಭವಿಗಳಿಗೆ ಸಂಪೂರ್ಣ ಅನುದಾನವನ್ನು ಬಿಡುಗಡೆ ಮಾಡಿರುವುದಾಗಿ ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರ ಗಮನಕ್ಕೆ ತಂದರು.

**ದಿನಾಂಕ: 02.12.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೋವಿಡ್-19 ಮತ್ತು ಅತಿವೃಷ್ಟಿ ಹಾಗೂ ಪ್ರವಾಹ ಕುರಿತು ನಡೆದ ಸಭೆಯ ನಡುವಳಿಗಳು**

**ಹಾಜರಿದ್ದ ಅಧಿಕಾರಿಗಳು:-**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬಳ್ಳಾರಿ.
3. ಮುಖ್ಯ ಕಾರ್ಯನಿರ್ವಾಹಕ ಆಧಿಕಾರಿಗಳು, ಬಳ್ಳಾರಿ.
4. ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
5. ನಿರ್ದೇಶಕರು, ವಿಜಯನಗರ ವೈದ್ಯಕೀಯ ಸಂಸ್ಥೆ, ಬಳ್ಳಾರಿ.
6. ಜಿಲ್ಲಾ ಆರೋಗ್ಯ ಆಧಿಕಾರಿಗಳು, ಬಳ್ಳಾರಿ.
7. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ.
8. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬಳ್ಳಾರಿ.

******

ಜಿಲ್ಲಾಧಿಕಾರಿಗಳು ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಆಧಿಕಾರಿಗಳನ್ನು ಸ್ವಾಗತಿಸಿದರು. ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿದರು ಕೋವಿಡ್-19 ಪ್ರಸ್ತುತ ಸ್ಥಿತಿಯ ಬಗ್ಗೆ ಹಾಗೂ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ಕುರಿತು ವಿವರಣೆ ನೀಡಲು ಸೂಚಿಸಿದರು.

ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಮಾತನಾಡಿ ಜಿಲ್ಲೆಯಲ್ಲಿ ಅತೀವೃಷ್ಠಿಗೆ ಸಂಬಂಧ ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ಮತ್ತು ಕೋವಿಡ್-19 ಗೆ ಸಂಬಂಧಿಸಿದಂತೆ ಸೊಂಕು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಕುರಿತು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

## ಪ್ರಕೃತಿ ವಿಕೋಪ

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ 2020ರ ಅಗಷ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಅದ ನಷ್ಟದ ಬಗ್ಗೆ ವಿವರಿಸಲು ತಿಳಿಸಿದರು.
- ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ (1ನೇ ಅಕ್ಟೋಬರ್ ರಿಂದ 30 ನವೆಂಬರ್ ವರೆಗೆ) ಸರಾಸರಿ ಮಿ.ಮಿ. ಗೆ ಮಿ.ಮೀ. ಮಳೆಯಾಗಿರುತ್ತದೆ.
- ಸರ್ಕಾರವು 2020ರ ಅಗಷ್ಟ್ ಮಾಹೆಯಲ್ಲಿ ಅತೀವೃಷ್ಟಿ ಎಂದು 6 ತಾಲೂಕುಗಳನ್ನು (ಹಡಗಲಿ, ಹರಪನಹಳ್ಳಿ, ಹ.ಬೊ.ಹಳ್ಳಿ. ಹೊಸಪೇಟೆ, ಕಂಪ್ಲಿ ಮತ್ತು ಸಿರುಗುಪ್ಪ) ಹಾಗೂ ಸೆಪ್ಟೆಂಬರ್ ತಿಂಗಳ ಮಾಹೆಯಲ್ಲಿ 03 ತಾಲೂಕಗಳನ್ನು (ಬಳ್ಳಾರಿ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳು) ಹಾಗೂ ಅಕ್ಟೋಬರ್ ತಿಂಗಳ ಮಾಹೆಯಲ್ಲಿ 02 ತಾಲೂಕಗಳನ್ನು (ಕುರುಗೋಡು ಮತ್ತು ಕೊಟ್ಟೂರು ತಾಲ್ಲೂಕುಗಳು) ಅತೀವೃಷ್ಠಿ ಎಂದು ಘೋಷಣೆ ಮಾಡಿರುತ್ತದೆ.

- ಜಿಲ್ಲೆಯಲ್ಲಿ 2020ರ ಆಗಷ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಅತೀವೃಷ್ಠಿಯಿಂದ 11 ತಾಲ್ಲೂಕುಗಳಲ್ಲಿ ಒಟ್ಟು 1008 ಮನೆಗಳು ಹಾನಿಯಾಗಿವೆ ಎಂದು ತಿಳಿಸಿದರು. ಅದರಲ್ಲಿ 15 ಮನೆಗಳು ತೀವ್ರ ತರಹ ("ಬಿ" ವರ್ಗ) ಮತ್ತು 993 ಮನೆಗಳು ಭಾಗಶಃ ಹಾನಿಯಾಗಿವೆ ("ಸಿ" ವರ್ಗ) ಎಂದು ತಿಳಿಸಿದರು.
- ಅಕ್ಟೋಬರ್ ಮಾಹೆಯಲ್ಲಿ ಘೋಷಣೆಯಾದ ಕಂಪ್ಲಿ ಮತ್ತು ಕೊಟ್ಟೂರು ತಾಲ್ಲೂಕುಗಳ ಲಾಗಿನ್ ಸಮಸ್ಯೆ ಬಗೆಹರಿದಿದ್ದು ಸದರಿ ತಾಲ್ಲೂಕುಗಳ ಆರ್.ಜಿ.ಆರ್.ಹೆಚ್.ಸಿ.ಎಲ್. ಲಾಗಿನ್ ಸಕ್ರಿಯಗೊಂಡಿದ್ದು ೀ ತಾಲ್ಲೂಕುಗಳ ಹಾನಿಯಾದ ಎಲ್ಲಾ ಮನೆಗಳ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿದರು.
- ಈವರೆಗೆ 11 ತಾಲ್ಲೂಕುಗಳಲ್ಲಿ ಹಾನಿಯಾದ ಎಲ್ಲಾ 1008 ಮನೆಗಳ ವಿವರಗಳನ್ನು RGRHCL login ನಲ್ಲಿ ನಮೂದಿಸಿದ್ದು ಎಲ್ಲಾ 1008 ಮನೆಗಳಿಗೆ ಡಿ.ಸಿ. ಲಾಗಿನ್ ನಲ್ಲಿ ಅನುಮೋದನೆ ನೀಡಲಾಗಿದ್ದು, ಈವರೆಗೆ 885 ಮನೆಗಳ ಜಿ.ಪಿ.ಎಸ್. ಕಾರ್ಯ ಪೂರ್ಣಗೊಂಡಿದ್ದು ಇದರ ಪೈಕಿ 475 ಮನೆಗಳಿಗೆ ರೂ.50000/- ದಂತೆ ಪರಿಹಾರ ಮೊತ್ತವನ್ನು ವಿತರಣೆ ಮಾಡಲಾಗಿದೆ.
- ಜಿಲ್ಲೆಯಲ್ಲಿ 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಾಹೆಯಲ್ಲಿ ಭಾರಿ ಮಳೆಯಿಂದ ಒಟ್ಟು 10384.66 ಹೆಕ್ಟರ್ ಬೆಳೆ ನಷ್ಟವಾಗಿರುತ್ತದೆ ಎಂದು ತಿಳಿಸುತ್ತಾ, ಸರ್ಕಾರದ ನಿರ್ದೇಶನದಂತೆ ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡಲಾಗುತ್ತಿದ್ದು ಈವರೆಗೆ ಪರಿಹಾರ ತಂತ್ರಾಂಶದಲ್ಲಿ ಒಟ್ಟು 8145.00 ಹೆಕ್ಟರ್ ಬೆಳೆ ವಿವರಗಳನ್ನು ಡೇಟಾ ಎಂಟ್ರಿ ಮಾಡಲಾಗಿದ್ದು ಇನ್ನು ಬಾಕಿ ವಿಸ್ತೀರ್ಣವನ್ನು 07 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.
- ಇದಲ್ಲದೇ ಜಿಲ್ಲೆಯಲ್ಲಿ ಆಗಸ್ಟ್ 2020 ರಿಂದ ನವೆಂಬರ್ 2020 ರವರೆಗೆ ಪ್ರಕೃತಿ ವಿಕೋಪದಿಂದ ಮರಣ ಹೊಂದಿದ ಒಟ್ಟು 63 ಪ್ರಾಣಿ ಹಾನಿ ಪ್ರಕರಣಗಳಿಗೆ ಒಟ್ಟು ರೂ.4.61 ಲಕ್ಷ ಪರಿಹಾರ ನೀಡಲಾಗಿದೆ ಹಾಗೂ 04 ಜೀವ ಹಾನಿಗೆ ಒಟ್ಟು ರೂ.20.00 ಲಕ್ಷ ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು. ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳಿಂದ ಮಾಹಿತಿಯನ್ನು ಪಡೆದು ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದ್ದು, ಪ್ರತ್ಯೇಕವಾಗಿ ಈ ಮೂಲಭೂತ ಸೌಕರ್ಯಗಳ ದುರಸ್ಥಿ ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂದು ತಿಳಿಸಿದರು.
- ಡಿಸೆಂಬರ್ 2019 ರಿಂದ ಪ್ರಾರಂಭಿಸಲಾಗಿದ್ದ "Training on Disaster Management and First Aid to Vas, RIs, and PDOs" ತರಬೇತಿಯನ್ನು ಎಲ್ಲಾ ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದ್ದು, ಇದರಿಂದ ಮುಂಬರುವ ದಿನಗಳಲ್ಲಿ ವಿವಿಧ ತರಹದ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ತಕ್ಷಣವೇ ಗ್ರಾಮ ಮಟ್ಟಗಳಲ್ಲಿ ಎದುರಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1) 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹಾನಿಯಾದ ಮನೆಗಳ ಡೇಟಾ ಎಂಟ್ರಿ ಪೂರ್ಣಗೊಂಡು ಪರಿಹಾರ ವಿತರಿಸದೇ ಬಾಕಿ ಇರುವ 518 ಮನೆಗಳಿಗೆ ಸರ್ಕಾರ ನಿಗಧಿಪಡಿಸಿದ ಪರಿಷ್ಕೃತ ಧರದಲ್ಲಿ ಪರಿಹಾರ ವಿತರಣೆ ಮಾಡಲು ಸೂಚಿಸಿದರು.

2) 2020 ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಹಾನಿಯಾದ ಬೆಳೆಗಳ ಹಾನಿಯ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಮಾಡಲು ಬಾಕಿ ಇರುವ 2239 ಹೆಕ್ಟರ್ ವಿಸ್ತೀರ್ಣವನ್ನು ಒಂದು ವಾರದೊಳಗೆ ಡೇಟಾ ಎಂಟ್ರಿ ಮಾಡಿ ಪೂರ್ಣಗೊಳಿಸಲು ಸೂಚಿಸಿದರು.

## ಕೋವಿಡ್-19

- **ಕೊವೀಡ್-19 ಪರೀಕ್ಷೆ:-** ಜಿಲ್ಲೆಯಲ್ಲಿ ಒಟ್ಟಾರೆ 338062 ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಇದರಲ್ಲಿ RTPCR-160477 ಹಾಗೂ ANTIGEN-177585 ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 38242 ದೃಢ ಪ್ರಕರಣಗಳು ಪತ್ತೆಯಾಗಿದ್ದು, ಈಗ ಕೇವಲ 223 ಸಕ್ರೀಯ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು ಜಿಲ್ಲೆಯಲ್ಲಿ ಒಟ್ಟು 582 ಮರಣ ಹೊಂದಿದ ಪ್ರಕರಣಗಳು ವರದಿಯಾಗಿರುತ್ತವೆ ಎಂದು ತಿಳಿಸಿದರು.
- ಕೋವಿಡ್- 19 ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಳ್ಳಾರಿ ಜಿಲ್ಲೆಗೆ ಪ್ರತಿ ದಿನ RAT 400 ಮತ್ತು RTPCR-2200 ಕೋವಿಡ್-19 ಪರೀಕ್ಷೆಯ ಗುರಿ ನಿಗಧಿಪಡಿಸಲಾಗಿದ್ದು, ಆದರೆ ದಿನ ನಿತ್ಯ ಸರಾಸರಿ 1500 ಪರೀಕ್ಷೆಗಳು ಮಾತ್ರ ಮಾಡಲಾಗುತ್ತಿದೆ ಇದನ್ನು ಹೆಚ್ಚಿಸುವ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.
- ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ರಾಜ್ಯ ಮಟ್ಟದಿಂದ ನಿಗಧಿಪಡಿಸಿರುವ ಗುರಿಯಂತೆ RTPCR ಪರೀಕ್ಷೆಯಲ್ಲಿ ಗುರಿ ತಲುಪುವುದು ಅತೀ ಮುಖ್ಯವಾಗಿದ್ದು, ಸರ್ಕಾರದ ನಿರ್ದೇಶನದಂತೆ ನಿಗಧಿಪಡಿಸಿರುವ ಗುರಿಯನ್ನು ಸಾಧಿಸಲು ನಿರ್ದೇಶನಗಳನ್ನು ನೀಡಿದರು.
- ಇದಕ್ಕೆ ಜಿಲ್ಲಾಧಿಕಾರಿಗಳು ಮಾತನಾಡಿ, ನಿಗಧಿತ ಪರೀಕ್ಷೆಗಳ ಗುರಿಯನ್ನು ತಲುಪಲು ಪ್ರತಿ ತಾಲ್ಲೂಕಿಗೆ ಪರೀಕ್ಷೆ ಮಾಡಲು ಗುರಿಯನ್ನು ನಿಗಧಿಪಡಿಸಲಾಗಿದೆ ಎಂದು ತಿಳಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ No. of patients with NIL PC contact ಸಂಖ್ಯೆ ಹೆಚ್ಚಿರುವುದರಿಂದ ಇದರ ಬಗ್ಗೆ ಗಮನ ಹರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಸಂಪರ್ಕಿತರನ್ನು ಪತ್ತೆಹಚ್ಚಲು ಕ್ರಮ ವಹಿಸಲು ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ HOME-ISOLATION ಆರೈಕೆ ಪಡೆಯುತ್ತಿರುವವರಿಗೆ ಆರೋಗ್ಯ ಇಲಾಖೆಯವರು ಮನೆಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿರುವ ಸಂಖ್ಯೆ ತುಂಬಾ ಕಡಿಮೆ ಇದ್ದು ಇದನ್ನು ಹೆಚ್ಚಿಸಲು ಕ್ರಮ ವಹಿಸುವಂತೆ ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ Health Survey ಕಾರ್ಯ ಶೇ.93.86% ಪೂರ್ಣಗೊಂಡಿದ್ದು ಆದಷ್ಟು ಬೇಗನೆ ಶೇ.100% ರಷ್ಟು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.
- **ಕೊವೀಡ್-19 ಪ್ರಕರಣಗಳ ಮರಣಕ್ಕೆ ಸಂಬಂಧಿಸಿದಂತೆ:** ಕಳೆದ 7 ದಿನಗಳಲ್ಲಿ ಒಟ್ಟು 123 ದೃಢ ಪ್ರಕರಣಗಳು ವರದಿಯಾಗಿದ್ದು ಇದರ ಪೈಕಿ ಒಟ್ಟು 03 ಪ್ರಕರಣಗಳು ಮರಣ ಹೊಂದಿರುವುದಾಗಿ ಸಭೆಗೆ ವಿವರಿಸಿದರು. ಮರಣ ಪ್ರಮಾಣ ಕಡಿಮೆ ಮಾಡಲು ಮುಂಚಿತವಾಗಿಯೇ ILI, SARI & ಆಮ್ಲಜನಕ ಕೊರತೆ ಇರುವ ಪ್ರಕರಣಗಳನ್ನು ಮೊದಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

➢ ಜಿಲ್ಲೆಯಲ್ಲಿ ಒಟ್ಟು 1128 Oxygenated beds, 116 ventilator beds & 210 ICU beds ಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸುತ್ತಾ, ಪ್ರಸ್ತುತ ಯಾವುದೇ ತರಹದ ಬೆಡ್ಸ್ ಗಳ ತೊಂದರೆ ಇರುವುದಿಲ್ಲ ಎಂದು ತಿಳಿಸಿದರು.

➢ ಪ್ರಸ್ತುತ ಜಿಲ್ಲೆಯಲ್ಲಿ ಕೋವಿಡ್-19 ಪ್ರಕರಣಗಳು ಕಡಿಮೆಯಾಗಿದ್ದು, ಪರಿಸ್ಥಿತಿ ನಿಯಂತ್ರಣದಲ್ಲಿರುತ್ತದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1) ಜಿಲ್ಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಕೋವಿಡ್ ಕರ್ತವ್ಯ ನಿರತ ಸರ್ಕಾರಿ ನೌಕರರು ಕೋವಿಡ್-19 ಸೋಂಕಿನಿಂದ ಮೃತ ಹೊಂದಿದ ಬಾಕಿ ಇರುವ ಎಲ್ಲಾ ಪ್ರಕರಣಗಳಲ್ಲಿ ಕೂಡಲೇ ನಿಯಮಾನುಸಾರ ಪರಿಹಾರ ವಿತರಣೆ ಮಾಡಲು ಕ್ರಮ ವಹಿಸುವುದು.
2) ಕೋವಿಡ್ ಪರೀಕ್ಷೆಯಲ್ಲಿ ಸರ್ಕಾರ ನಿಗಧಿಪಡಿಸಿದ ಜಿಲ್ಲಾವಾರು ಗುರಿಯನ್ನು ಪ್ರತಿ ದಿನ ತಲುಪುವಂತೆ ಕ್ರಮ ವಹಿಸಲು ಸೂಚಿಸಿದರು.
3) ಜನವರಿ 2021 ರಿಂದ COVID-19 Second Wave ಬರುವ ಸಾಧ್ಯತೆಗಳು ಹೆಚ್ಚಿರುವುದರಿಂದ ಸರ್ಕಾರದ ನಿರ್ದೇಶನದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗಳನ್ನು ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.
4) ಎಲ್ಲಾ ದೃಢ ಪ್ರಕರಣಗಳಿಗೆ ಸಂಬಂಧ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿ ಪರೀಕ್ಷೆಗೆ ಒಳಪಡಿಸಲು ಕ್ರಮ ವಹಿಸುವಂತೆ ಸೂಚಿಸಿದರು.
5) ಕೋವಿಡ್ ಸೊಂಕು ತಡೆಗಟ್ಟಲು ಸಾರ್ವಜನಿಕರು ಮಾಸ್ಕ್ ಗಳನ್ನು ಕಡ್ಡಾಯವಾಗಿ ಧರಿಸಿ ಓಡಾಡಲು ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು ಕ್ರಮ ವಹಿಸುವಂತೆ ತಪ್ಪಿದ್ದಾಲ್ಲಿ ಸರ್ಕಾರ ನಿಗಧಿಪಡಿಸಿದ ದಂಡವನ್ನು ವಸೂಲಿ ಮಾಡಲು ಕ್ರಮ ವಹಿಸುವಂತೆ ಸೂಚಿಸಿದರು.
6) ILI ಮತ್ತು SARI ಹಾಗೂ ಆಮ್ಲಜನಕ 94% ಕಡಿಮೆಯಿರುವ ಜನರನ್ನು ಕೂಡಲೇ ಗುರುತಿಸಿ ಪರೀಕ್ಷೆಗೆ ಒಳಪಡಿಸಿ ದೃಢ ಪ್ರಕರಣಗಳಲ್ಲಿ ಮುಂಚಿತವಾಗಿಯೇ ಚಿಕಿತ್ಸೆ ನೀಡಲು ಕ್ರಮ ವಹಿಸಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಎಂ.ಎಸ್.ಶ್ರೀಕರ್ ಭಾ.ಆ.ಸೇ)
ಆಯುಕ್ತರು, ವಾಣಿಜ್ಯ ತೆರಿಗೆಗಳ ಇಲಾಖೆ
ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

**ದಿನಾಂಕ:17-12-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಾರ್ಯನಿರ್ವಹಣ ಬಗ್ಗೆ ನಡೆಸಿದ ಸಭೆಯ ವರದಿ.**

1) ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು 42 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ ಇಲಾಖಾವಾರು ವಿದ್ಯಾರ್ಥಿನಿಲಯಗಳ ವಿವರ ಈ ಕೆಳಗಿನಂತಿರುತ್ತದೆ.
    - ಸಮಾಜ ಕಲ್ಯಾಣ ಇಲಾಖೆ – 06 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
    - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – 33 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
    - ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – 03 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
2) ಎಲ್ಲಾ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳನ್ನು ಉನ್ನತ ಶಿಕ್ಷಣ ಇಲಾಖೆ ದಿನಾಂಕ:09-11-2020 ರ ಆದೇಶದಂತೆ ದಿನಾಂಕ:17-11-2020 ರಿಂದಲೇ ಪ್ರಾರಂಭ ಮಾಡಲಾಗಿರುತ್ತದೆ.
3) ಇದುವರೆಗೂ ಸದರಿ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಈ ಕೆಳಗಿನಂತೆ ಕೇವಲ ಅಂತಿಮ ವರ್ಷದಲ್ಲಿ ಪದವಿ/ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.
    - ಸಮಾಜ ಕಲ್ಯಾಣ ಇಲಾಖೆ – 43 ಮೆಟ್ರಿಕ್ ನಂತರ ವಿದ್ಯಾರ್ಥಿಗಳು
    - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – 414 ಮೆಟ್ರಿಕ್ ನಂತರ ವಿದ್ಯಾರ್ಥಿಗಳು
    - ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – ಯಾರೂ ಇರುವುದಿಲ್ಲ.
4) ಮೂರು ಇಲಾಖೆಗಳ ವಿದ್ಯಾರ್ಥಿನಿಲಯಗಳನ್ನು ಸರ್ಕಾರ ಹೊರಡಿಸಿರುವ ಪ್ರಮಾಣಿತ ಕಾರ್ಯಾಚರಣೆಯ ವಿಧಾನದಂತೆ ಪ್ರಾರಂಭಿಸಿರುತ್ತಾರೆ. ಎಲ್ಲಾ ವಿದ್ಯಾರ್ಥಿನಿಲಯದಲ್ಲಿ ಕಡ್ಡಾಯವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುತ್ತಿರುವ ಬಗ್ಗೆ ವರದಿ ಸಲ್ಲಿಕೆಯಾಗಿರುತ್ತದೆ.
5) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ಕೊಠಡಿಯಲ್ಲಿ ಗರಿಷ್ಠ 03 ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿರುತ್ತದೆ.
6) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆ ಸುಮಾರು 3900 ಇದ್ದು, ಇದುವರೆಗೂ ಕೇವಲ 457 ವಿದ್ಯಾರ್ಥಿಗಳು ಮಾತ್ರ ದಾಖಲಾಗಿರುವುದರಿಂದ ಸಾಮಾಜಿಕ ಅಂತರ ಕಾಯ್ದುಕೊಂಡು, ನಿಲಯಗಳಲ್ಲಿ ಶುಚಿತ್ವ ಕಾಪಾಡಿಕೊಂಡು ನಿರ್ವಹಣೆ ಮಾಡುತ್ತಿದ್ದು, ಸದರಿ ನಿರ್ವಹಣೆಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ.
7) ಬಾಡಿಗೆ ಕಟ್ಟಡದಲ್ಲಿಯೂ ಸಹ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕಡಿಮೆ ಇರುವುದರಿಂದ SOP ಅನ್ವಯ ಕಾರ್ಯನಿರ್ವಹಣೆ ಮಾಡುವುದು ಸುಲಭ ಸಾಧ್ಯವಾಗಿದೆ.
8) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಅಡುಗೆ ಕೋಣೆ ಹಾಗೂ ಊಟದ ತಯಾರಿಕೆಯಲ್ಲಿಯೂ ಸಹ ಸಂಬಂಧಪಟ್ಟ ಆಡಳಿತ ಇಲಾಖೆಗಳು ಹೊರಡಿಸಿರುವ SOP ಅನ್ವಯ ಎಲ್ಲಾ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.
9) ದಾಖಲಾದ ಎಲ್ಲಾ ವಿದ್ಯಾರ್ಥಿಗಳಿಗೆ ಕುಡಿಯಲು ಬಿಸಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.
10) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಪ್ರತ್ಯೇಕವಾಗಿ Isolation ಕೊಠಡಿಯ ವ್ಯವಸ್ಥೆಯನ್ನು ಕಲ್ಪಿಸಲಾಗಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲಾಗಿರುತ್ತದೆ.
11) ಮುಖ್ಯವಾಗಿ ವಿದ್ಯಾರ್ಥಿನಿಲಯಗಳಲ್ಲಿನ ಶೌಚಾಲಯಗಳನ್ನು SOP ಅನ್ವಯ ನಿಯಮಿತವಾಗಿ ಸ್ವಚ್ಛಗೊಳಿಸುತ್ತಿರುವ ಬಗ್ಗೆ ದೃಡಪಡಿಸಿಕೊಳ್ಳಲಾಗಿರುತ್ತದೆ.

## ದಿನಾಂಕ:16-12-2020 ರಲ್ಲಿದ್ದಂತೆ ವಿದ್ಯಾರ್ಥಿ ನಿಲಯಗಳಿಗೆ ಹಾಜರಾದ ನೈಜ ವಿದ್ಯಾರ್ಥಿಗಳ ವಿವರ

ಜಿಲ್ಲೆ: ಉತ್ತರ ಕನ್ನಡ ಜಿಲ್ಲೆ

| ಕ್ರ.ಸಂ | ಪ್ರಾರಂಭಿಸಲಾದ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ನೈಜವಾಗಿ ವಾಸ್ತವ್ಯವಿರುವ ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| 1 | 2 | 3 | 4 | 5 |
| 1 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕಾರವಾರ | 1 | 1 | |
| 2 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕಾರವಾರ | 1 | 1 | |
| 3 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕುಮಟಾ | 2 | 2 | |
| 4 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಶಿರಸಿ | 23 | 23 | |
| 5 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಶಿರಸಿ | 15 | 15 | |
| 6 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಮುಂಡಗೋಡ | 1 | 1 | |
| | ಒಟ್ಟು | 43 | 43 | |

ಸಹಿ ಇದೆ/-

ಉಪನಿರ್ದೇಶಕರು

ಸಮಾಜ ಕಲ್ಯಾಣ ಇಲಾಖೆ

ಉತ್ತರಕನ್ನಡ ಜಿಲ್ಲೆ, ಕಾರವಾರ

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಮಾರ್ಗಸೂಚಿಯನುಸಾರ ಪ್ರವೇಶ ಕಲ್ಪಿಸಿರುವ ಬಗ್ಗೆ

| ಕ್ರ.ಸಂ | ತಾಲೂಕು | ದಿನಾಂಕ: **17.12.2020** | |
|---|---|---|---|
| | | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ನೈಜವಾಗಿ ವಾಸ್ತವ್ಯವಿರುವ ವಿದ್ಯಾರ್ಥಿಗಳ ಸಂಖ್ಯೆ |
| 1 | ಕಾರವಾರ | 73 | 73 |
| 2 | ಅಂಕೋಲಾ | 2 | 2 |
| 3 | ಕುಮಟಾ | 5 | 5 |
| 4 | ಹೊನ್ನಾವರ | 17 | 17 |
| 5 | ಭಟ್ಕಳ | 3 | 3 |
| 6 | ಶಿರಸಿ | 39 | 39 |
| 7 | ಸಿದ್ದಾಪುರ | 50 | 50 |
| 8 | ಯಲ್ಲಾಪುರ | 9 | 9 |
| 9 | ಮುಂಡಗೋಡ | 17 | 17 |
| 10 | ಹಳಿಯಾಳ | 195 | 195 |
| 11 | ಜೋಯಿಡಾ | 4 | 4 |
| | ಒಟ್ಟು | **414** | **414** |

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಉತ್ತರಕನ್ನಡ, ಕಾರವಾರ

Date: 19-12-2020

# Review of COVID-19 prevention and mitigation measures taken in Uttara Kannada district

Uttara Kannada District has around 16 Lakh population (As per projections from 2011 census). The geographical area of the district is 10,291km$^2$ out of which 80% is forest and 20% is non forest area. The district has 12 taluks, 3 CMCs, 4 TMCs, 5 TPs, 12 Taluk Panchayats, and 231 GPs. 71% of population are in rural areas and 29% in urban areas. The density of the district is 140/km$^2$. The rural population is scattered and population density is low in rural areas. Apart from District Magistrate, there are 4 Assistant Commissioners, 12 Tahsildars, and 35 Revenue Inspectors.

In Uttara Kannada district, the total positive cases reported are 14106. The total deaths due to covid-19 stands at 184 of which death audit is done for 164 cases, 18 deaths occurred outside the district and only 2 are pending for death audit. The active hospitalized cases as on 18-12-2020 is 20 cases and home isolation is 78 cases. Taluk wise abstract is given below:

| Taluk Name | Cured | | Active | | | | Death | | Grand Total |
|---|---|---|---|---|---|---|---|---|---|
| | | | Today | Hospitalized | Home Isolation | Total | | | |
| | Today | till 18-12-2020 | | till 18-12-2020 | till 18-12-2020 | till 18-12-2020 | Today | till 18-12-2020 | |
| Karwar | 1 | 1916 | 5 | 13 | 17 | 30 | 0 | 21 | 1967 |
| Ankola | 3 | 888 | 0 | 0 | 0 | 0 | 0 | 10 | 898 |
| Kumta | 2 | 1867 | 3 | 1 | 12 | 13 | 0 | 27 | 1907 |
| Honnavar | 0 | 1282 | 0 | 0 | 7 | 7 | 0 | 24 | 1313 |
| Bhatkal | 0 | 1179 | 0 | 2 | 2 | 4 | 0 | 18 | 1201 |
| Sirsi | 1 | 1585 | 4 | 3 | 11 | 14 | 0 | 20 | 1619 |
| Siddapur | 5 | 662 | 0 | 0 | 16 | 16 | 0 | 7 | 685 |
| Yellapur | 6 | 898 | 3 | 0 | 7 | 7 | 0 | 8 | 913 |
| Mundgod | 1 | 1491 | 1 | 0 | 4 | 4 | 0 | 12 | 1507 |
| Haliyal | 0 | 1810 | 0 | 0 | 0 | 0 | 0 | 34 | 1844 |
| Joida | 1 | 247 | 1 | 1 | 2 | 3 | 0 | 2 | 252 |
| **Grand Total** | **20** | **13825** | **17** | **20** | **78** | **98** | **0** | **183** | **14106** |

The total Case Fatality Rate (CFR) is reported to be 1.3% and the total positivity rate to be 6.4%. Last 7 days trend of positivity rate is 1.36% which is much lower than the state prescribed rate. Taluk wise details are given below:

| Samples positivity rate (Last 7 Days) | | | | |
|---|---|---|---|---|
| S.No | Date | Total Tests | Samples Positive | Positivity(%) |
| 1 | 12/12/2020 | 894 | 17 | 1.9 |
| 2 | 13/12/2020 | 756 | 11 | 1.46 |

| | | | | |
|---|---|---|---|---|
| 3 | 14/12/2020 | 651 | 14 | 2.15 |
| 4 | 15/12/2020 | 690 | 14 | 2.03 |
| 5 | 16/12/2020 | 1754 | 18 | 1.03 |
| 6 | 17/12/2020 | 1652 | 14 | 0.85 |
| 7 | 18/12/2020 | 935 | 1 | 0.11 |
| | **Total** | **7332** | **89** | **1.36** |

* Data Abstract from ICMR Portal

On an average the district is conducting 1300 RT-PCR tests per day and 250-270 RAT tests per day. Till now, a total of 1,55,088 RT-PCR tests are done and 66811 RAT tests are done. Taluk wise abstract is given below:

**Sample Tested Per Lakh Population Detail**

| Sl. No. | Taluka | Population | RTPCR | RAT | Total | Positive | Death | Sample/Lakh Population | Positivity % | Fatality% |
|---|---|---|---|---|---|---|---|---|---|---|
| 1 | Ankola | 126804 | 12925 | 5564 | 18489 | 898 | 10 | 14580.8 | 4.9 | 1.1 |
| 2 | Bhatkal | 165595 | 17718 | 5495 | 23213 | 1201 | 18 | 14017.9 | 5.2 | 1.5 |
| 3 | Haliyal | 171913 | 18193 | 9389 | 27582 | 1844 | 34 | 16044.2 | 6.7 | 1.8 |
| 4 | Honnavar | 175408 | 15863 | 4789 | 20652 | 1313 | 24 | 11773.7 | 6.4 | 1.8 |
| 5 | Joida | 48109 | 6135 | 2645 | 8780 | 252 | 2 | 18250.2 | 2.9 | 0.8 |
| 6 | Karwar | 156170 | 16866 | 7437 | 24303 | 1967 | 21 | 15561.9 | 8.1 | 1.1 |
| 7 | Kumta | 166651 | 14028 | 5069 | 19097 | 1907 | 27 | 11459.3 | 10 | 1.4 |
| 8 | Mundgod | 143034 | 16843 | 9285 | 26128 | 1507 | 12 | 18267 | 5.8 | 0.8 |
| 9 | Siddapur | 107213 | 9964 | 4326 | 14290 | 685 | 7 | 13328.6 | 4.8 | 1 |
| 10 | Sirsi | 202679 | 15438 | 5656 | 21094 | 1619 | 20 | 10407.6 | 7.7 | 1.2 |
| 11 | Yellapur | 86060 | 11115 | 7156 | 18271 | 913 | 8 | 21230.5 | 5 | 0.9 |
| Total | | 1549636 | 155088 | 66811 | 221899 | 14106 | 183 | 14319.4 | 6.4 | 1.3 |

The district has sufficient number of facilities at Dedicated Covid Hospital which is at District level. A total of 375 beds for covid positive patients, 72 ICU beds, 232 Oxygenated beds, 115 oxygen cylinders, and 31 ventilators are available with the dedicated covid hospital. Apart from this, the district is having enough resources in dedicated covid health centre which is at taluk level. The district abstract of all combined is given below:

**District Facility Abstract**

| Sl No | Particular | Total Number | Remarks |
|---|---|---|---|
| 1 | Total Number of beds FOR COVID POSITIVE | 950 | Details includes DCH and DCHC |
| 2 | Total ICU Beds | 96 | Details includes DCH and DCHC |

| | | | |
|---|---|---|---|
| 3 | Total Oxygenated Beds | 449 | Details includes DCH and DCHC |
| 4 | Total ventilators | 48 | Details includes DCH and DCHC |

The ground work for the Covid-19 vaccine roll out has started in the district. Two committees are formed one under Deputy Commissioner and the other under the District Health Officer. Under the chairmanship of Deputy Commissioner - District Task Force for Immunization (DTFI) is formed and under the chairmanship of HOD, Pediatric Department, KRIMS – Adverse Event Following Immunization (AEFI) committee. 4 meetings of DTFI and 1 meeting of AEFI are already conducted.

As per the Governments' instruction, the vaccine will be first administered to Health Care workers (HCW), Frontline workers and to people aged above 50 years with co-morbidities. The Central Government has developed a platform (Co-WIN) to update the beneficiaries list of each district. The abstract of the progress of the data entry of Uttara Kannada district is given below:

| **Total Facilities** | | **Facilities Added To CoWIN** | | **HCW Beneficiaries** | **Total Beneficiaries uploaded To CoWIN** | **%** |
|---|---|---|---|---|---|---|
| GOVT | 101 | 101 | 100% | 6676 | 7287 | 109% |
| PRIVATE | 479 | 479 | 100% | 4778 | 4597 | 96% |
| TOTAL | 580 | 580 | 100% | 11454 | 11884 | 104% |

The district has sufficient cold storage facility to store and transport the vaccines. The total available Ice Lined Refrigerators (ILR) are 106 and Deep Freezer 105. The details of the cold storage in the district are given below:

| **ILR & De Freezer Capacity Details** | | | | | |
|---|---|---|---|---|---|
| **Sl No** | **Equipment** | **Model No** | **Capacity (Ltr)** | **Doses Capacity** | **Total No Of Model ILR** |
| 1 | ILR | V.L.S 300 | 98 LTRS | 22,000 | 22 |
| 2 | ILR | V.L.S 400 | 145 LTRS | 40,000 | 2 |
| 3 | ILR | H.B.C 200 | 145 LTRS | 40,000 | 5 |
| 4 | ILR | M.K. 304 | 145 LTRS | 40,000 | 3 |
| 5 | ILR | H.B.C 70 | 45 LTRS | 16,000 | 30 |
| 6 | ILR | M.K. 144 | 45 LTRS | 16,000 | 41 |
| 7 | ILR | M.K. 142 | 45 LTRS | 16,000 | 3 |
| **TOTAL NO OF ILR** | | | | | **106** |

| | | |
|---|---|---|
| 1 | ILR LARGE | 10 |
| 2 | ILR SMALL | 96 |
| 3 | WIC WALK IN COOLER | 1 |

| Sl No | Equipment | Model No | Capacity (Ltr) | Ice Packs Capacity | Total No Of Model DE Freezer |
|---|---|---|---|---|---|
| 1 | DE FREEZER | H.B.D 116 | 97 LTRS | 150 | 59 |
| 2 | DE FREEZER | H.B.D 286 | 258 LTRS | 300 | 3 |
| 3 | DE FREEZER | M.F 114 | 97 LTRS | 150 | 20 |
| 4 | DE FREEZER | M.F 144 | 97 LTRS | 150 | 18 |
| 5 | DE FREEZER | M.F 314 | 258 LTRS | 300 | 4 |
| 6 | DE FREEZER | S.B 140 | 97 LTRS | 150 | 1 |
| **TOTAL NO OF D/F** | | | | | **105** |

| | | |
|---|---|---|
| **1** | **D/F LARGE** | **7** |
| **2** | **D/F SMALL** | **98** |

By and large, the arrangements and activities undertaken for covid is satisfactory

KPM 18/12/20

**(K P Mohan Raj IAS)**
Inspector General of Registration
& Commissioner of Stamps,
&
District Incharge Secretary,
Uttara Kannada district, Karwar

## ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವರದ್ಧಿ ಯೋಜನೆಯಡಿ ಮಂಜೂರಿ/ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ವಿವರ

| ಕ್ರ. ಸಂ | ವಿಧಾನಸಭಾ/ಪರಿಷತ್ ಕ್ಷೇತ್ರ | ವರ್ಷ | ಮಂಜೂರಿ ನೀಡಿದ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿದ ಕಾಮಗಾರಿಗಳ ಮೊತ್ತ | ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿ ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ಮೊತ್ತ | ಆಡಳಿತಾತ್ಮಕ ಮಂಜೂರಿ ನೀಡಲು ಬಾಕಿ ಇರುವ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿದ ಆಡಳಿತಾತ್ಮಕ ಮಂಜೂರಿ ನೀಡಲು ಬಾಕಿ ಇರುವ ಕಾಮಗಾರಿಗಳ ಮೊತ್ತ | ಷರಾ |
|---|---|---|---|---|---|---|---|---|---|
| 1 | ಕಾರವಾರ-ಅಂಕೋಲಾ | 2017-18 | 65 | 178.64 | 62 | 170.6387 | 3 | 8.0013 | |
| | | 2018-19 | 7 | 39.02 | 4 | 26.52 | 3 | 12.50 | |
| | | 2019-20 | 1 | 30.40 | 0 | 0.00 | 1 | 30.40 | |
| 2 | ಕುಮಟಾ ಹೊನ್ನಾವರ | 2017-18 | 40 | 155.57 | 32 | 128.43 | 8 | 27.14 | |
| | | 2018-19 | 44 | 149.52 | 34 | 119.37 | 10 | 30.15 | |
| | | 2019-20 | 12 | 33.37 | 12 | 33.37 | 0 | 0.00 | |
| 3 | ಭಟ್ಕಳ ಹೊನ್ನಾವರ | 2017-18 | 44 | 195.00 | 43 | 190.00 | 1 | 5.00 | |
| | | 2018-19 | 30 | 121.95 | 30 | 121.95 | 0 | 0.00 | |
| | | 2019-20 | 11 | 49.5 | 11 | 49.50 | 0 | 0.00 | |
| 4 | ಶಿರಸಿ ಸಿದ್ದಾಪುರ | 2017-18 | 40 | 103.33 | 40 | 103.33 | 0 | 0.00 | |
| | | 2018-19 | 60 | 80.165 | 57 | 75.665 | 3 | 4.5 | |
| | | 2019-20 | 10 | 47.5 | 10 | 47.5 | 0 | 0.00 | |
| 5 | ಮುಂಡಗೋಡ-ಬನವಾಸಿ | 2017-18 | 71 | 91.5 | 71 | 91.5 | 0 | 0.00 | |
| | | 2018-19 | 45 | 39.00 | 42 | 29.50 | 3 | 9.50 | |
| | | 2019-20 | 1 | 46.5 | 1 | 46.5 | 0 | 0.00 | |
| 6 | ಹಳಿಯಾಳ-ಜೋಯಿಡಾ | 2017-18 | 25 | 146.55 | 21 | 124.05 | 0 | 22.50 | |
| | | 2018-19 | 29 | 153.19 | 26 | 136.09 | 0 | 17.10 | |
| | | 2019-20 | 7 | 41.64 | 7 | 41.64 | 0 | 0.00 | |
| 7 | ವಿಧಾನ ಪರಿಷತ್ ಸದಸ್ಯರು ಕಾರವಾರ | 2017-18 | 28 | 106.85 | 23 | 79.85 | 5 | 27.00 | ಮಂಜೂರಿ ನೀಡಿದ 64 ಕಾಮಗಾರಿಗಳಲ್ಲಿ 46 ಮಾತ್ರ ಆಡಳಿತಾತ್ಮಕ ಮಂಜೂರಿ ನೀಡಿದ್ದು 18 ಕಾಮಗಾರಿಗಳು ಬಾಕಿ ಇದ್ದು ಅವುಗಳಲ್ಲಿ 12 ಕಾಮಗಾರಿಗಳು ಈ ಕಾರ್ಯಾಲಯಕ್ಕೆ ಸ್ವೀಕೃತವಾಗಿದ್ದು ಚುನಾವಣೆ ನಿಮಿತ್ತ ಆಡಳಿತಾತ್ಮಕ [illegible] |
| | | 2018-19 | 29 | 126.25 | 17 | 79.75 | 12 | 46.50 | |
| | | 2019-20 | 7 | 28.00 | 6 | 23.00 | 1 | 5.00 | |
| | | ಒಟ್ಟು | 606 | 1963.445 | 549 | 1718.1537 | 50 | 245.2913 | |

| 2019–20 ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳ ಪ್ರಗತಿ ಮಾಹಿತಿ | | | | | | |
|---|---|---|---|---|---|---|
| ಜಿಲ್ಲೆ:ಉತ್ತರ ಕನ್ನಡ | | | | | | |
| ಕ್ರ.ಸಂ | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಭೌತಿಕ ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಷರಾ |
| 1 | ಉದ್ಯೋಗಿನಿ ಯೋಜನೆ | 85 | 33.18 | 47 | 36.72 | ಸಹಾಯಧನ ಬಿಡುಗಡೆ ಮಾಡಲು ಅನುದಾನದ ಕೊರತೆಯಿಂದಾಗಿ 24 ಫಲಾನುಭವಿಗಳ ಅರ್ಜಿಗಳು ಬಾಕಿ ಇರುತ್ತವೆ. ಹೆಚ್ಚುವರಿ ಅನುದಾನ ರೂ. 21,32,000/– ಅನುದಾನಕ್ಕಾಗಿ ಕೇಂದ್ರ ಕಚೇರಿಗೆ ಕೋರಲಾಗಿದೆ. |
| 2 | ಕಿರುಸಾಲ ಯೋಜನೆ | 6 | 12.00 | 6 | 11.30 | – |
| 3 | ಸಮೃದ್ಧಿ ಯೋಜನೆ | 107 | 10.70 | 93 | 9.30 | – |
| 4 | ಚೇತನ ಯೋಜನೆ | 8 | 5.56 | 7 | 4.52 | ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 08 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು 1 ಫಲಾನುಭವಿಯು ಇ.ಡಿ.ಪಿ ತರಬೇತಿಯನ್ನು ಪಡೆಯದ ಕಾರಣ ಕೇಂದ್ರಕಚೇರಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ. |
| 5 | ಧನಶ್ರೀ ಯೋಜನೆ | 10 | 5.07 | 8 | 4.06 | ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 10 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು 02 ಫಲಾನುಭವಿಗಳು ಇ.ಡಿ.ಪಿ ತರಬೇತಿಯನ್ನು ಪಡೆಯದ ಕಾರಣ ಕೇಂದ್ರಕಚೇರಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ. |
| 6 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | 5 | 2.53 | 1 | 0.50 | – |

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಕಾರವಾರ (ಉ.ಕ.)

Cell - 9980651548

2019–20ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯ ಬಳಕೆಯಾಗದ ಅನುದಾನದಡಿ ಸಾಧಿಸಿದ ಪ್ರಗತಿಯ ವಿವರ

| ಕ್ರ.ಸಂ | ಯೋಜನೆಯ ಹೆಸರು | ಪರಿಶಿಷ್ಟ ಜಾತಿ | | | | ಪರಿಶಿಷ್ಟ ಪಂಗಡ | | | | ಷರಾ |
|---|---|---|---|---|---|---|---|---|---|---|
| | | ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | |
| 1 | ಉದ್ಯೋಗಿನಿ ಯೋಜನೆ | 5 | 17.53 | 5 | 0 | 2 | 7.01 | 2 | 0 | ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ಸಂಬಂಧಿಸಿದ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಮಂಜೂರಾತಿ ಬಂದ ನಂತರ ಸಹಾಯಧನ ಬಿಡುಗಡೆ ಮಾಡಲಾಗುವುದು. |
| 2 | ಕಿರುಸಾಲ ಯೋಜನೆ | 2 | 10.00 | 7 | 10.00 | 1 | 5.00 | 2 | 5.00 | – |
| 3 | ಸಮೃದ್ಧಿ ಯೋಜನೆ | 34 | 3.40 | 34 | 3.40 | 16 | 1.60 | 16 | 1.60 | – |

**<u>ದಿನಾಂಕ: 17–12–2020ರಂದು ಡಾ: ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ., ಮಾನ್ಯ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿ</u>**

*****

ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯರವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಮಾಧ್ಯಮದವರಿಗೆ ಸ್ವಾಗತವನ್ನು ಕೋರಿ, ಸಭೆಯ ಕಾರ್ಯಕಲಾಪವನ್ನು ನಡೆಸಿ ಕೊಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

**<u>ಕೃಷಿ ಇಲಾಖೆ:</u>**

ಜಂಟಿ ಕೃಷಿ ನಿರ್ದೇಶಕರು, ಪ್ರಸಕ್ತ ಸಾಲಿನಲ್ಲಿ ದಿನಾಂಕ:01.04.2020 ರಿಂದ 16.12.2020ರವರೆಗೆ ಜಿಲ್ಲೆಯ ವಾಡಿಕೆ ಮಳೆ 701.3 ಮಿ.ಮಿ. ಇದ್ದು, ವಾಸ್ತವವಾಗಿ 800.7 ಮಿ.ಮಿ. (ಶೇ.14.2 ಹೆಚ್ಚುವರಿ) ಮಳೆಯಾಗಿದೆ. ಪ್ರಸಕ್ತ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಕ್ರಮವಾಗಿ 190821 ಹೆ. ಮತ್ತು 26168 ಹೆ. ಪ್ರದೇಶದಲ್ಲಿ ಕೃಷಿ ಬೆಳೆಗಳು ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನಲ್ಲಿ ಮಂಡ್ಯ, ಶ್ರೀರಂಗಪಟ್ಟಣ ಮತ್ತು ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ಒಟ್ಟು 33.62 ಹೆ. ಪ್ರದೇಶದಲ್ಲಿ ಅಧಿಕ ಮಳೆಯಿಂದ ಬೆಳೆ ಹಾನಿಯಾಗಿದ್ದು, ರೂ.4.54ಲಕ್ಷ ಪರಿಹಾರ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದುವರೆವಿಗೂ ಕೆ.ಆರ್.ಪೇಟೆ ತಾಲ್ಲೂಕಿನ ರೈತರಿಗೆ ಒಟ್ಟು ರೂ.1.14ಲಕ್ಷ ಪರಿಹಾರ ವಿತರಣೆಯಾಗಿರುವುದಾಗಿ ಸಭೆಗೆ ವಿವರಿಸಿದರು.

ಮುಂದುವರಿದು ಪ್ರಸಕ್ತ ಸಾಲಿನಲ್ಲಿ 14 ರೈತರ ಆತ್ಮಹತ್ಯೆ ಪ್ರಕರಣಗಳು ಜಿಲ್ಲೆಯಲ್ಲಿ ವರದಿ ಯಾಗಿದ್ದು, 8 ಪ್ರಕರಣಗಳನ್ನು ಪರಿಹಾರ ವಿತರಣೆಗೆ ಅರ್ಹ ಪ್ರಕರಣಗಳೆಂದು ಹಾಗೂ ಒಂದು ಪ್ರಕರಣವನ್ನು ಪರಿಹಾರ ವಿತರಣೆಗೆ ಅನರ್ಹ ಎಂದು ಉಪ ವಿಭಾಗಮಟ್ಟದ ಸಮಿತಿಯು ನಿರ್ಣಯಿಸಿರುವ ಬಗ್ಗೆ ತಿಳಿಸಿದರು. 5 ಪ್ರಕರಣಗಳಲ್ಲಿ ಎಫ್.ಎಸ್.ಎಲ್. ವರದಿ ಬರದಿರುವ ಕಾರಣ ಸಮಿತಿಯಲ್ಲಿ ಬಾಕಿ ಇರುವುದಾಗಿ ಸಹ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಈ ಬಗ್ಗೆ ಮಾತನಾಡಿ ಪ್ರಸಕ್ತ ಸಾಲಿನ ಹಾಗೂ ಹಿಂದಿನ ಸಾಲಿನಲ್ಲಿ ಅರ್ಹ ಪ್ರಕರಣ ಎಂದು ಪರಿಗಣಿಸಿರುವ ಪ್ರಕರಣಗಳಲ್ಲಿ ಪರಿಹಾರ ವಿತರಣೆ ಯಾಗದಿರುವ ಪ್ರಕರಣಗಳಿಗೆ ಕೂಡಲೇ ನಿಯಮಾನುಸಾರ ಪರಿಹಾರ ವಿತರಣೆಗೆ ಕ್ರಮವಹಿಸಲು ಹಾಗೂ ಸಮಿತಿಯಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಅಗತ್ಯ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ಇತ್ಯರ್ಥ ಪಡಿಸಲು ಕ್ರಮವಹಿಸುವಂತೆ ಜಂಟಿ ಕೃಷಿ ನಿರ್ದೇಶಕರು ಮಂಡ್ಯ ಜಿಲ್ಲೆ, ಉಪ ವಿಭಾಗಾಧಿಕಾರಿಗಳು ಮಂಡ್ಯ ಹಾಗೂ ಪಾಂಡವಪುರ ಉಪ ವಿಭಾಗರವರಿಗೆ ಸೂಚನೆ ನೀಡಿದರು.

ಪ್ರಸ್ತುತ ಜಿಲ್ಲೆಯಾದ್ಯಂತ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳಿಗೆ ಯಾವುದೇ ಕೊರತೆ ಯಿರುವುದಿಲ್ಲ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಬೆಳೆ ವಿಮಾ ಯೋಜನೆಯ ನೊಂದಣಿ ಪ್ರಕ್ರಿಯೆ ಕುರಿತಾಗಿ ವಿವರಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಬಗ್ಗೆ ಜಂಟಿ ಕೃಷಿ ನಿರ್ದೇಶಕರು, ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ 2332 ಸಂಖ್ಯೆಯ ರೈತರು 3956 ಎಕರೆ ಪ್ರದೇಶಕ್ಕೆ ಬೆಳೆ ವಿಮೆ ಮಾಡಿಸಿದ್ದು, ಹಿಂಗಾರು ಹಂಗಾಮಿನ ಬೆಳೆ ವಿಮಾ ನೊಂದಣಿ ಅವಧಿ ಮುಕ್ತಾಯಗೊಂಡಿದ್ದು, ಬ್ಯಾಂಕ್‌ಗಳಿಂದ ರೈತರ ವಿಮಾ ಪ್ರಸ್ತಾವನೆಯನ್ನು ಸಂರಕ್ಷಣೆ ಪೋರ್ಟಲ್‌ನಲ್ಲಿ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಬ್ಯಾಂಕ್ ಖಾತೆ ವಿವರ ಹಾಗೂ ಆಧಾರ್ ಸಂಖ್ಯೆ ತಪ್ಪಾಗಿ ನಮೂದಾಗಿದ್ದ 2016–17ನೇ ಸಾಲಿನ ಫಲಾನುಭವಿಗಳ ವಿವರ ಸಂಗ್ರಹಿಸಿ ವಿಮಾ ಪರಿಹಾರ ವಿತರಣೆಗೆ ಕ್ರಮ ವಹಿಸಲಾಗುವುದೆಂದು ತಿಳಿದರು.

ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ವಿತರಣೆಯಾಗದಂತೆ ಕ್ರಮವಹಿಸಲು ಸೂಕ್ತ ಕ್ರಮವಹಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಂಟಿ ಕೃಷಿ ನಿರ್ದೇಶಕರಿಗೆ ಸೂಚನೆ ನೀಡಿದರು. ಈ ಬಗ್ಗೆ ಮಾತನಾಡಿದ ಜಂಟಿ ಕೃಷಿ ನಿರ್ದೇಶಕರು ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸಲಾಗುತ್ತಿದ್ದು, ಕಳಪೆ ಎಂದು ಕಂಡು ಬಂದಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಜರುಗಿಸುವುದಾಗಿ ತಿಳಿಸಿದರು. ಕೀಟನಾಶಕ ಪರಿವೀಕ್ಷಕರುಗಳು ಕೀಟನಾಶಕ ಮಾರಾಟ ಮಳಿಗೆಗಳಲ್ಲಿ ತಪಾಸಣೆ ನಡೆಸುವ ಸಂದರ್ಭದಲ್ಲಿ ಕಂಡು ಬರುವ ಸಂಶಯಾಸ್ಪದ ಜೈವಿಕ ಹೆಸರಿನ ಉತ್ಪನ್ನಗಳ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸಲಾಗುತ್ತಿದ್ದು, ವಿಶ್ಲೇಷಣಾ ವರದಿಯಲ್ಲಿ ಸದರಿ ಮಾದರಿಗಳಲ್ಲಿ ಕೀಟನಾಶಕ ಅಂಶ ಕಂಡು ಬಂದಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಕೀಟನಾಶಕ ಮಾರಾಟ ಪರವಾನಗಿಯನ್ನು ರದ್ದುಪಡಿಸಲು ಕ್ರಮವಹಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು.

ಕೃಷಿ ಯಂತ್ರಧಾರೆ ಕೇಂದ್ರಗಳ ಕಾರ್ಯನಿರ್ವಹಣೆ ಬಗ್ಗೆ ವಿವರಿಸುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ವಿಷಯ ಪ್ರಸ್ತಾಪಿಸಿದಾಗ, ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ, ಜಿಲ್ಲೆಯಲ್ಲಿ 31 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆಯಲಾಗಿದ್ದು, ಇದರಲ್ಲಿ ವಿ.ಎಸ್.ಟಿ. ಸಂಸ್ಥೆಯ ಕೇಂದ್ರಗಳು ಜಿಲ್ಲೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಣೆ ಮಾಡದಿರುವ ಬಗ್ಗೆ ಕೇಂದ್ರ ಕಚೇರಿಗೆ ವರದಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

**ತೋಟಗಾರಿಕೆ:**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆರವರು ಇಲಾಖಾ ಕಾರ್ಯಕ್ರಮಗಳಲ್ಲಿನ ಪ್ರಗತಿಯನ್ನು ವಿವರಿಸುತ್ತಾ, ಕೇಂದ್ರ ಪುರಸ್ಕೃತ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಯೋಜನೆಗಳಡಿ ಜಿಲ್ಲೆಗೆ ವಾರ್ಷಿಕ ರೂ.41.36ಕೋಟಿ ಅನುದಾನ ನಿಗದಿಯಾಗಿದ್ದು, ರೂ.18.67ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.12.11ಕೋಟಿ ವಿವಿಧ ಯೋಜನೆಗಳಡಿ ಪ್ರಗತಿ ಸಾಧಿಸಲಾಗಿದ್ದು, ಬಿಡುಗಡೆಯಾದ ಅನುದಾನಕ್ಕೆ ಶೇ.65ರಷ್ಟು ವೆಚ್ಚಭರಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಬಾಕಿ ಬಿಡುಗಡೆಯಾಗ ಬೇಕಾಗಿರುವ ಅನುದಾನದ ಮಾಹಿತಿಯನ್ನು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಾವಯವ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ತೊಡಗಿಸಿ ಕೊಂಡಿರುವ ರೈತರು ಮತ್ತು ಗುಣಮಟ್ಟದ ಬಗ್ಗೆ ಮಾಹಿತಿ ನೀಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಉಪ ನಿರ್ದೇಶಕರಿಗೆ ಸೂಚಿಸಿದಾಗ, ಈ ಬಗ್ಗೆ ಉಪ ನಿರ್ದೇಶಕರು ಮಾತನಾಡಿ, ತೋಟಗಾರಿಕೆ ಸಾವಯವ ಉತ್ಪಾದನೆಗಳನ್ನು ಉತ್ಪಾದಿಸುತ್ತಿರುವ ರೈತರು ಗುಣಮಟ್ಟದ ಪರಿಶೀಲನೆಗೆ ಉತ್ಪನ್ನ ಮಾದರಿಯನ್ನು ನೀಡಿದಲ್ಲಿ ಬಯೋ ಸೆಂಟರ್ ಹುಳಿ ಮಾವು ಪ್ರಯೋಗಾಲಯದಲ್ಲಿ ವಿಶ್ಲೇಷಣೆ ನಡೆಸಿ ವರದಿ ನೀಡಲಾಗುವುದೆಂದು ತಿಳಿಸಿದರು ಹಾಗೂ ಪ್ರಸಕ್ತ ಸಾಲಿನಲ್ಲಿ ಪರಂಪರಾಗತ ಕೃಷಿ ವಿಕಾಸ ಯೋಜನೆಯಡಿ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಮತ್ತು ಅಕ್ಕಿಹೆಬ್ಬಾಳು ಹೋಬಳಿಯ ವ್ಯಾಪ್ತಿಗಳಲ್ಲಿ 830 ಹೆಕ್ಟೇರ್ ಗುಚ್ಛ ಮಾದರಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯ ಸಭೆ ನಡೆಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸಪೋರ್ಟ್ ಏಜೆನ್ಸಿ ಹಾಗೂ Regional councilಗೆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವಹಿಸುವಂತೆ ಜಿಲ್ಲಾ ಸಮಿತಿಯಲ್ಲಿ ಅಗತ್ಯ ನಿರ್ದೇಶನ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ಮುಂದುವರಿದು ಮಾತನಾಡಿ, ಪ್ರಸಕ್ತ ಸಾಲಿನ ಏಪ್ರಿಲ್ ಮಾಹೆಯಿಂದ ಇಲ್ಲಿಯವರೆಗೆ ಬಿರುಗಾಳಿ, ಮಳೆ ಮತ್ತು ಆಲಿಕಲ್ಲಿನಿಂದ ಜಿಲ್ಲೆಯ ವ್ಯಾಪ್ತಿಯಲ್ಲಿ 192.00ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ವಿವಿಧ ತೋಟಗಾರಿಕೆ ಬೆಳೆಗಳು ಹಾನಿಗೊಳಗಾಗಿದ್ದು ಎನ್.ಡಿ.ಆರ್.ಎಫ್/ ಎಸ್.ಡಿ.ಆರ್.ಎಫ್ ಮಾರ್ಗಸೂಚಿಯನುಸಾರ ಪರಿಹಾರ ತಂತ್ರಾಂಶದ ಮೂಲಕ ರೂ.27.07ಲಕ್ಷಗಳ ಪರಿಹಾರ ಧನವನ್ನು ರೈತರಿಗೆ ನೀಡಲು ಕ್ರಮ ವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತೆಂಗಿನ ಬೆಳೆಗೆ ವ್ಯಾಪ್ತಿಸಿರುವ ಸುರುಳಿ ಆಕಾರದ ಬಿಳಿ ನೊಣ (Rugose Spiraling White Fly) ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡುವಂತೆ ವಿಷಯ ಪ್ರಸ್ತಾಪಿಸಿದಾಗ, ಉಪ ನಿರ್ದೇಶಕರು ಮಾತನಾಡಿ ಕಳೆದ ಸಭೆಯಲ್ಲಿ ನೀಡಿದ

ನಿರ್ದೇಶನದಂತೆ ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಜನಸಂದಣಿ ಇರುವ ಸ್ಥಳಗಳಲ್ಲಿ ಕೀಟ ನಿರ್ವಹಣೆಗೆ ಸಂಬಂಧಿಸಿದ ಪೋಸ್ಟರ್ಸ್ ಅನ್ನು ಅಳವಡಿಸಲಾಗಿರುತ್ತದೆ ಹಾಗೂ ಸಂಬಂಧಿಸಿದಂತೆ ಹಸ್ತ ಪ್ರತಿಗಳನ್ನು ಮುದ್ರಿಸಿ ತೆಂಗು ಬೆಳೆಗಾರರಿಗೆ ಮಾಹಿತಿಗಾಗಿ ನೀಡಲಾಗುತ್ತಿದೆ. ಪ್ರಸ್ತುತ ವಾತಾವರಣದ ಉಷ್ಣಾಂಶ ಕಡಿಮೆ ಇರುವುದರಿಂದ ಕೀಟದ ಹಾವಳಿ ನಿಯಂತ್ರಣದಲ್ಲಿ ಇರುತ್ತದೆ. ಫೆಬ್ರವರಿ ತಿಂಗಳ ನಂತರ ಕೀಟದ ಹಾವಳಿ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ರೈತರು ಕೈಗೊಳ್ಳಬೇಕಾದ ಅಗತ್ಯ ಕ್ರಮ ಗಳಿಗೆ ಅವಶ್ಯಕವಿರುವ ಪರಿಕರಗಳನ್ನು ವಿತರಿಸಲು ರೂ.28.00ಲಕ್ಷಗಳ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲಾಗಿದೆ ಎಂದು ಸಹ ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕಳಪೆ ಗುಣಮಟ್ಟದ ಬೀಜ ಮತ್ತು ಸಸಿಗಿಡಗಳನ್ನು ರೈತರಿಗೆ ಒದಗಿಸುತ್ತಿರುವವರ ಮೇಲೆ ನಿಗಾವಹಿಸಿ ಉತ್ತಮ ಗುಣ್ಣಮಟ್ಟದ ಗಿಡಗಳನ್ನು ಸರಬರಾಜು ಮಾಡದ್ದಿದಲ್ಲಿ ಅಗತ್ಯ ಕಾನೂನು ಕ್ರಮ ವಹಿಸುವಂತೆ ಉಪ ನಿರ್ದೇಶಕರಿಗೆ ಸೂಚಿಸಿದರು. ಇದಕ್ಕೆ ಸಂಬಂಧಿಸಿದಂತೆ ಉಪ ನಿರ್ದೇಶಕರು ಮಾತನಾಡಿ, ಹೈಬ್ರೀಡ್ ತರಕಾರಿ ಸಸಿಗಳನ್ನು ಉತ್ಪಾದನೆ ಮಾಡಿ ಮಾರಾಟ ಮಾಡುತ್ತಿರುವವರ ನಿಯಂತ್ರಣಕ್ಕಾಗಿ ಹೊಸ ಕಾಯ್ದೆಯನ್ನು ರೂಪಿಸುವ ಸಂಬಂಧ ನಿರ್ದೇಶನಾಲಯ ಹಂತದಲ್ಲಿ ಕ್ರಮ ವಹಿಸಲಾಗಿರುತ್ತದೆ. ಮುಂದುವರೆದು, ರೈತರಿಂದ ಬರುವ ದೂರಿಗನುಗುಣವಾಗಿ ಹಾಗೂ ದೋಷಪೂರಿತ ಬೀಜ/ಸಸಿಗಳನ್ನು ರೈತರಿಗೆ ಸರಬರಾಜು ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ರೇಷ್ಮೆ ಇಲಾಖೆ:**

ಉಪ ನಿರ್ದೇಶಕರು, ರೇಷ್ಮೆ ಇಲಾಖೆರವರು ಇಲಾಖಾ ಕಾರ್ಯಕ್ರಮಗಳಲ್ಲಿನ ಪ್ರಗತಿಯನ್ನು ಸಭೆಗೆ ತಿಳಿಸಿದರು. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಲ್ಲಿ ಹನಿ ನೀರಾವರಿ ಅಳವಡಿಸಿಕೊಳ್ಳಲು ಅವಕಾಶವಿದ್ದು, ರೂ.55.00ಲಕ್ಷ ವಾರ್ಷಿಕ ಗುರಿ ಇದ್ದು, ಇದುವರೆಗೂ ರೂ.53.083ಲಕ್ಷ ವೆಚ್ಚ ಆಗಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ(ಟ್ರಂಚಿಂಗ್ ಮತ್ತು ಮಂಚಿಂಗ್) ಇದರಲ್ಲಿ ಶೇ.70.3ರಷ್ಟು ಪ್ರಗತಿ ಆಗಿದೆ. ಪ್ರತಿ ವರ್ಷ 500 ಹೆಕ್ಟೇರ್‌ನಷ್ಟು ರೇಷ್ಮೆ ಬೆಳೆಯ ವಿಸ್ತೀರ್ಣವನ್ನು ಜಾಸ್ತಿ ಮಾಡಲಾಗುತ್ತಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಈ ಸಂದರ್ಭದಲ್ಲಿ ಮಾತನಾಡಿ, 2020-21ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆ ಅನುಮೋದನೆ ಆಗಬೇಕಿದ್ದು ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಅನುಮೋದನೆಗೆ ಕಳುಹಿಸಲಾಗಿದೆ, ಮುಂದುವರಿದ ಕಾಮಗಾರಿ ಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಸಭೆಗೆ ತಿಳಿಸಿದಾಗ, ಜಿಲ್ಲಾಧಿಕಾರಿರವರು ಮಾತನಾಡಿ, ಕ್ರಿಯಾ ಯೋಜನೆ ಅನುಮೋದನೆ ವಿಳಂಬವಾಗಿರುವುದರಿಂದ ಸರ್ಕಾರದಿಂದ ಕಾರ್ಯಕ್ರಮಗಳ

ಅನುಷ್ಠಾನಕ್ಕೆ ಬಿಡುಗಡೆಯಾಗಿರುವ ಅನುದಾನವನ್ನು ಮಾರ್ಚ್ ಒಳಗೆ ವೆಚ್ಚ ಭರಿಸುವುದಕ್ಕೆ ಕಾಲಾವಕಾಶ ನೀಡುವಂತೆ ಕೋರಿ ಆರ್ಥಿಕ ಇಲಾಖೆಗೆ ಪತ್ರವನ್ನು ಬರೆಯುವಂತೆ ಸಲಹೆ ನೀಡಿದರು.

ಜಿಲ್ಲಾಧಿಕಾರಿರವರು ಮುಂದುವರಿದು ಮಾತನಾಡಿ, ಜಿಲ್ಲೆಯಲ್ಲಿ ರೇಷ್ಮೆ ವಿಸ್ತೀರ್ಣವನ್ನು ಇನ್ನು ಹೆಚ್ಚು ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

**ಪಶುಪಾಲನಾ ಇಲಾಖೆ:**

ಉಪ ನಿರ್ದೇಶಕರ ಪರವಾಗಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿರವರು ಇಲಾಖಾ ಕಾರ್ಯಕ್ರಮಗಳ ಪ್ರಗತಿಯನ್ನು ಸಭೆಗೆ ತಿಳಿಸಿದರು. ಜಾನುವಾರುಗಳಿಗೆ ಕಾಲುಬಾಯಿ ಲಸಿಕೆ ಕಾರ್ಯಕ್ರಮವನ್ನು ಡಿಸೆಂಬರ್ 31ರವರೆಗೆ ಹಾಕಲಾಗುತ್ತದೆ ಹಾಗೂ ಜಿಲ್ಲೆಯಲ್ಲಿ ಜಾನುವಾರುಗಳಿಗಿಂತ ಕುರಿ ಮತ್ತು ಮೇಕೆಗಳ ಸಂಖ್ಯೆ ಜಾಸ್ತಿ ಇದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಿಲ್ಲೆಯಲ್ಲಿ ಹಾಲಿನ ಉತ್ಪನ್ನ ಮತ್ತು ಕೊಬ್ಬಿನಾಂಶದ ಬಗ್ಗೆ, ಮೇವಿನ ಉತ್ಪಾದಕತೆ ಹಾಗೂ ಮೇವಿನ ಕಿಟ್‌ಗಳನ್ನು ಸರಬರಾಜು ಮಾಡುತ್ತಿರುವುದರ ಬಗ್ಗೆ ಮಾಹಿತಿಯನ್ನು ಕೇಳಿದಾಗ ಸಭೆಯಲ್ಲಿ ಕೆ.ಎಂ.ಎಫ್.(ಗೆಜ್ಜಲಗೆರೆ) ವತಿಯಿಂದ ಹಾಜರಿದ್ದ ಅಧಿಕಾರಿರವರು ಜಿಲ್ಲೆಯಲ್ಲಿ ದಿನಕ್ಕೆ ಅಂದಾಜು 8.4ಲಕ್ಷ ಲೀಟರ್ ಹಾಲಿನ ಉತ್ಪಾದನೆ ಆಗುತ್ತಿದೆ ಹಾಗೂ ಹಾಲಿನಲ್ಲಿ ಸರಾಸರಿ ಶೇ.4.1ರಷ್ಟು ಕೊಬ್ಬಿನಾಂಶ ಇರುವುದಾಗಿ ಸಭೆಗೆ ತಿಳಿಸಿದರು.

ಪಶುಪಾಲನಾ ಇಲಾಖೆಯ ಅಧಿಕಾರಿರವರು ಮಾತನಾಡಿ, ಅಗತ್ಯತೆಗನುಸಾರ ಮೇವಿನ ಕಿಟ್‌ನ್ನು ಇಲಾಖೆಯಿಂದ ಕೊಡಲಾಗುತ್ತಿದ್ದು ಜಿಲ್ಲೆಯಲ್ಲಿ ಮೇವಿನ ಸಮಸ್ಯೆ ಇರುವುದಿಲ್ಲ. ಕೆ.ಎಂ.ಎಫ್. ವತಿಯಿಂದಲೂ ಸಹ ಮೇವಿನ ಕಿಟ್‌ಗಳನ್ನು ಕೊಡಲಾಗುತ್ತದೆಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಮಳವಳ್ಳಿ ತಾಲ್ಲೂಕುಗಳಲ್ಲಿ ಮೇವಿನ ಕಿಟ್‌ಗಳನ್ನು ಹೆಚ್ಚು ಬಳಸಿಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಮುಂದುವರಿದು ಮಂಡ್ಯ ಜಿಲ್ಲೆ, ಕೀಲಾರ ಗ್ರಾಮದಲ್ಲಿ ಸುಮಾರು 8-9 ಜಾನುವಾರುಗಳು ಅಸಹಜವಾಗಿ ಮೃತಪಟ್ಟಿರುವ ಬಗ್ಗೆ ವಿಷಯವನ್ನು ಪ್ರಸ್ತಾಪಿಸಿ, ಕೂಡಲೇ ರೋಗವನ್ನು ಪತ್ತೆ ಹಚ್ಚಿ ಜಾನುವಾರುಗಳಿಗೆ ಚಿಕಿತ್ಸೆ ನೀಡುವಂತೆ ಪಶುಪಾಲನಾ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಪಶುಪಾಲನಾ ಇಲಾಖೆಯ ಅಧಿಕಾರಿರವರು ಮಾತನಾಡಿ, ಈ ಬಗ್ಗೆ ಇಲಾಖೆಯಿಂದ ಜಾನುವಾರುಗಳ ರಕ್ತ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಅದರ ಫಲಿತಾಂಶವನ್ನು ನಿರೀಕ್ಷಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಇದರ ತಪಾಸಣೆಗೆ ಕೇಂದ್ರ ಕಛೇರಿಯಿಂದ ವೈದ್ಯರನ್ನು ನಿಯೋಜಿಸಲು ಕೋರಿ ಸಹ ಪತ್ರವನ್ನು ಬರೆದಿರುವುದಾಗಿ ಸಭೆಗೆ ತಿಳಿಸಿದರು.

**ಮೀನುಗಾರಿಕೆ**

ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರು ಪ್ರಸಕ್ತ ಸಾಲಿನ ಇಲಾಖಾ ಕಾರ್ಯಕ್ರಮಗಳ ಪ್ರಗತಿಯನ್ನು ವಿವರಿಸುತ್ತಾ, 2020-21ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಬಿಡುಗಡೆ ಯಾಗಿರುವ ಅನುದಾನಕ್ಕೆ ಶೇ.71ರಷ್ಟು ಪ್ರಗತಿ ಸಾಧಿಸಲಾಗಿದೆ ಹಾಗೂ ರಾಜ್ಯ ವಲಯ ಯೋಜನೆಯಡಿ ರೂ.7.20ಲಕ್ಷ ವೆಚ್ಚ ಮಾಡಲಾಗಿದೆ. ಹಾಗೆ ಜಿಲ್ಲೆಯಲ್ಲಿ ಇಲಾಖೆಗೆ ಸೇರಿದ 178 ಕೆರೆಗಳಿಗೆ ಪ್ರಸ್ತುತ ಸಾಲಿನಲ್ಲಿ 250.00ಲಕ್ಷ ಹಾಗೂ ಗ್ರಾಮ ಪಂಚಾಯಿತಿ ಕೆರೆಗಳಿಗೆ 40.00ಲಕ್ಷ ವಿವಿಧ ತಳಿಯ ಮೀನುಮರಿಗಳನ್ನು ಬಿತ್ತನೆ ಮಾಡಲಾಗಿರುತ್ತದೆ. ಅಲ್ಲದೇ 250.00ಲಕ್ಷ ಸಿಹಿನೀರು ಸಿಗಡಿ ಮೀನುಮರಿ ಗಳನ್ನು ಕೆ.ಆರ್.ಎಸ್.ಜಲಾಶಯದಲ್ಲಿನ ಮೀನುಕೊಳದಲ್ಲಿ ಬಿತ್ತನೆ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಮುಂದುವರಿದು ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ(ಪಿ.ಎಂ.ಎಂ.ಎಸ್.ವೈ.) 115 ಫಲಾನುಭವಿಗಳು ಆಯ್ಕೆಯಾಗಿರುತ್ತಾರೆಂದು ಸಹ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಇಲಾಖಾ ವತಿಯಿಂದ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಬ್ಯಾಂಕ್‌ಗೆ ನೋಡಲ್ ಅಧಿಕಾರಿಗಳನ್ನಾಗಿ ಮಾಡಿ, ಫಲಾನುಭವಿಗಳಿಗೆ ಬೇಗ ಲೋನ್ ವಿತರಣೆಗೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು. ಹಾಗೆ ಕಿಸಾನ್ ಕ್ರೆಡಿಟ್ ಕಾರ್ಡ್(ಕೆ.ಸಿ.ಸಿ.) ಮತ್ತು ಶೂನ್ಯ ಬಡ್ಡಿದರದಲ್ಲಿ ಸಾಲ ನೀಡುವ ಯೋಜನೆಯಡಿ ಮೀನುಗಾರರಿಗೆ ಸಾಲ ನೀಡುವ ಬಗ್ಗೆ ಜರೂರಾಗಿ ಕ್ರಮವಹಿಸುವಂತೆ ಸಹ ಉಪ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶಗಳಿದ್ದು, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮೀನು ಸಾಕಾಣಿಕೆಗೆ ಬ್ಯಾಂಕ್‌ಗಳಿಂದ ಸಾಲ ನೀಡುವ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡು ಹೆಚ್ಚಿನ ಪ್ರಗತಿ ಸಾಧಿಸುವಂತೆ ಹಾಗೂ ಬೆಂಗಳೂರು ಮಾದರಿಯಂತೆ ಮಂಡ್ಯ ಜಿಲ್ಲೆಯಲ್ಲಿ ತಾಜಾ ಮೀನು ಮತ್ತು ಸಮುದ್ರ ಮೀನುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಬಗ್ಗೆ ಕ್ರಮವಹಿಸುವಂತೆ ಸಹ ಅಧಿಕಾರಿಗಳಿಗೆ ತಿಳಿಸಿದರು.

**ಸಾಮಾಜಿಕ ಅರಣ್ಯ:**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯರವರು ಪ್ರಸಕ್ತ ಸಾಲಿನ ಇಲಾಖಾ ಕಾರ್ಯಕ್ರಮಗಳ ಪ್ರಗತಿಯನ್ನು ಸಭೆಗೆ ವಿವರಿಸುತ್ತಾ, ರಾಜ್ಯ ವಲಯ ಕಾರ್ಯಕ್ರಮದಲ್ಲಿ ಪ್ರಗತಿ ಆಗಿದೆ. ಜಿಲ್ಲಾ ವಲಯ ಕಾರ್ಯಕ್ರಮದಲ್ಲಿ ಭೌತಿಕ ಪ್ರಗತಿಯಾಗಿದ್ದು, ಆರ್ಥಿಕ ಪ್ರಗತಿ ಆಗಬೇಕಿದೆ. ಇಲಾಖೆ ಯಿಂದ 8000 ಸಸಿಗಳನ್ನು ಬೆಳೆಸಲು ಬೇರೆ ಬೇರೆ ಸಂಘಸಂಸ್ಥೆಗಳಿಗೆ ಹಾಗೂ ಎನ್.ಜಿ.ಒ.ಗಳಿಗೆ ನೀಡಲಾಗಿದೆ.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಿಲ್ಲೆಯಲ್ಲಿನ ಅರಣ್ಯ ಪ್ರದೇಶದ ಭೌಗೋಳಿಕ ವಿಸ್ತೀರ್ಣ ಎಷ್ಟು? ಎಂದು ವಿಷಯ ಪ್ರಸ್ತಾಪಿಸಿದಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯರವರು ಜಿಲ್ಲೆಯಲ್ಲಿ 26,300 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶವಿದ್ದು, ಅದು ಜಿಲ್ಲೆಯ ಶೇ.5.693ರಷ್ಟು ಇದೆ ಎಂದು ಸಭೆಗೆ ತಿಳಿಸಿದರು.

**ಕೆ.ಆರ್.ಐ.ಡಿ.ಎಲ್.:**

ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್.ವಿಭಾಗ, ಮಂಡ್ಯರವರು ತಮ್ಮ ವಿಭಾಗದ ವತಿಯಿಂದ ಗ್ರಾಮ ವಿಕಾಸ್ ಯೋಜನೆ ಹಾಗೂ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಶಾಸಕರು ಹಾಗೂ ಸಂಸದರ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಬಗ್ಗೆ ವಿಷಯ ಪ್ರಸ್ತಾಪಿಸಿದಾಗ, ಉಪ ವಿಭಾಗಾಧಿಕಾರಿ, ಮಂಡ್ಯ ಉಪ ವಿಭಾಗರವರು ಮಾತನಾಡಿ, ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಡಾಟಾ ಮಿಸ್ ಮ್ಯಾಚ್ ಆಗಿರುವುದಾಗಿ ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗರವರು ಮಾತನಾಡಿ, ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಹಣ ಪಾವತಿಸಲು ಕೆ-2ನಲ್ಲಿ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದ್ದು, ಹಣ ಪಾವತಿ ಮಾಡಲಾಗಿದೆ. Year Ending, GSKನಲ್ಲಿ ಮಾಡಲಾಗುತ್ತಿದೆ. ಟ್ಯಾಲಿಯನ್ನು ಇನ್ನು 15 ದಿವಸದಲ್ಲಿ ಪೂರ್ಣ ಮಾಡಲಾಗುತ್ತದೆ. ತಾಂತ್ರಿಕ ಸಮಸ್ಯೆಯಿಂದಾಗಿ ಅಡ್ವಾನ್ಸ್ ಪೇಮೆಂಟ್ ಶೇ.70ರಷ್ಟು ಆಗಿದೆ. ಎಂ.ಪಿ.ಲ್ಯಾಡ್‌ನಲ್ಲಿ ಮ್ಯಾನುಯಲ್‌ನಲ್ಲಿ ಹಣ ಪಾವತಿ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ತಾಂತ್ರಿಕ ಸಮಸ್ಯೆಯನ್ನು ಎನ್.ಐ.ಸಿ. ಅವರಿಂದ ಸರಿಪಡಿಸಿಕೊಂಡು ಹಣ ಪಾವತಿಗೆ ಕ್ರಮವಹಿಸುವಂತೆ, ಮರು ಟೆಂಡರ್ ಪ್ರಕ್ರಿಯೆಯ ಷರತ್ತಿನಲ್ಲಿ ರಿಯಾಯಿತಿ/ಸಡಿಲಗೊಳಿಸುವಂತೆ ಹಾಗೂ ಜಿಲ್ಲೆಗೆ ಪ್ರಸಕ್ತ ವರ್ಷ ರಸ್ತೆ ಮತ್ತು ಸೇತುವೆ ಕಾಮಗಾರಿ ಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ವ್ಯಪಗತ ಮಾಡಿಕೊಳ್ಳದೆ ಸದರಿ ಅನುದಾನವನ್ನು ಲೋಕೋಪಯೋಗಿ ಇಲಾಖೆಗೆ ನೀಡಿ ನಂತರ ಅದನ್ನು ಹಿಂಪಡೆದು ಅನುದಾನವನ್ನು ವೆಚ್ಚಭರಿಸುವಂತೆ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗರವರಿಗೆ ತಿಳಿಸಿದರು.

**ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ:**

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯರವರು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಭೌತಿಕ ಗುರಿ ಇದೆ. ಅದರಲ್ಲಿ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಹಾಗೂ

ಇತರೆ ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಜಾಕ್‌ವೆಲ್ ಕೆಲಸ ಹೊರತುಪಡಿಸಿ ಉಳಿದ ಕಾಮಗಾರಿ ಪೂರ್ಣಗೊಂಡಿರುತ್ತದೆ. ಕೆ.ಆರ್.ಪೇಟೆ ತಾಲ್ಲೂಕು, ಬೂಕನಕೆರೆ ಮತ್ತು ಇತರೆ ಗ್ರಾಮಗಳ ಬಹುಗ್ರಾಮ ಯೋಜನೆಯ ಟ್ರಯಲ್ ಮಾಡಲಾಗುತ್ತಿದೆ. ಮುಂದುವರಿದು ಮದ್ದೂರು ತಾಲ್ಲೂಕು, ಕೊಪ್ಪ ಮತ್ತು 49 ಗ್ರಾಮಗಳ ಬಹುಗ್ರಾಮ ಯೋಜನೆಯಡಿ ಪೈಪ್‌ಲೈನ್ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದ್ದು WTP ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಜಾಕ್‌ವೆಲ್ ಕಾಮಗಾರಿ ಸ್ಥಳ ಬದಲಾವಣೆಯಾದ್ದರಿಂದ ಕಾಮಗಾರಿಗೆ CNNL ನಿಂದ ಅನುಮತಿ ಬೇಕಿದೆ. MBT ಕಾಮಗಾರಿಗೆ ಅರಣ್ಯ ಇಲಾಖೆ ಭೂಮಿ ಬೇಕಾಗಿದ್ದು ಆನ್‌ಲೈನ್ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಮುಂದುವರಿದು ಮದ್ದೂರು ತಾಲ್ಲೂಕು, ಬೆಸಗರಹಳ್ಳಿ ಮತ್ತು 37 ಗ್ರಾಮಗಳ ಬಹುಗ್ರಾಮ ಯೋಜನೆಯಡಿ ಪೈಪ್‌ಲೈನ್ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದ್ದು WTP ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿ ಯಲ್ಲಿದೆ. ಜಾಕ್‌ವೆಲ್ ಕಾಮಗಾರಿ ಸ್ಥಳ ಬದಲಾವಣೆಯಾದ್ದರಿಂದ ಕಾಮಗಾರಿಗೆ CNNL ನಿಂದ ಅನುಮತಿ ಬೇಕಿದೆ. ಹಾಗೆ ಮದ್ದೂರು ತಾಲ್ಲೂಕು ನವಿಲೆ ಮತ್ತು ತೊರೆಶೆಟ್ಟಹಳ್ಳಿ ಮತ್ತು ಇತರೆ ಬಹುಗ್ರಾಮ ಯೋಜನೆಯಡಿ WTP ಕಾಮಗಾರಿಗಳು ಮತ್ತು ಪೈಪ್‌ಲೈನ್ ಕಾಮಗಾರಿಯು ಪ್ರಗತಿಯಲ್ಲಿದ್ದು, ಇಂಟೇಕ್‌ವೆಲ್ ಮತ್ತು ಜಾಕ್‌ವೆಲ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. MBT ಕಾಮಗಾರಿಗೆ ಅರಣ್ಯ ಇಲಾಖೆ ಭೂಮಿ ಬೇಕಾಗಿದ್ದು ಆನ್‌ಲೈನ್ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಸಭೆಗೆ ತಿಳಿಸಿದರು.

**ಪಿ.ಎಂ.ಜಿ.ಎಸ್.ವೈ.:**

ಕಾರ್ಯಪಾಲಕ ಅಭಿಯಂತರರು, 2019-20ನೇ ಸಾಲಿಗೆ ಪಿ.ಎಂ.ಜಿ.ಎಸ್.ವೈ.ಯೋಜನೆ 3ನೇ ಹಂತದಲ್ಲಿ 190 ಕಿ.ಮೀ.ರಸ್ತೆಗೆ ರೂ.151.00ಕೋಟಿಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ. ಅದರಲ್ಲಿ 2020-21ನೇ ಸಾಲಿನಲ್ಲಿ ಇದುವರೆಗೆ 25ಕಿ.ಮೀ.ರಸ್ತೆಗೆ ರೂ.34.50ಕೋಟಿಗಳನ್ನು ವೆಚ್ಚ ಮಾಡಲು ಗುರಿ ನಿಗದಿಯಾಗಿದ್ದು, ಟೆಂಡರ್ ಕರೆಯಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಗುರಿ ನಿಗದಿಯಂತೆ ಮಾರ್ಚ್ ಒಳಗೆ ವೆಚ್ಚ ಭರಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರಿದು ರಾಜ್ಯ ವಲಯ ಕಾರ್ಯಕ್ರಮದಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ರಸ್ತೆಗಳ ನಿರ್ವಹಣೆಗೆ ರೂ.30.48ಕೋಟಿ ಅನುದಾನ ಗುರಿ ಇದೆ. ಅದರಲ್ಲಿ ರೂ.882.83ಲಕ್ಷ ಅನುದಾನ ಲಭ್ಯವಿದ್ದು, ರೂ.882.83ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಎಂದು ಸಹ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ಪ್ರಗತಿಯಲ್ಲಿರುವ ಕಾಮಗಾರಿಗಳು ಯಾವ ಹಂತದಲ್ಲಿವೆ ಎಂದು ಮಾಹಿತಿಯನ್ನು ಕೇಳಿದಾಗ, ಕಾರ್ಯಪಾಲಕ ಅಭಿಯಂತರರು, 25ಕಿ.ಮೀ.ರಸ್ತೆ ಕಾಮಗಾರಿಯ ಸಿ.ಡಿ.ಕೆಲಸ, ಎಂಬ್ಯಾಕ್‌ಮೆಂಟ್ ಕೆಲಸ ಪ್ರಗತಿಯಲ್ಲಿದ್ದು ಮಾರ್ಚ್-2020

ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದ ಕಾಮಗಾರಿಯ ಫೋಟೋಗಳನ್ನು ನೀಡುವಂತೆ ಉಸ್ತುವಾರಿ ಕಾರ್ಯದರ್ಶಿಗಳು ಅಧಿಕಾರಿಗಳಿಗೆ ಸೂಚಿಸಿದರು. ಹಾಗೂ ರಸ್ತೆ ಕಾಮಗಾರಿಗಳ ಗುಣಮಟ್ಟದ ಪರೀಕ್ಷೆ ಹಾಗೂ 3ನೇ ವ್ಯಕ್ತಿ ತಪಾಸಣೆ ಬಗ್ಗೆ ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರ ಜೊತೆ ಚರ್ಚಿಸಿದರು. PMGSY ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಅಸಮರ್ಪಕ ವರದಿ ಹಿನ್ನಲೆಯಲ್ಲಿ, C.E.O, ZP, ಮುಂದಿನ ಪ್ರಗತಿ ಪರಿಶೀಲನಾ ಸಭೆಯೊಳಗೆ, ಸಮಗ್ರವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗರವರು ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಮಂಡ್ಯ ಪಿ.ಇ.ಎಸ್.ಕಾಲೇಜು, ಮೈಸೂರು ಅಧೀಕ್ಷಕ ಅಭಿಯಂತರರ ಕಛೇರಿ ಹಾಗೂ ಬೆಂಗಳೂರಿನ ಕ್ವಾಲಿಟಿ ಡಿವಿಜನ್‌ನಲ್ಲಿ ಲ್ಯಾಬ್ ಇದ್ದು, ಅವರಿಗೆ ಪತ್ರ ಬರೆದ ನಂತರ ಆ ಕಛೇರಿಯ ಇಂಜಿನಿಯರ್‌ರವರು ಬಂದು ಪರಿಶೀಲನೆ ಮಾಡಿ ವರದಿಯನ್ನು ನೀಡುತ್ತಾರೆಂದು ಸಭೆಗೆ ತಿಳಿಸಿದರು. ಹಾಗೆ ಲೋಕೋಪಯೋಗಿ ಇಲಾಖೆಯ ರಸ್ತೆ ಗುಣಮಟ್ಟ ಪರೀಕ್ಷೆಗೆ ಮಂಡ್ಯದಲ್ಲಿ ಲ್ಯಾಬ್ ಇರುವುದಿಲ್ಲ. ಮೈಸೂರಿನಲ್ಲಿ ಲ್ಯಾಬ್ ಇರುತ್ತದೆಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

**ಕಾಡಾ–ಮೈಸೂರು:**

ಸಭೆಯಲ್ಲಿ ಹಾಜರಿದ್ದ ಇಂಜಿನಿಯರ್‌ರವರು ಮಾತನಾಡಿ, ಕಾಡಾ ಮೈಸೂರು ವಿಭಾಗದಲ್ಲಿ 4705 ಹಾಗೂ 2705 ಎರಡು ಲೆಕ್ಕ ಶೀರ್ಷಿಕೆಗಳಿದ್ದು, 2705 ಲೆಕ್ಕ ಶೀರ್ಷಿಕೆಯಡಿ ಒಟ್ಟು 9 ಕಾಮಗಾರಿಗಳಿದ್ದು, ಅದರಲ್ಲಿ ಎರಡು ಕಾಮಗಾರಿಗಳು ಪೂರ್ಣಗೊಂಡಿದ್ದು, 4 ಕಾಮಗಾರಿಗಳು ಟೆಂಡರ್ ಹಂತದಲ್ಲಿದ್ದು, 3 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಹಾಗೂ ಲೆಕ್ಕ ಶೀರ್ಷಿಕೆ 4705–ವಿಶೇಷ ಅಭಿವೃದ್ಧಿ ಯೋಜನೆಯಡಿ 16 ಕಾಮಗಾರಿಗಳಿದ್ದು, ಅದರಲ್ಲಿ 14 ಮುಂದುವರಿದ ಕಾಮಗಾರಿಗಳು ಪೂರ್ಣ ಗೊಂಡಿದ್ದು, ಒಂದು ಕಾಮಗಾರಿ ಪ್ರಗತಿಯಲ್ಲಿದ್ದು, ಒಂದು ಕಾಮಗಾರಿಯನ್ನು ರದ್ದುಪಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

**ಕಾವೇರಿ ನೀರಾವರಿ ನಿಗಮ:**

ಅಧೀಕ್ಷಕ ಅಭಿಯಂತರರು ಕಾವೇರಿ ನೀರಾವರಿ ನಿಗಮದವರು ಮಾತನಾಡಿ, ಮೇಕೆದಾಟು ಯೋಜನೆಗೆ ಸಿ & ಡಿ ಲ್ಯಾಂಡ್ ನ್ನು ಅರಣ್ಯ ಇಲಾಖೆಯಿಂದ ಕೊಡಿಸಿಕೊಡಲು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸಿಕೊಡಬೇಕೆಂದು ಕೋರಿದರು. ಇದಕ್ಕೆ ಜಿಲ್ಲಾಧಿಕಾರಿಯವರು ಅರಣ್ಯ ಇಲಾಖಾಧಿಕಾರಿಗಳೊಂದಿಗೆ ಪ್ರಸ್ತಾಪಿಸಿ ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮ ವಹಿಸಲು ತಿಳಿಸುವುದಾಗಿ ಹೇಳಿದರು. ಅಧೀಕ್ಷಕ ಅಭಿಯಂತರರು ಕಾವೇರಿ ನೀರಾವರಿ ನಿಗಮ ರವರು ಮುಂದುವರಿದು ಮಾತನಾಡಿ, ಕೃಷ್ಣರಾಜಸಾಗರ ಜಲಾಶಯದ ಅಡಿಯಲ್ಲಿ 1.95 ಲಕ್ಷ ಎಕರೆಗಳ ಪ್ರದೇಶಕ್ಕೆ ನೀರು ಹರಿಸಲಾಗಿದ್ದು, ಭತ್ತದ ಬೆಳೆ ಕಟಾವು ಹಂತದಲ್ಲಿರುತ್ತದೆ. ಮತ್ತು ಅಚ್ಚುಕಟ್ಟು

ಪ್ರದೇಶದಲ್ಲಿ ಬರುವ 206 ಕೆರೆಗಳನ್ನು ಭರ್ತಿ ತುಂಬಿಸಲಾಗಿದ್ದು, ಡಿಸೆಂಬರ್ ಅಂತ್ಯಕ್ಕೆ ಖಾರಿಫ್ ಬೆಳೆಗೆ ನೀರನ್ನು ನಿಲ್ಲಿಸುವುದಾಗಿ ಸಭೆಗೆ ತಿಳಿಸಿದರು. ನಂತರು ಇದಕ್ಕೆ ಜಿಲ್ಲಾಧಿಕಾರಿಯವರು ಜಂಟಿ ಕೃಷಿ ನಿರ್ದೇಶಕರ ಅಭಿಪ್ರಾಯದೊಂದಿಗೆ ಡಿಸೆಂಬರ್ ಅಂತ್ಯಕ್ಕೆ ನಾಲೆಗಳಲ್ಲಿ ನೀರು ನಿಲ್ಲಿಸುವಂತೆ ತಿಳಿಸಿದರು. ಮುಂದುವರಿದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನಲ್ಲಿ ಪೂರಿಗಾಲಿ ಗ್ರಾಮದಲ್ಲಿ ಹನಿ / ತುಂತುರು ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಮಾಧವಮಂತ್ರಿ ಅಣೆಕಟ್ಟೆಯ ಹಿನ್ನೀರಿನಿಂದ (ಕಾವೇರಿ ನದಿ) ನೀರನ್ನು ಎತ್ತಿ ಸಮಗ್ರ ಹನಿ / ತುಂತುರು ನೀರಾವರಿ ಪದ್ಧತಿಯನ್ನು ಅಳವಡಿಸಿ ತಾಲ್ಲೂಕಿನ 51 ಗ್ರಾಮಗಳ 25327.75 ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಜಿಲ್ಲಾಧಿಕಾರಿಯವರು ರಾಜ್ಯದ ಇತರೆ ಜಿಲ್ಲೆಗಳಲ್ಲಿ ಇದೇ ತರಹ ಯೋಜನೆಗಳನ್ನು ಕಲ್ಪಿಸಲಾಗಿದ್ದು, ಅವು ವಿಫಲವಾಗಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ಅಧೀಕ್ಷಕ ಇಂಜಿನಿಯರ್ ರವರು ಅಚ್ಚುಕಟ್ಟು ಪ್ರದೇಶದ ರೈತರಿಗೆ 26 ಸ್ವ-ಸಹಾಯ ಸಂಘಗಳನ್ನು ರಚಿಸಲು ಅಂದಾಜು ಪಟ್ಟಿಯನ್ನು ಪ್ರಸ್ತಾಪಿಸಲಾಗಿದ್ದು, ಅದರಂತೆ ಗುತ್ತಿಗೆದಾರರು ರೈತರೊಂದಿಗೆ ಚರ್ಚಿಸಿ ಸಂಘಗಳನ್ನುರ ರಚನೆ ಮಾಡುವತ್ತ ನಿಗಮವು ಕಾರ್ಯೋನ್ಮುಖವಾಗಿದ್ದು, ರೈತರಿಗೆ ಮಾದರಿ ಪ್ಲಾಟ್ ಗಳನ್ನು ರಚಿಸಿ ಅವರಿಗೆ ಸೂಕ್ತ ತಿಳುವಳಿಕೆ ನೀಡುತ್ತಿರುವುದಾಗಿ ತಿಳಿಸಿದರು. ಇದರಿಂದ ರೈತರು ಯೋಜನೆಯ ಬಗ್ಗೆ ಸೂಕ್ತ ತಿಳುವಳಿಕೆಯೊಂದಿಗೆ ಯೋಜನೆಯ ಫಲಪ್ರದವಾಗಿ ಮಾಡುವ ನಿಟ್ಟಿನಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**(ಕ್ರಮ:- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ)**

**ಅಕ್ಷರ ದಾಸೋಹ:**

ಶಿಕ್ಷಣಾಧಿಕಾರಿ, ಅಕ್ಷರ ದಾಸೋಹರವರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಮಕ್ಕಳಿಗೆ ಬೇಳೆ ಮತ್ತು ಅಕ್ಕಿಯನ್ನು ಜೂನ್ ಮತ್ತು ಜುಲೈ ತಿಂಗಳಿಗೆ ವಿತರಣೆ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಮಾತನಾಡಿ, ಗ್ರಾಮ ಪಂಚಾಯತ್-2020 ಚುನಾವಣೆ ಸಂಬಂಧ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ಇಲ್ಲದೆ ಇರುವ ಬಗ್ಗೆ ಪಟ್ಟಿಯನ್ನು ಮಾಡಲಾಗಿದ್ದು, ಅಂತಹ ಕಡೆಗಳಲ್ಲಿ ಬೇಗ ಇವುಗಳನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಈ ಸಂದರ್ಭದಲ್ಲಿ ಮಾತನಾಡಿ, ಗ್ರಾಮ ಪಂಚಾಯತ್-2020 ಚುನಾವಣೆ ಹಿನ್ನೆಲೆಯಲ್ಲಿ ಮತಗಟ್ಟೆ ಕೇಂದ್ರಗಳಿಗೆ ವಿದ್ಯುತ್ ದುರಸ್ತಿ ಇದ್ದಲ್ಲಿ ಅವುಗಳನ್ನು ಚೆಸ್ಕಾಂರವರು ಪರಿಶೀಲಿಸಿ ಸರಿಪಡಿಸಿಕೊಡುವಂತೆ ಅಧೀಕ್ಷಕ ಅಭಿಯಂತರರು, ಚೆಸ್ಕಾಂರವರಿಗೆ ತಿಳಿಸಿದರು. ಹಾಗೆ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ, ರ್‍ಯಾಂಪ್ ವ್ಯವಸ್ಥೆಯನ್ನು ತ್ವರಿತವಾಗಿ ಮಾಡಿಸುವಂತೆ ಸಹ ತಿಳಿಸಿದರು.

**ಸಾರ್ವಜನಿಕ ಶಿಕ್ಷಣ ಇಲಾಖೆ:**

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮಾತನಾಡಿ, ಜನವರಿ-2021ನೇ ಮಾಹೆಯ 1ನೇ ತಾರೀಕಿನಿಂದ ವಿದ್ಯಾಗಮ ಯೋಜನೆಯನ್ನು ಪ್ರಾರಂಭ ಮಾಡಲು ಸರ್ಕಾರ ಚಿಂತನೆ ನಡೆಸುತ್ತಿದೆ. ಆದ್ದರಿಂದ ಶಾಲೆಗಳನ್ನು ಸ್ಯಾನಿಟೈಸರ್ ಮಾಡಿಸಿ ಸ್ವಚ್ಛಗೊಳಿಸುವಂತೆ ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಎಸ್.ಒ.ಪಿ. ಮಾರ್ಗಸೂಚಿ ಪ್ರಕಾರ ಸ್ಯಾನಿಟೈಸ್, ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕಾರ್ಯನಿರ್ವಹಿಸುವಂತೆ ಕ್ರಮವಹಿಸಲು ಉಪ ನಿರ್ದೇಶಕರಿಗೆ ತಿಳಿಸಿದರು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮುಂದುವರಿದು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಶಾಲೆ ಪ್ರಾರಂಭವಾದ ನಂತರ ಪ್ರತಿ ಮಕ್ಕಳನ್ನು ಥರ್ಮೋಸ್ಕ್ಯಾನ್ ಮಾಡುವುದು, ಮಕ್ಕಳಲ್ಲಿ ಸಾಮಾಜಿಕ ಅಂತರ ಕಾಪಾಡುವುದು, ಪ್ರತಿ ದಿನ ಮಕ್ಕಳಿಗೆ ಮೂರು ಅವಧಿಯಲ್ಲಿ ಪಾಠ ಮಾಡಿ, ನಂತರ ಮಕ್ಕಳನ್ನು ಮನೆಗೆ ಕಳುಹಿಸುವುದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ ಸಂಬಂಧ ಸಾರಿ ಮತ್ತು ಐ.ಎಲ್.ಐ. ಪ್ರಕರಣದ ಬಗ್ಗೆ ಮಾಹಿತಿಯನ್ನು ಕೇಳಿದಾಗ, ಜಿಲ್ಲಾಧಿಕಾರಿರವರು ಮಾತನಾಡಿ, ಶಿಕ್ಷಕರು ಮನೆ ಮನೆ ಸರ್ವೆ ಮಾಡಿದ್ದು, ನೆಗಡಿ, ಕೆಮ್ಮು, ಜ್ವರ ಇರುವವರನ್ನು ಗುರುತಿಸಿರುತ್ತಾರೆ. ಯಾವುದೇ ಗ್ರಾಮದಲ್ಲಿ ಯಾರಿಗೆ ಆರೋಗ್ಯದ ಸಮಸ್ಯೆ ಆದಲ್ಲಿ ತಕ್ಷಣವೇ ಅವರನ್ನು ಪರೀಕ್ಷೆ ಮಾಡಿಸುವ ಕೆಲಸ ಆಗಬೇಕು. ಈ ಬಗ್ಗೆ ಉಪ ನಿರ್ದೇಶಕರು ಶಿಕ್ಷಕರುಗಳು ಪಾಠ ಮಾಡುವುದರ ಜೊತೆಗೆ ಸರ್ವೆಯನ್ನು ಸಹ ಮಾಡಬೇಕೆಂದು ಸೂಚನೆ ನೀಡಬೇಕು. ಶಿಕ್ಷಕರುಗಳು ವೈದ್ಯರ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಡಿ.ಹೆಚ್.ಒ.ರವರು ತಾಲ್ಲೂಕು ಟಿ.ಹೆಚ್.ಒ. ಗಳಿಂದ ಶಿಕ್ಷಕರಿಗೆ ಈ ಬಗ್ಗೆ ತರಬೇತಿಯನ್ನು ನೀಡುವಂತೆ ಸಹ ತಿಳಿಸಿದರು.

**ಪದವಿ ಪೂರ್ವ ಕಾಲೇಜು:**

ಉಪ ನಿರ್ದೇಶಕರು, ಡಿ.ಡಿ.ಪಿ.ಯು.ರವರು ಮಾತನಾಡಿ, ಪಿ.ಯು.ಸಿ.ರವರಿಗೆ ಆನ್‌ಲೈನ್‌ನಲ್ಲಿ ತರಗತಿ ನಡೆಯುತ್ತಿದ್ದು ಉಪನ್ಯಾಸಕರು ವಾಟ್ಸಾಪ್ ಗ್ರೂಪ್ ಮೂಲಕ ವಿದ್ಯಾರ್ಥಿಗಳೊಡನೆ ಚರ್ಚೆ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ಆರೋಗ್ಯ ಇಲಾಖೆ:**

ಡಿ.ಹೆಚ್.ಒ.ರವರು ಜಿಲ್ಲೆಯಲ್ಲಿನ ಕೋವಿಡ್-19 ಪ್ರಕರಣದ ಬಗ್ಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ಇದುವರೆಗೆ ಈ ದಿನ ವರದಿಯಂತೆ 32 ಪಾಸಿಟೀವ್ ಪ್ರಕರಣಗಳು ಕಂಡುಬಂದಿದ್ದು, 148-ಮೃತಪಟ್ಟ ಪ್ರಕರಣಗಳು, 216-ಸಕ್ರಿಯ ಪ್ರಕರಣ ಗಳಿದ್ದು, ಒಟ್ಟು 18914-ಪಾಸಿಟಿವ್ ಪ್ರಕರಣಗಳಿದ್ದು, ಅದರಲ್ಲಿ

18550–ಪ್ರಕರಣಗಳು ಡಿಸ್‌ಛಾರ್ಜ್ ಆಗಿದೆ ಎಂದು ಸಭೆಗೆ ತಿಳಿಸಿದರು. ಮುಂದುವರಿದು ಆರ್.ಟಿ.ಪಿ.ಸಿ.ಆರ್. ಮತ್ತು ರ‍್ಯಾಟ್ ಟೆಸ್ಟಿಂಗ್‌ನ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಪರಿಶೀಲಿಸಿ, ಆರ್.ಟಿ.ಪಿ.ಸಿ.ಆರ್. ಟೆಸ್ಟ್ ಮಂಡ್ಯದಲ್ಲಿ ಕಡಿಮೆ ಇದೆ ಎಂದು ಕೇಳಿದಾಗ, ಡಿ.ಹೆಚ್.ಒ.ರವರು ವಿ.ಟಿ.ಎಂ. ಕೊರತೆಯಿಂದಾಗಿ ಟೆಸ್ಟ್ ಕಡಿಮೆ ಆಗಿದೆ ಎಂದು ತಿಳಿಸಿದರು. ಮುಂದುವರಿದು ಮಂಡ್ಯದಲ್ಲಿ ರ‍್ಯಾಟ್ ಟೆಸ್ಟ್ 8.32 ಪಾಸಿಟಿವ್ ರೇಟ್ ಇದ್ದು, ಇವುಗಳನ್ನು ಆರ್.ಟಿ.ಪಿ.ಸಿ.ಆರ್.ನಲ್ಲಿ ಟೆಸ್ಟ್ ಮಾಡಿದಾಗ ನೆಗೆಟಿವ್ ಬರುತ್ತಿದೆ ಎಂದು ಡಿ.ಹೆಚ್.ಒ. ರವರು ತಿಳಿಸಿ, ಇತ್ತೀಚೆಗೆ ಸರಬರಾಜಾಗುತ್ತಿರುವ ಟೆಸ್ಟ್ ಬ್ರ್ಯಾಂಡ್‌ನಲ್ಲಿ ಸಮಸ್ಯೆಯಿದ್ದು ಇದರಿಂದಾಗಿ ಫಲಿತಾಂಶದಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ ಎಂದು ಸಹ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ಈ ಬಗ್ಗೆ ಕೂಡಲೇ ಸರ್ಕಾರಕ್ಕೆ ವರದಿಯನ್ನು ಮಾಡುವಂತೆ ಡಿ.ಹೆಚ್.ಒ.ರವರಿಗೆ ಸೂಚಿಸಿದರು.

**(ಕ್ರಮ:– ಡಿ.ಹೆಚ್.ಒ. ಆರೋಗ್ಯ ಇಲಾಖೆ, ಮಂಡ್ಯ)**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮುಂದುವರಿದು ಮಾತನಾಡಿ, ಜಿಲ್ಲೆಯಲ್ಲಿ ಕಳೆದ ತಿಂಗಳಲ್ಲಿ ಸಾರಿ ಪ್ರಕರಣದಲ್ಲಿ ಎಷ್ಟು ಮರಣ ಸಂಭವಿಸಿದೆ ಎಂದು ಮಾಹಿತಿಯನ್ನು ಕೇಳಿದಾಗ, ಆರ್.ಸಿ.ಹೆಚ್.ಒ.ರವರು ಮಾತನಾಡಿ, ಕಳೆದ ಮಾಹೆ ಜಿಲ್ಲೆಯಲ್ಲಿ ಸಾರಿ ಪ್ರಕರಣದಲ್ಲಿ 23 ಮೃತಪಟ್ಟಿರುತ್ತಾರೆಂದು ಸಭೆಗೆ ತಿಳಿಸಿದರು. ಹೆಲ್ತ್ ಫೆಸಿಲಿಟಿ 510ರಲ್ಲಿ 161 ಅಪ್ ಲೋಡ್ ಆಗಿರುತ್ತದೆ. ಖಾಸಗಿ ಹೆಲ್ತ್ ಫೆಸಿಲಿಟಿ 349 ಇದ್ದು ಶೇ.100ರಷ್ಟು ಅಪ್‌ಲೋಡ್ ಮಾಡಲಾಗಿರುತ್ತದೆ. Session site & Vaccinator data ದಲ್ಲಿ Government Session site 571 ಇದ್ದು ಶೇ.100ರಷ್ಟು ಅಪ್‌ಲೋಡ್ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಡಿ.ಹೆಚ್.ಒ.ರವರು ಈ ಸಂದರ್ಭದಲ್ಲಿ ಮಾತನಾಡಿ, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಕಳೆದ 10 ದಿನದಲ್ಲಿ 12 ಪಾಸಿಟಿವ್ ಪ್ರಕರಣಗಳು ದಾಖಲಾಗಿರುತ್ತದೆ. ಮದ್ದೂರು ತಾಲ್ಲೂಕು ಆಸ್ಪತ್ರೆಯಲ್ಲಿ ಡಯಾಲೀಸಿಸ್ ರೋಗಿಗಳಲ್ಲಿ 13 ಪಾಸಿಟಿವ್ ಬಂದಿರುತ್ತದೆ ಹಾಗೂ ಒಟ್ಟು 140 ಡೆಲವರಿ ಕೇಸ್‌ನಲ್ಲಿ 4 ಪಾಸಿಟಿವ್‌ನಿಂದ ಮೃತಪಟ್ಟಿರುತ್ತಾರೆ. ತಾಲ್ಲೂಕು ಆಸ್ಪತ್ರೆಗಳಲ್ಲಿ 50 ಆಕ್ಸಿಜನ್ ಬೆಡ್ ಇದೆ. ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಿ.ಹೆಚ್.ಸಿ.ಗಳಿಗೂ ಸಹ ಆಕ್ಸಿಜನ್ ಬೆಡ್‌ಗಳು ಅಳವಡಿಸ ಲಾಗುತ್ತಿದೆ ಎಂದು ಸಹ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಕೆ.ಹೆಚ್.ಎಸ್.ಆರ್.ಡಿ.ಪಿ.ರವರಿಂದ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಬಗ್ಗೆ ಮಾಹಿತಿಯನ್ನು ಪಡೆದರು. ನಂತರ ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ಗಳಿಂದ ಕೋವಿಡ್ ನಿಯಂತ್ರಣದಲ್ಲಿ ಯಾವ ರೀತಿ ಮುಂಜಾಗ್ರತೆ ತೆಗೆದುಕೊಳ್ಳಲಾಗುತ್ತಿದೆ ಎಂದು ಸಹ ಚರ್ಚಿಸಿದರು.

ಈ ಬಗ್ಗೆ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್‌ಗಳು ಮಾತನಾಡಿ ಟಿ.ಹೆಚ್.ಓ.ಗಳಿಂದ ಕೋವಿಡ್ ಪರೀಕ್ಷೆಗಳನ್ನು ಮಾಡಿಸಲಾಗುತ್ತಿದ್ದು ಪ್ರಕರಣಗಳ ಸಂಖ್ಯೆ ಕಡಿಮೆ ಇದೆ. ಮೋಬೈಲ್ ಯೂನಿಟ್‌ನಿಂದಲೂ ಸಹ ಪರೀಕ್ಷೆಗಳನ್ನು ಮಾಡಿಸಲಾಗುತ್ತಿದೆ. ಹಾಸ್ಟೆಲ್‌ಗಳು ಪ್ರಾರಂಭ ವಾಗುತ್ತಿರುವುದರಿಂದ ಅವುಗಳನ್ನು ಸ್ಯಾನಿಟೈಸ್ ಮಾಡಿ ಸ್ವಚ್ಛಗೊಳಿಸಲಾಗುತ್ತಿದೆ. ಈಗ ಕಾರ್ತಿಕ ಮಾಸದಲ್ಲಿ ದೇವಾಲಯಗಳಲ್ಲಿ ಪೂಜೆಗೆ ಹೆಚ್ಚಿನ ಜನರು ಸೇರದಂತೆ ಕ್ರಮವಹಿಸಲು ಮುಜರಾಯಿ ಇಲಾಖೆ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಯವರು ಸರ್ಕಾರದ ಮಾರ್ಗಸೂಚಿಯಂತೆ ಸ್ಯಾನಿಟೈಸ್, ಸಾಮಾಜಿಕ ಅಂತರ, ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ನಿರ್ದೇಶನ ನೀಡಿ ಕ್ರಮವಹಿಸುತ್ತಿದ್ದಾರೆ. ಮದುವೆಗೆ ಈಗ ಹೆಚ್ಚಿನ ಜನರು ಸೇರುತ್ತಿದ್ದಾರೆ. ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸದೆ ಇದ್ದಲ್ಲಿ ಪೊಲೀಸ್ ಇಲಾಖೆಯಿಂದ ದಂಡವನ್ನು ವಿಧಿಸಿದ್ದಲ್ಲಿ ಜನರಿಗೆ ಭಯ ಇರುತ್ತದೆ ಎಂದು ತಿಳಿಸಿದರು. ಹಾಗೆ ಈಗ ಗ್ರಾಮ ಪಂಚಾಯಿತಿ ಚುನಾವಣೆ ಹಿನ್ನಲೆಯಲ್ಲಿ ನಾಮ ನಿರ್ದೇಶನ ಮಾಡುವ ವೇಳೆಯಲ್ಲಿ ಹೆಚ್ಚಿನ ಜನರು ಸೇರದಂತೆ ನಿಯಂತ್ರಣ ಮಾಡಲಾಗುತ್ತಿದೆ. ವಿಲೇಜ್ ಟಾಸ್ಕ್ ಪೋರ್ಸ್ ಮಾಡಿಕೊಂಡು ಹೋಬಳಿ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ಮಾಡಿಕೊಂಡು ಪ್ರತಿ ವಾರ ಸಭೆ ಮಾಡಲಾಗುತ್ತಿದೆ. ಸಭೆ ಸಮಾರಂಭಗಳನ್ನು ಮಾಡಲು ತಹಶೀಲ್ದಾರ್ ಅನುಮತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಲು ನಿರ್ದೇಶನ ನೀಡಲಾಗಿದ್ದು, ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ಈಗ ಜನರಲ್ಲಿ ಕೋವಿಡ್ ಇಲ್ಲವೆಂದು ತಿಳಿದುಕೊಂಡಿರುತ್ತಾರೆ. ಆದರೆ ಕೋವಿಡ್ 2ನೇ ಬಾರಿ ಬರುವ ಸಾಧ್ಯತೆಯಿದ್ದು, ಆದ್ದರಿಂದ ಇದಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

**ಮಿಮ್ಸ್:**

ನಿರ್ದೇಶಕರು, ಮಿಮ್ಸ್‌ರವರು ಮಾತನಾಡಿ, 7244 ರೋಗಿಗಳು ಡಿಸ್‌ಛಾರ್ಜ್ ಆಗಿರುತ್ತಾರೆ, ಐ.ಸಿ.ಯು.ನಲ್ಲಿ 13 ರೋಗಿಗಳಿದ್ದು, ವೆಂಟಿಲೇಟರ್‌ನಲ್ಲಿ ಒಬ್ಬ ರೋಗಿ, 30 ರೋಗಿಗಳು ಹೋಂ ಐಸೋಲೇಶನ್‌ನಲ್ಲಿ ಇರುತ್ತಾರೆ. ಹೋಂ ಐಸೋಲೇಶನ್‌ನಲ್ಲಿರುವವರು ಯಾರು ಮೃತಪಟ್ಟಿರುವುದಿಲ್ಲ ವೆಂದು ಸಭೆಗೆ ತಿಳಿಸಿದರು.

ಡಿ.ಹೆಚ್.ಓ.ರವರು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 260 ಪಾಸಿಟಿವ್ ಕೇಸ್‌ಗಳಲ್ಲಿ ಶೇ.80ರಷ್ಟು ಹೋಂ ಐಸೋಲೇಶನ್‌ನಲ್ಲಿ ಇರುತ್ತಾರೆ. ಪಾಸಿಟಿವ್ ಬಂದ ಕೂಡಲೇ ಅಂತಹ ರೋಗಿಗಳನ್ನು 10 ದಿನ ಹೋಂ ಐಸೋಲೇಶನ್‌ನಲ್ಲಿರಿಸಿ ಅವರನ್ನು ಪ್ರತಿ ದಿನ ದೂರವಾಣಿ ಮೂಲಕ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ಪಡೆದು ಅವರಿಗೆ ಚಿಕಿತ್ಸೆಯನ್ನು ನೀಡಲು ತಿಳಿಸಲಾಗುತ್ತಿದ್ದು, ಇದುವರೆಗೂ ಸಹ ಒಬ್ಬರೂ ಮೃತಪಟ್ಟಿರುವುದಿಲ್ಲವೆಂದು ತಿಳಿಸಿದರು.

**ಸಮಾಜ ಕಲ್ಯಾಣ ಇಲಾಖೆ**

ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆರವರು ಜಿಲ್ಲೆಯಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಪ್ರಾರಂಭವಾಗಿದೆ. 21 ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಿದ್ದು, ಅಂತಿಮ ವರ್ಷದ ವಿದ್ಯಾರ್ಥಿ ಗಳಿಗೆ ನೊಂದಣಿ ಮಾಡಿಕೊಳ್ಳಲಾಗುತ್ತಿದೆ. ಇದುವರೆಗೆ 327 ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿರುತ್ತಾರೆ. ಎಸ್.ಒ.ಪಿ. ಮಾರ್ಗಸೂಚಿ ಪ್ರಕಾರ ಕಡ್ಡಾಯವಾಗಿ ಹಾಸ್ಟೆಲ್ ವಿದ್ಯಾರ್ಥಿಗಳು ಕೋವಿಡ್ ಟೆಸ್ಟ್ ಮಾಡಿಸಿರಬೇಕು. ಪೋಷಕರಿಂದ ಹಾಗೂ ಕಾಲೇಜು ಪ್ರಾಂಶುಪಾಲರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಪಡೆದುಕೊಂಡು ಅವರನ್ನು ಹಾಸ್ಟೆಲ್‌ಗೆ ನೊಂದಣಿ ಮಾಡಿಕೊಳ್ಳಲಾಗಿದೆ. ಪ್ರತಿ ದಿನ ವಿದ್ಯಾರ್ಥಿಗಳು ಹಾಸ್ಟೆಲ್‌ಗೆ ಬಂದ ಕೂಡಲೇ ಅವರನ್ನು ಥರ್ಮೋಸ್ಕ್ಯಾನ್ ಮಾಡಲಾಗುತ್ತದೆ. ಎಂದು ತಿಳಿಸಿದರು. 2019-20ನೇ ಸಾಲಿನ ವಿದ್ಯಾರ್ಥಿ ವೇತನವನ್ನು ನೀಡಲಾಗಿರುತ್ತದೆ. ಇಲಾಖೆಯ ಕಾಮಗಾರಿಗಳ ಬಗ್ಗೆ ವಿವರಿಸುತ್ತಾ, ಕಳೆದ ವರ್ಷ ರೂ.246.00ಲಕ್ಷ ಕಾಮಗಾರಿಗಳಿಗೆ ಬಿಡುಗಡೆ ಆಗಿದೆ. ಸ್ಮಶಾನ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಶೇ.50ರಷ್ಟು ಅನುದಾನ ಖರ್ಚಾಗಿದೆ. ಇಲಾಖಾ ವತಿಯಿಂದ 171 ಡಾ:ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಭವನ ಕಾಮಗಾರಿಗಳು ಪ್ರಗತಿಯಲ್ಲಿದೆ, 65 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, ಇದಕ್ಕೆ ಎಫ್.ಐ.ಆರ್. ಆದ ಕೂಡಲೇ ಪರಿಹಾರವನ್ನು ನೀಡಲಾಗುತ್ತಿದೆ. ಈ ಬಗ್ಗೆ ಎರಡು ಸಭೆ ಆಗಿದೆ, ಉಳಿದಂತೆ ಇಲಾಖಾ ಕಾರ್ಯಕ್ರಮ ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರು ಮಾತನಾಡಿ, ಪ್ರಸಕ್ತ ಸಾಲಿಗೆ ಇಲಾಖಾ ಕಾರ್ಯಕ್ರಮಕ್ಕೆ ನಿಗದಿಯಾಗಿರುವ ಅನುದಾನದಲ್ಲಿ ಶೇ.25ರಷ್ಟು ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ಇಲಾಖೆಗೆ ಸೇರಿದ 54 ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಿದ್ದು, ಅದರಲ್ಲಿ 768 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಎಸ್.ಒ.ಪಿ. ಮಾರ್ಗಸೂಚಿ ಪ್ರಕಾರ ಹಾಸ್ಟೆಲ್ ವಿದ್ಯಾರ್ಥಿಗಳನ್ನು ಪ್ರತಿದಿನ ಎರಡು ಬಾರಿ ಟೆಂಪರೇಚರ್ ಚೆಕ್ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ.53.00ಲಕ್ಷ ದುರಸ್ತಿ ಕಾಮಗಾರಿ ಗಳಿದ್ದು, ಇದಕ್ಕೆ ಕ್ರಿಯಾ ಯೋಜನೆ ಅನುಮೋದನೆ ಆಗಬೇಕಿದೆ. ಅದರಲ್ಲಿ ರೂ.24.00ಲಕ್ಷ ಮುಂದುವರಿದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ದೊರಕಿದೆ ಎಂದು ಸಭೆಗೆ ತಿಳಿಸಿದರು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಉಪ ನಿರ್ದೇಶಕರು, ಇಲಾಖಾ ಕಾರ್ಯಕ್ರಮಗಳಲ್ಲಿನ ಪ್ರಗತಿಯನ್ನು ವಿವರಿಸುತ್ತಾ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ 2546 ಅಂಗನವಾಡಿ ಕೇಂದ್ರಗಳಿದ್ದು, ಕೋವಿಡ್-19 ಪ್ರಯುಕ್ತ ಫಲಾನುಭವಿಗಳ ಮನೆಗೆ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 110951 ಫಲಾನುಭವಿಗಳಿದ್ದು ಅದರಲ್ಲಿ 110204 ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಿ ಶೇ.99ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು. ನಂತರ ಪ್ರಧಾನಮಂತ್ರಿ ಮಾತೃವಂದನಾ

ಯೋಜನೆಯಡಿ ನವೆಂಬರ್-2020ರ ಅಂತ್ಯಕ್ಕೆ ಒಟ್ಟು 36450 ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ. 2020-21ನೇ ಸಾಲಿನಲ್ಲಿ ಏಪ್ರಿಲ್-2020 ರಿಂದ ನವೆಂಬರ್-2020ರವರೆಗೆ 5936 ಗುರಿ ನಿಗದಿಯಾಗಿದ್ದು, 8431 ಮಂದಿ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಒದಗಿಸಿ ಗುರಿ ಮೀರಿದ ಸಾಧನೆ ಮಾಡಲಾಗಿದೆಯೆಂದು ಸಹ ಸಭೆಗೆ ತಿಳಿಸಿದರು.

ಮುಂದುವರಿದು ಮಹಿಳಾ ಅಭಿವೃದ್ಧಿ ನಿಗಮದಡಿ ಉದ್ಯೋಗಿನಿ ಯೋಜನೆಯಡಿ 34, ಕಿರುಸಾಲ ಯೋಜನೆಯಡಿ 07 ಭೌತಿಕ ಗುರಿ ನಿಗದಿಪಡಿಸಲಾಗಿದ್ದು, ಎರಡೂ ಯೋಜನೆಗಳಿಗೂ ಆಯಾ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಈ ಯೋಜನೆಗಳಡಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ಮಾನ್ಯ ಶಾಸಕರ ಸಮಿತಿಗೆ ಸಲ್ಲಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಚೇತನಾ, ಧನಶ್ರೀ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಗಳಡಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ E.D.P. ತರಬೇತಿ ನೀಡಿ ನಂತರ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ನಿಗಮಕ್ಕೆ ಸಲ್ಲಿಸಲಾಗುವುದು ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಆರ್.ಐ.ಡಿ.ಎಫ್-25ರಡಿ 23 ಕಟ್ಟಡಗಳು ಜಿಲ್ಲೆಗೆ ಮಂಜೂರಾಗಿದ್ದು, 11 ಕಟ್ಟಡಗಳ ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. ಬಾಕಿ 12 ಕಟ್ಟಡಗಳ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ. ಅವುಗಳಲ್ಲಿ 05 ಕಟ್ಟಡಗಳ ಸ್ಥಳ ಬದಲಾವಣೆಗಳಿಗಾಗಿ ಪ್ರಸ್ತಾವನೆಯನ್ನು ಕೇಂದ್ರ ಕಚೇರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಈ ಬಗ್ಗೆ ಮಾತನಾಡಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಬಗ್ಗೆ ತುರ್ತು ಕ್ರಮವಹಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚನೆ ನೀಡಿದರು.

ಜಿಲ್ಲೆಯಲ್ಲಿ 06 ತಿಂಗಳಿಂದ 06 ವರ್ಷದ 97748 ಮಕ್ಕಳಿದ್ದು, ಎಲ್ಲಾ ಮಕ್ಕಳನ್ನೂ ತೂಕ ಮಾಡಿದ್ದು ಅದರಲ್ಲಿ 93032 ಮಕ್ಕಳು ಸಾಮಾನ್ಯ ಅಪೌಷ್ಠಿಕ ಮಕ್ಕಳಾಗಿದ್ದು, 4552 ಮಕ್ಕಳು ಸಾಧಾರಣ ಅಪೌಷ್ಠಿಕ, 164 ಮಕ್ಕಳು ತೀವ್ರ ಅಪೌಷ್ಠಿಕ, ಮಕ್ಕಳಾಗಿರುತ್ತಾರೆಂದು ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಹಾಗೂ ಅಪೌಷ್ಠಿಕತೆಯ ನಿವಾರಣೆಗಾಗಿ ಇಲಾಖೆಯಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು. ಈ ಸಂಬಂಧ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಜಿಲ್ಲೆಯಲ್ಲಿ ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಬಗ್ಗೆ ನಿಗಾವಹಿಸಿ ಅವರ ಅಪೌಷ್ಠಿಕತೆಯನ್ನು ಹೋಗಲಾಡಿಸಲು ತುರ್ತು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ ಇವರಿಗೆ ತಿಳಿಸುತ್ತಾ ಮುಂದಿನ ಸಭೆಯಲ್ಲಿ ಈ ಬಗ್ಗೆ ವಿವರಗಳನ್ನು ತಿಳಿಸುವಂತೆ ಸೂಚಿಸಿದರು.

(ಕ್ರಮ:- ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ)

**ಭೂಮಾಪನ ಇಲಾಖೆ:**

ಉಪ ನಿರ್ದೇಶಕರು, ಭೂಮಾಪನ ಇಲಾಖೆರವರು, ಜಿಲ್ಲೆಯಲ್ಲಿ ಹದ್ದುಬಸ್ತು ಮಾಡಲು 13000 ಅರ್ಜಿಗಳು ಬಾಕಿ ಇದೆ. ಅಖಾರ್ ಬಂದ್ ಡೇಟಾ ಎಂಟ್ರಿ ಮುಗಿದಿದ್ದು ವ್ಯಾಲಿಡೇಶನ್ ಫೆಬ್ರವರಿ ಮಾಹೆಯೊಳಗೆ ಪೂರ್ಣ ಮಾಡಲಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿರವರು ಮಾತನಾಡಿ, ಆರ್.ಟಿ.ಸಿ. ಮಾಡಿದ ನಂತರ ಇಸ್ಸಾ ಆಗಬೇಕೆಂದು ಹಾಗೂ ಆರ್.ಟಿ.ಸಿ.ತಿದ್ದುಪಡಿಯಲ್ಲಿ ವಿಳಂಬ ಮಾಡಬಾರದೆಂದು ಉಪ ನಿರ್ದೇಶಕರಿಗೆ ತಿಳಿಸಿದರು.

**ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ:**

ಮಂಡ್ಯ ಜಿಲ್ಲೆಗೆ ಏಪ್ರಿಲ್-2020 ರಿಂದ ನವೆಂಬರ್-2020ರ ಮಾಹೆವರೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ ಎರಡು ತಿಂಗಳ ಕೋಟಾ ಬಿಡುಗಡೆಯಾಗಿದ್ದು, ಪೂರ್ಣ ಪ್ರಮಾಣದಲ್ಲಿ ಎತ್ತುವಳಿ ಮಾಡಿ ಪಡಿತರ ಚೀಟಿದಾರರಿಗೆ ವಿತರಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ನಂತರ ಮಂಡ್ಯ ಜಿಲ್ಲೆಯಲ್ಲಿ 4,85,324 ಆದ್ಯತಾ (ಬಿಪಿಎಲ್) ಪಡಿತರ ಚೀಟಿಗಳಿದ್ದು, 2011ರ ಜನಗಣತಿಯ ಪ್ರಕಾರ ಒಟ್ಟು 4,26,578 ಕುಟುಂಬಗಳಿದ್ದು, ಅಂದರೆ, ಶೇ.113% ಕುಟುಂಬಗಳಿಗೆ ಆದ್ಯತಾ ಪಡಿತರ ಚೀಟಿಗಳಿರುತ್ತವೆ. ಆದರೆ 2011ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ 18,08,686 ಜನಸಂಖ್ಯೆಯಿದ್ದು, 14,31,563 ಆದ್ಯತಾ (ಬಿಪಿಎಲ್) ಫಲಾನುಭವಿಗಳಿರುತ್ತಾರೆ. ಅಂದರೆ ಜನಸಂಖ್ಯೆಯ ಶೇ.79ರಷ್ಟು ಆದ್ಯತಾ (ಬಿಪಿಎಲ್) ಫಲಾನುಭವಿಗಳಿರುತ್ತಾರೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2020-21ನೇ ಸಾಲಿನಲ್ಲಿ ಭತ್ತ ಮತ್ತು ರಾಗಿಯನ್ನು ಖರೀದಿಸಲು ಸರ್ಕಾರದಿಂದ ಆದೇಶವಾಗಿದ್ದು, ರೈತರ ನೋಂದಣಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಎಂದು ಸಹ ಸಭೆಗೆ ವಿವರಿಸಿದರು.

ಮುಂದುವರಿದು ದಿನಾಂಕ: 16-12-2020ರ ಅಂತ್ಯಕ್ಕೆ ಶೇ.50%ರಷ್ಟು ಮೆಟ್ರಿಕ್ ಟನ್ ಕಬ್ಬನ್ನು ಕಾರ್ಖಾನೆಗಳಲ್ಲಿ ನುರಿಸಲಾಗಿರುತ್ತದೆ. ಮೈ ಶುಗರ್ ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಬೇಕಾಗಿದ್ದು, ಯಾವುದೇ ನಿರ್ದೇಶನ ಸ್ವೀಕೃತವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

**ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ:**

ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯತ್, ಮಂಡ್ಯರವರು ನರೇಗಾ ಯೋಜನೆಯ ಪ್ರಗತಿಯನ್ನು ವಿವರಿಸುತ್ತಾ, ಇದುವರೆಗೆ ರೂ.104.03ಕೋಟಿ ವೆಚ್ಚ ಮಾಡಲಾಗಿದೆ. ಪೆಂಡಿಂಗ್ ಬಿಲ್‌ಗೆ ಕೇಂದ್ರದಿಂದ ರೂ.1.97ಕೋಟಿ ಹಣ ಬರಬೇಕಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಮಾತನಾಡಿ, ನರೇಗಾ ಯೋಜನೆಯಡಿ ಹಿಂದೆ ಲೈನ್ ಡಿಪಾರ್ಟ್‌ಮೆಂಟ್‌ಗಳವರು ಇಲಾಖೆಯಿಂದ ಕ್ರಿಯಾ ಯೋಜನೆಯನ್ನು ಮಾಡಲಾಗುತ್ತಿತ್ತು. ಇನ್ನು ಮುಂದೆ ಗ್ರಾಮ ಪಂಚಾಯಿತಿಯಲ್ಲಿ ಇಲಾಖೆಗಳ ಕ್ರಿಯಾ ಯೋಜನೆಯನ್ನು ಮಾಡಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮಾತನಾಡಿ, ನರೇಗಾ ಯೋಜನೆಯಡಿ ಗ್ರಾಮ ಪಂಚಾಯಿತಿ ಮತ್ತು ಇತರೆ ಅನುಷ್ಠಾನ ಇಲಾಖೆಗಳ ಮಾನವ ದಿನ ಸೃಜನೆ ಪ್ರಗತಿ ಮತ್ತು

**ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ:**

ಜಿಲ್ಲಾ ವ್ಯವಸ್ಥಾಪಕರು ಮಾತನಾಡಿ ಅಭಿವೃದ್ಧಿ ನಿಗಮದ ವತಿಯಿಂದ 2018-19ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಸುಮಾರು 83 ಬೋರ್‌ವೆಲ್‌ಗಳಿಗೆ ಡ್ರಿಲ್ ಮಾಡಲಾಗಿದ್ದು, ಅದಕ್ಕೆ ಪಂಪು ಮತ್ತು ಮೋಟಾರ್ ಅಳವಡಿಸುವುದಕ್ಕೆ ಕೇಂದ್ರ ಕಚೇರಿಯಿಂದ ಟೆಂಡರ್ ಕರೆಯಲಾಗಿತ್ತು, ಇದಕ್ಕೆ ನ್ಯಾಯಾಲಯದಲ್ಲಿ ತಡೆಯಾಗಿರುವುದರಿಂದ ಎಲ್ಲಾ ಅಭಿವೃದ್ಧಿ ನಿಗಮಗಳು ಸೇರಿದಂತೆ 100 ಬೋರ್‌ವೆಲ್‌ಗಳಿಗೆ ಪಂಪು ಮತ್ತು ಮೋಟಾರ್ ಅಳವಡಿಸಲು ಬಾಕಿ ಇರುತ್ತದೆಂದು ಸಭೆಗೆ ತಿಳಿಸಿದರು.

**ಸಹಕಾರ ಇಲಾಖೆ:**

ಸಭೆಯಲ್ಲಿ ಹಾಜರಿದ್ದ ಅಧಿಕಾರಿರವರು ಮಾತನಾಡಿ, 2018-19ನೇ ಸಾಲಿನಲ್ಲಿ 1,11,399 ಸಾಲ ಮನ್ನಾ ಯೋಜನಗೆ ರೈತರು ನೋಂದಣಿಯಾಗಿದ್ದು, ಅದರಲ್ಲಿ 109153 ಜನರಲ್ಲಿ ರೂ.509.15ಕೋಟಿಗಳು ಬಾಕಿ ಇದ್ದು, ಅದರಲ್ಲಿ 102695 ಜನರಿಗೆ ರೂ.475.65ಕೋಟಿ ಸಾಲ ಮನ್ನಾ ಆಗಿದೆ. ಇನ್ನು 6458 ಜನರಿಗೆ ರೂ.33.50ಕೋಟಿಗಳು ಸಾಲ ಮನ್ನಾ ಬಾಕಿ ಇರುತ್ತದೆ ಹಾಗೂ 3800 ಜನರಿಗೆ ರೂ.17.00ಕೋಟಿಗಳು ಸರ್ಕಾರದಿಂದ ಹಣ ಬರಬೇಕಿದ್ದು, ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿರವರು ಮಾತನಾಡಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಮತದಾರರ ಪಟ್ಟಿ ಪರಿಷ್ಕರಣೆಗೆ ಜಿಲ್ಲೆಗೆ ನೋಡಲ್ ಅಧಿಕಾರಿಗಳನ್ನಾಗಿ ಸರ್ಕಾರ ನೇಮಿಸಿದ್ದು, ಈ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡಿದರು. ಈ ಗಾಗಲೇ ದಿನಾಂಕ:08.11.2020 ರಂದು ಪ್ರಕರಟಿಸಲಾದ ಕರಡು ಮತದಾರರ ಪಟ್ಟಿಯನ್ನು ನೋಂದಾಯಿತ ರಾಜಕೀಯ ಪಕ್ಷಗಳಿಗೆ ನೀಡಿರುವ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು ಹಾಗೂ ಇ.ಪಿ ರೇಷಿಯೋ ಮತ್ತು ಲಿಂಗಾನುಪಾತದದ ರೇಷಿಯೋ ಬಗ್ಗೆ ಚರ್ಚಿಸಲಾಯಿತು. ಜಿಲ್ಲೆಯಲ್ಲಿ 81.96 ಇ.ಪಿ ರೇಷಿಯೋ ಇದ್ದು ಇದನ್ನು ಸರಿ ದೂಗಿಸಲು ಮರಣಹೊಂದಿದ ಮತದಾರರು ಸ್ಥಳಾಂತರ ಹೊಂದಿದ ಹಾಗೂ ಪುನರಾವರ್ತನೆಯಾಗಿರುವ ಮತದಾರರನ್ನು ಗುರುತಿಸಿ ನಮೂನೆ-7 ರಲ್ಲಿ ಅರ್ಜಿ ಪಡೆದು ಸೂಕ್ತ ದಾಖಲಾತಿಯೊಂದಿಗೆ ಪರಿಶೀಲಿಸಿ ಕ್ರಮವಹಿಸುವಂತೆ ಮತದಾರರಪಟ್ಟಿಯ ವೀಕ್ಷಕರು ಸೂಚಿಸದರು DSE ಮತ್ತು logical Error ಬಾಕಿಯಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಸೂಚಿಸಿದರು, ಸೂಕ್ಷ್ಮ ಮತ್ತು ಅತೀಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸುವುದು ಮತ್ತು ಮತದಾರರಪಟ್ಟಿಯಲ್ಲಿ ಹೆಚ್ಚು ನೋಂದಣಿಯಾಗಿರುವ, ಹೆಚ್ಚು ಕೈಬಿಡಲಾದ ಮತಗಟ್ಟೆಗಳನ್ನು ಹಾಗೂ ಕನಿಷ್ಠ ನೋಂದಣಿಯಾಗಿರುವ , ಕನಿಷ್ಠ ಕೈಬಿಡಲಾಗಿರುವ ಮತದಾರರಪಟ್ಟಿಯ ವಿವರವನ್ನು ಮತದಾರರ ನೋಂದಣಾಧಿಕಾರಿಗಳು ಭೌತಿಕವಾಗಿ ಖುದ್ದು ಪರಿಶೀಲಿಸುವಂತೆ ಸೂಚಿಸಿದರು ಮುಂದಿನ ಭೇಟಿಯ ಸಭೆಗೆ ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಆಹ್ವಾನಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿ, ಜಿಲ್ಲೆಯ ರೈತರ ಆತ್ಮಹತ್ಯೆ ಪ್ರಕರಣಗಳ ಪರಿಹಾರ ಧನ ಸಮರ್ಪಕವಾಗಿ

ವಿತರಣೆಯಾಗುತ್ತಿಲ್ಲವೆಂದು ದೂರುಗಳು ಬರುತ್ತಿದ್ದು ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು, ಜಿಲ್ಲೆಯಲ್ಲಿನ ಜಾನುವಾರುಗಳ ಸ್ಥಿತಿಗತಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕು, ಜಾನುವಾರುಗಳಿಗೆ ಮೇವಿನ ಕಿಟ್‌ಗಳನ್ನು ಸರಿಯಾಗಿ ಸರಬರಾಜು ಮಾಡಬೇಕು. ರಾಸಾಯನಿಕ ಮುಕ್ತ ಕೃಷಿಗೆ ಉತ್ತೇಜಿಸಲು ಸಾವಯವ ಕೃಷಿ ಬೆಳೆಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸಾವಯವ ಕೃಷಿ ಬೆಳೆಗಳ ಬಿತ್ತನೆ, ಉತ್ಪಾದನೆಗೆ ಹೆಚ್ಚು ಒತ್ತು ನೀಡಿ, ರೈತರಲ್ಲಿ ಈ ಬಗ್ಗೆ ಭರವಸೆ ಮೂಡಿಸುವ ಕೆಲಸ ಮಾಡಬೇಕು. ತೋಟಗಾರಿಕೆ ಬೆಳೆಗಳ ವಿಸ್ತೀರ್ಣ, ಉತ್ಪಾದನೆ, ಉತ್ಪಾದಕತೆ ಮೌಲ್ಯಗಳನ್ನು ಹೆಚ್ಚಿಸಬೇಕು ಎಂದು ಸೂಚಿಸಿದರು. ಎಲ್ಲಾ ಇಲಾಖೆಗಳಲ್ಲೂ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ವೆಂದು ಸಾರ್ವಜನಿಕರಿಂದ ದೂರುಗಳು ಬರುತ್ತಿದ್ದು, ಮುಂದಿನ ಸಭೆಯೊಳಗೆ ಯಾವುದೇ ದೂರುಗಳು ಬರದಂತೆ ಸಂಬಂಧಿಸಿದ ಇಲಾಖಾಧಿಕಾರಿಗಳು ಕೂಡಲೇ ಕ್ರಮವಹಿಸಿ ಪ್ರಗತಿಯನ್ನು ಸಾಧಿಸುವಂತೆ ನಿರ್ದೇಶಿಸಿದರು.

ಅಂತಿಮವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸ ಲಾಯಿತು.

ಆಯುಕ್ತರು

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು

ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಸಂಖ್ಯೆ: ಜಿ:ಉ:ಕಾ:04/2019–20

ದಿನಾಂಕ: 17.12.2020

<u>ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.</u>

1. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ, ವಿಧಾನ ಸೌಧ ಬೆಂಗಳೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ ಬಿಧಾನ ಸೌಧ ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ.
4. ಆರಕ್ಷಕ ಅಧೀಕ್ಷಕರು, ಮಂಡ್ಯ ಜಿಲ್ಲೆ, ಮಂಡ್ಯ.
5. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಮಂಡ್ಯ.
6. ಉಪವಿಭಾಗಾಧಿಕಾರಿ, ಮಂಡ್ಯ/ಪಾಂಡವಪುರ ಉಪವಿಭಾಗ.
7. ತಹಸೀಲ್ದಾರ್. ಮಂಡ್ಯ, ಮದ್ದೂರು, ಮಳವಳ್ಳಿ, ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ
8. ಹಾಗೂ ಕೆ.ಆರ್.ಪೇಟೆ ತಾಲ್ಲೂಕು.
9. ಉಪನಿರ್ದೇಶಕರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಡ್ಯ ಜಿಲ್ಲೆ, ಮಂಡ್ಯ.
10. ಸಹಕಾರ ಸಂಘಗಳ ಉಪನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ.
11. ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಮಂಡ್ಯ.
12. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ.
13. ಉಪನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಡ್ಯ.
14. ವೈದ್ಯಾಧಿಕಾರಿ, ಜಿಲ್ಲಾ ಆಯುಷ್ ಕೇಂದ್ರ, ಮಂಡ್ಯ.
15. ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ.
16. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.
17. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಂಡ್ಯ.

14. ವೈದ್ಯಾಧಿಕಾರಿ, ಜಿಲ್ಲಾ ಆಯುಷ್ ಕೇಂದ್ರ, ಮಂಡ್ಯ.
15. ಆಯುಕ್ತರು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ.
16. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.
17. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಂಡ್ಯ.
18. ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ.
19. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ.
20. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು & ನೈ. ವಿಭಾಗ,ಮಂಡ್ಯ.
21. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
22. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಮಂಡ್ಯ.
23. ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಮಂಡ್ಯ.
24. ಜಿಲ್ಲಾ ವಾರ್ತಾಧಿಕಾರಿ, ವಾರ್ತಾ ಮತ್ತು ಪ್ರಚಾರ ಇಲಾಖೆ, ಮಂಡ್ಯ.
25. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ.
26. ಉಪನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ,ಮಂಡ್ಯ.
27. ಅಧೀಕ್ಷಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ಮಂಡ್ಯ.
28. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಡ್ಯ.
29. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಂಡ್ಯ.
30. ಕಾರ್ಯಪಾಲಕ ಅಭಿಯಂತರರು, ಕೃಷ್ಣರಾಜಸಾಗರ ಡ್ಯಾಂ.
31. ಕಾರ್ಯಪಾಲಕ ಅಭಿಯಂತರರು, ಹೇಮಾವತಿ ಎಡದಂಡೆ ನಾಲಾ ವಿಭಾಗ, ಪಾಂಡವಪುರ/ ನಾಗಮಂಗಲ ಮತ್ತು ಕೆ.ಆರ್.ಪೇಟೆ.
32. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ.
33. ಕಾರ್ಯಪಾಲಕ ಅಭಿಯಂತರರು, ಗೃಹ ನಿರ್ಮಾಣ ಮಂಡಳಿ, ಮಂಡ್ಯ.
34. ಕಾರ್ಯಪಾಲಕ ಅಭಿಯಂತರರು, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ, ಮಂಡ್ಯ. (ಹೆಚ್ಚುವರಿ)
35. ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಮಂಡ್ಯ.
36. ಅಧೀಕ್ಷಕ ಅಭಿಯಂತರರು, ಚೆಸ್ಕಾಂ, ಮಂಡ್ಯ.
37. ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ, ಮಂಡ್ಯ.
38. ಜಿಲ್ಲಾ ವ್ಯವಸ್ಥಾಪಕರು, ದೇವರಾಜಅರಸು ಅಭಿವೃದ್ಧಿ ನಿಗಮ, ಮಂಡ್ಯ.
39. ಜಿಲ್ಲಾ ವ್ಯವಸ್ಥಾಪಕರು, ಪ.ಜಾ/ಪ.ಪಂ. ಅಭಿವೃದ್ಧಿ ನಿಗಮ, ಮಂಡ್ಯ.
40. ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಂಡ್ಯ.
41. ಜಿಲ್ಲಾ ವ್ಯವಸ್ಥಾಪಕರು, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಮಂಡ್ಯ.
42. ಜಿಲ್ಲಾ ವ್ಯವಸ್ಥಾಪಕರು, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮಂಡ್ಯ.
43. ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಮಂಡ್ಯ.
44. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಮಂಡ್ಯ.
45. ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ.
46. ಉಪನಿರ್ದೇಶಕರು, ಪ್ರವಾಸೋಧ್ಯಮ ಇಲಾಖೆ, ಮಂಡ್ಯ.
47. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ, ಮಂಡ್ಯ.
48. ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ.
49. ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಮಂಡ್ಯ.
50. ನಿರ್ದೇಶಕರು, ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರ, ಮಂಡ್ಯ.
51. ಡೀನ್ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯ.
52. ಸಹ ಸಂಶೋಧನಾ ನಿರ್ದೇಶಕರು, ವಲಯ ಕೃಷಿ ಸಂಶೋಧನಾ ಕೇಂದ್ರ, ವಿ.ಸಿ. ಫಾರಂ, ಮಂಡ್ಯ.
53. ಭೂದಾಖಲೆಗಳ ಉಪನಿರ್ದೇಶಕರು, ಭೂಮಾಪನ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.
54. ರೇಷ್ಮೆ ಕೃಷಿ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಮಂಡ್ಯ.
55. ಕಾರ್ಯಪಾಲಕ ಅಭಿಯಂತರರು, ನಗರ ನೀರು ಸರಬರಾಜು & ಜಲಮಂಡಳಿ ವಿಭಾಗ, ಮಂಡ್ಯ.

56. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ನಿಗಮ, ಮಂಡ್ಯ. (KRDCL).
57. ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಡ್ಯ
58. ಜಿಲ್ಲಾ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಮಂಡ್ಯ.
59. ಕಾರ್ಯನಿರ್ವಾಹಕ ಅಧಿಕಾರಿ, ಚಲುವನಾರಾಯಣಸ್ವಾಮಿ ದೇವಾಲಯ, ಮೇಲುಕೋಟೆ.
60. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ
61. ಜಿಲ್ಲಾ ವಕ್ಫ್ ಅಧಿಕಾರಿ, ವಕ್ಫ್ ಇಲಾಖೆ, ಮಂಡ್ಯ.
62. ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ, ಮಂಡ್ಯ.
63. ಉಪ ಆಯುಕ್ತರು, ಅಬಕಾರಿ ಇಲಾಖೆ, ಮಂಡ್ಯ.
64. ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಡ್ಯ.
65. ಪರಿಸರ ಅಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ.
66. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ.
67. ಜಿಲ್ಲಾ ವ್ಯವಸ್ಥಾಪಕರು,ಕರ್ನಾಟಕ ಆಹಾರ& ನಾಗರಿಕ ಸರಬರಾಜು ನಿಗಮ ನಿ.(ಜಿಲ್ಲಾಧಿಕಾರಿಗಳ ಕಛೇರಿ ಪಕ್ಕ) ಮಂಡ್ಯ,
68. ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಂಡ್ಯ.

## Note on Tumkur District, related to COVID-19 Sample Collection.

- The State Government has instructed to collect and test more samples by fixing a target of 3800 Samples per day for Tumkur district. As per the directions of the Government, a target of 380 Samples per day has been fixed to each Taluks.

- Further, instructions were given to all Taluks to achieve the target with at least 360 RTPCR swabs and 20 RAT(Rapid Antigen Test) swabs at all PHCs level and Mobile Swab Collection Squads have been deployed throughout the district achieve the target effectively.

**The day wise detail of sample taken from 10.12.2020 is as shown below.**

| Sl.No | Date | Total Sample Collected | | Percentage | |
|---|---|---|---|---|---|
| | | RTPCR | RAT | RTPCR | RAT |
| 01. | 10.12.2020 | 2370 | 489 | 65.83 | 244.50 |
| 02. | 11.12.2020 | 2392 | 491 | 66.44 | 245.50 |
| 03. | 12.12.2020 | 2173 | 204 | 60.36 | 102.00 |
| 04. | 13.12.2020 | 1255 | 130 | 34.86 | 65.00 |
| 05. | 14.12.2020 | 2861 | 502 | 79.47 | 251.00 |
| 06. | 15.12.2020 | 2933 | 593 | 81.47 | 296.50 |

Due to the Grama Panchayath Elections RAT tests were done excessively and instructed to meet the RTPCR target consistently. Positivity rate has come down drastically compared to earlier days.

## Note on Tumkur District, related to COVID-19 as on 16.12.2020.

01. **Review status of Surveillance activities in the District - SARI and ILI and their monitoring protocols.**
    a. Total No of SARI Cases : 1717
    b. Total No of ILI Cases : 37416
    c. Total No of Positive Covid-19 Cases : 22704

RAKESH SINGH, I.A.S.
Additional Chief Secretary to Govt.,
Water Resources Department

## 02. Status of Supplies-Medicines, Medical Materials.

The details of Medicines, Medical Materials Available as fallows

a. PPE's - 7672
b. N-95 Mask – 6870
c. Triple Layer Mask – 85750
d. Sanitizers 500 ml – 1108
e. Sanitizers 5000 ml – 30
f. Viral Transport media 1X1 - 10000

## 03. Containment plan for affected areas for the District.

a. As on 06.12.2020 totally 22704 cases are reported.
b. 21906 Patients are discharged.
c. 361 case are Active & 437 deceased.
a. The areas where more than 20 cases are tested positive within 100 meter area boundary is being fixed entire containment zone.
d. Proper arrangements are made to provide daily necessaries those who are in containment zone.

Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

## 04. Availability of Money under SDRF and Health.

Availability of Money Under SDRF – 241.53 Lakhs (Committed) (Additional Grant is required)
Availability of Money Under Health – 0

## 05. Protection of frontline staff

**a.** Health – PPE and N95 masks has been distributed to Frontline Health workers and direction has been given to Health workers regarding use of PPE Equipment.
**b.** Municipalities – Masks given to municipality workers and instructions given to all workers.
**c.** Police – Instructions has been given to police officials to wear mask.

## 06. Periodical updating of Data to State/Monitoring tool.

Nodal Officer has been appointed for updating information to State/Monitoring tool and its being updated regularly.

RAKESH SINGH, I.A.S.
Additional Chief Secretary to Govt.,
Water Resources Department

ದಿನಾಂಕ: 05-12-2020ರಂದು ಮಾನ್ಯ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಡವಳಿ.

---

ಅಧ್ಯಕ್ಷತೆ: ಶ್ರೀ ವಿ.ಪೊನ್ನುರಾಜ್,ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್., ಬೆಂಗಳೂರು ಹಾಗೂ
ಮಾನ್ಯ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು

ಉಪಸ್ಥಿತರು:1. ಡಾ.ರಾಜೇಂದ್ರ ಕೆ.ವಿ.ಭಾ.ಆ.ಸೇ.,
ಜಿಲ್ಲಾಧಿಕಾರಿ, ದ.ಕ. ಮಂಗಳೂರು
2. ಶ್ರೀ ಅಕ್ಷಯ್ ಶ್ರೀಧರ್, ಭಾ.ಆ.ಸೇ.,
ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ, ಮಂಗಳೂರು
3. ಶ್ರೀ ಆನಂದಕುಮಾರ್,
ಉಪಕಾರ್ಯದರ್ಶಿ, ದ.ಕ.ಜಿಲ್ಲಾ ಪಂಚಾಯತ್, ಮಂಗಳೂರು.
4. ಡಾ: ರಾಮಚಂದ್ರ ಬಾಯಾರಿ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಮಂಗಳೂರು
5. ಡಾ. ಸದಾಶಿವ ಶ್ಯಾನುಭೋಗ್,
ಅಧೀಕ್ಷಕರು ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು, ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ದ.ಕ.ಮಂಗಳೂರು.
6. ಸಹಾಯಕ ಆಯುಕ್ತರುಗಳು, ಮಂಗಳೂರು ಮತ್ತು ಪುತ್ತೂರು ಉಪವಿಭಾಗ

ಹಾಗೂ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳು.

******

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಇಂದಿನ ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಹಾಗೂ ಜಿಲ್ಲಾ ಮಟ್ಟದ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನು ಜಿಲ್ಲಾಡಳಿತದ ಪರವಾಗಿ ಸ್ವಾಗತಿಸುತ್ತಾ, ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಗಿ, ಈ ಕೆಳಕಂಡಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## 1.ಕೋವಿಡ್-19ರ ಸೋಂಕಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನೆ:

- ಇದುವರೆಗೆ ದಕ್ಷಿಣ ಕನ್ನಡದಲ್ಲಿ ಕೋವಿಡ್-19ರ ಕಾಯಿಲೆಯಿಂದ 719 ಜನರು ಮರಣ ಹೊಂದಿದ್ದು, ಕಳೆದ 15 ದಿನಗಳಲ್ಲಿ ಮರಣ ಪ್ರಮಾಣ 2.36% ಇದ್ದು, ಕಳೆದ ಒಂದು ವಾರಗಳಲ್ಲಿ ಮರಣ ಪ್ರಮಾಣ 1.76% ಕ್ಕೆ ಇಳಿಕೆಯಾಗಿರುವುದಾಗಿ ತಿಳಿಸಿದಾಗ, ಇನ್ನು ಮರಣ ಪ್ರಮಾಣವನ್ನು ಶೇಕಡಾ 1ಕ್ಕೆ ಇಳಿಕೆ ಮಾಡಲು ಕ್ರಮ ಕೈಗೊಳ್ಳುವಂತೆ ಆರೋಗ್ಯ ಇಲಾಖೆಗೆ ನಿರ್ದೇಶಿಸಿದರು.
- ಕೋವಿಡ್-19ರ ಸೋಂಕಿತರ ಪ್ರಮಾಣ ಇಳಿಕೆ ಆಗಿದ್ದು, ಕಳೆದ ಒಂದು ವಾರದಲ್ಲಿ 1.06% ಇರುವುದಾಗಿ ತಿಳಿಸಲಾಗಿ, ಇದನ್ನು ಗಣನೀಯವಾಗಿ ಇಳಿಸಲು ಆರೋಗ್ಯ ಇಲಾಖಾ ಅಧಿಕಾರಿಗಳು ಗಮನ ಹರಿಸಬೇಕು ಹಾಗೂ ಸೋಂಕಿತರ ಸಂಖ್ಯೆ ಎಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿದೆಯೋ, ಆ ಪ್ರದೇಶವನ್ನು ಗುರುತಿಸಿ ಮೈಕ್ರೋಪ್ಲಾನ್‌ನ್ನು ರಚಿಸಿ ಮುಂದಿನ ದಿನಗಳಲ್ಲಿ ಆ ಪ್ರದೇಶಕ್ಕೆ ಹೆಚ್ಚಿನ ಒತ್ತು ಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಪರೀಕ್ಷೆಗೆ

ಒಳಪಡಿಸಿ ಈಗಿರುವ 1.06%ನ್ನು ಗಣನೀಯವಾಗಿ ಕಡಿಮೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

- ಕೋವಿಡ್–19 ಪರೀಕ್ಷೆಗೆ ಒಳಪಡಿಸಿದವರಲ್ಲಿ RAT ಪರೀಕ್ಷೆಗೆ ಒಳಪಟ್ಟವರು ಹೆಚ್ಚಿನ ಪ್ರಮಾಣದಲ್ಲಿರುವುದಾಗಿ ಸಭೆಯಲ್ಲಿ ವಿವರಿಸಲಾಗಿ, ಮುಂದಿನ ದಿನಗಳಲ್ಲಿ RTPCR/RAT ಪರೀಕ್ಷೆಯನ್ನು 70:30 ಪ್ರಮಾಣದಲ್ಲಿ ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸಲು ಜಿಲ್ಲಾ ಆರೋಗ್ಯಾಧಿಕಾರಿಯವರಿಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

- Home isolation ಗೆ ಒಳಪಟ್ಟವರ ಮೇಲ್ವಿಚಾರಣೆ ನಡೆಸಿದವರ ಅನುಪಾತ 69.8% ಇದ್ದು, ಮುಂದಿನ ದಿನಗಳಲ್ಲಿ 100 ಪ್ರತಿಶತ ಸಾಧಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

- ಮಾಸ್ಕ್ ಕಡ್ಡಾಯವಾಗಿ ಧರಿಸಲು ಮತ್ತು ಸಾಮಾಜಿಕ ಅಂತರವನ್ನು ಕಾಪಾಡಲು ಹಾಗೂ ಸ್ಯಾನಿಟೈಸರ್ ಬಳಕೆ ಬಗ್ಗೆ ಸಾಕಷ್ಟು ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಯನ್ನು ಜಿಲ್ಲಾಯಾದ್ಯಂತ ಹಮ್ಮಿಕೊಳ್ಳಲು ಸೂಚಿಸಿದರು.

- S3 facility app ಚೆನ್ನಾಗಿ update ಆಗಿರುವುದಕ್ಕೆ ಸಭೆಯಲ್ಲಿ ಪ್ರಶಂಸೆ ವ್ಯಕ್ತಪಡಿಸಿದರು.

- Home isolation ಈಗಾಗಲೇ 342 ಜನ ಒಳಪಟ್ಟಿರುವುದನ್ನು ಗಮನಿಸಿ ಇವರ ಬಗ್ಗೆ ವಿಶೇಷ ಕಾಳಜಿ ವಹಿಸಲು ಮೇಲ್ವಿಚಾರಣೆ ತಂಡವನ್ನು ರಚಿಸುವಂತೆಯೂ ಹಾಗೂ Home isolation ನಿಂದ ಮರಣಗಳು ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

- ಸೋಂಕಿತರ ಸಂಖ್ಯೆ ಹಾಗೂ ಗುಣಮುಖರಾದವರ ಸಂಖ್ಯೆ ಪ್ರಮಾಣವನ್ನು ಪರಿಶೀಲಿಸಿದಾಗ, ಗುಣಮುಖ ಹೊಂದಿದವರ ಪ್ರಮಾಣ 98.41% ಗಮನಿಸಿ ಇಲಾಖೆಗೆ ಪ್ರಶಂಸೆಯನ್ನು ವ್ಯಕ್ತ ಪಡಿಸಿದರು.

- ಕೋವಿಡ್–19ರ ಸಂಬಂಧ ಖಾಸಗಿ ಆಸ್ಪತ್ರೆಗಳಲ್ಲಿ ಶೇಕಡಾ 50% ರಷ್ಟು ಹಾಸಿಗೆಯನ್ನು ಮೀಸಲಾಗಿಸಿರುವುದನ್ನು ಗಮನಿಸಿ ಪ್ರಶಂಸೆ ವ್ಯಕ್ತಪಡಿಸಿದರು ಹಾಗೂ AB-ARK ಕಾರ್ಯಕ್ರಮದಡಿಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಗಮನಿಸಲಾಗಿ, ಅಧಿಕ ಪ್ರಮಾಣದಲ್ಲಿ ಬಿಲ್ ಮಾಡಿದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

- ಆಕ್ಸಿಜನ್ ಸರಬರಾಜಿನ ಬಗ್ಗೆ ವಿಚಾರಿಸಲಾಗಿ, ಜಿಲ್ಲೆಯಲ್ಲಿ ಯಾವುದೇ ಸಮಸ್ಯೆ ಇಲ್ಲದಿರುವುದಾಗಿ ಸಂಬಂಧಿಸಿದ ಅಧಿಕಾರಿಯವರು ತಿಳಿಸಿದರು.

- ಜಿಲ್ಲೆಯಲ್ಲಿ ರೋಗಿಗಳಿಗೆ ICU, Ventilator, HFNC ಹಾಸಿಗೆಗಳ ಕೊರತೆ ಇಲ್ಲದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಯಾವುದೇ ಸಮಸ್ಯೆಗಳಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.ಈ ಕುರಿತು ಪ್ರತಿಯೊಂದು ವೈದ್ಯಕೀಯ ಕಾಲೇಜುಗಳು ಹಾಗೂ ಕೋವಿಡ್ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಗಳಲ್ಲಿ ಜಿಲಾ ್ಲಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಕ

ಮಾಡಲಾಗಿರುವುದಾಗಿ ಹಾಗೂ ನಿಯಮಿತವಾಗಿ ಮಾಹಿತಿಗಳನ್ನು ಜಿಲ್ಲಾ ವೆಬ್‌ಸೈಟ್ 453 facility app ನಲ್ಲಿ ನಮೂದು ಮಾಡುತ್ತಿರುವುದಾಗಿ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಯಿತು.

- ಜಿಲ್ಲೆಯಲ್ಲಿ ಮಾಸ್ಕ್ ಧರಿಸದೇ ಕೋವಿಡ್-19ರ ನಿಯಮಾವಳಿಗಳನ್ನು ಉಲ್ಲಂಘಿಸಿದವರಿಗೆ ದಂಡವನ್ನು ವಿಧಿಸಲಾಗಿದ್ದು, ಜಿಲ್ಲೆಯಲ್ಲಿ ಈವರೆಗೆ ಒಟ್ಟು 15258 ಪ್ರಕರಣಗಳು ದಾಖಲಾಗಿದ್ದು, ರೂ.16,35,172/- ದಂಡವನ್ನು ಸರಕಾರಕ್ಕೆ ಜಮೆ ಮಾಡಿರುವುದಾಗಿ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಯಿತು.

## 2. ಪ್ರಾಕೃತಿಕ ವಿಕೋಪದಡಿ ನೆರೆ ಪರಿಹಾರ ಕಾರ್ಯಗಳ ಪರಿಶೀಲನೆ:

- **ಕೃಷಿ ಮತ್ತು ತೋಟಗಾರಿಕೆ ಇಲಾಖೆ:** ಪ್ರಕೃತಿ ವಿಕೋಪದಿಂದಾಗಿ **ಕೃಷಿಗೆ ಸಂಬಂಧಿಸಿದಂತೆ ಒಟ್ಟಾರೆ ಸುಮಾರು 305.927 ಹೆಕ್ಟೇರ್ ಬೆಳೆ ನಾಶವಾಗಿದ್ದು, ತೋಟಗಾರಿಕೆ ಇಲಾಖೆಗೆ ಸುಮಾರು 54.75 ಹೆಕ್ಟೇರ್ ಬೆಳೆನಾಶವಾಗಿದ್ದು**, ಪರಿಹಾರ ತಂತ್ರಾಂಶದಲ್ಲಿ ನಮೂದಿಸುವ ಕಾರ್ಯ ಮುಕ್ತಾಗೊಂಡಿದ್ದು, ಜಿಲ್ಲಾಧಿಕಾರಿಗಳಿಂದ ಅನುಮೋದನೆ ನೀಡುವ ಹಂತದಲ್ಲಿರುತ್ತದೆ. ಅನುಮೋದನೆ ದೊರಕಿದ ನಂತರ ಸರ್ಕಾರದಿಂದ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪರಿಹಾರಧನ ಪಾವತಿಯಾಗುತ್ತದೆ ಎಂದು ಉಪನಿರ್ದೇಶಕರು ಸಭೆಯಲ್ಲಿ ವಿವರಿಸಿದರು.
- **ಮಂಗಳೂರು ಮಹಾನಗರ ಪಾಲಿಕೆ:** ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಪತ್ತು ನಿರ್ವಹಣೆ ಕಾರ್ಯದಲ್ಲಿ ಮುಂಜಾಗ್ರತೆಗಾಗಿ 24*7 ಕಂಟ್ರೋಲ್ ರೂಂ ವ್ಯವಸ್ಥೆಯಿದ್ದು, ಮಂಗಳೂರು ಹಾಗೂ ಸುರತ್ಕಲ್ ನಲ್ಲಿ ತುರ್ತು ಕಾರ್ಯಪಡೆಗಳು ಸನ್ನದ್ಧ ಸ್ಥಿತಿಯಲ್ಲಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಆಗಸ್ಟ್ ಮತ್ತು ಸಪ್ಟೆಂಬರ್ ಮಾಹೆಯ ಮಳೆಯಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆಹಾನಿಯಿಂದಾಗಿ ಉಂಟಾಗಿರುವ ನಷ್ಟದ ಬಗ್ಗೆ ಚರ್ಚಿಸಲಾಯಿತು. ಪ್ರಕೃತಿಕ ವಿಕೋಪದ ಹಾನಿಯಿಂದಾಗಿರುವ ನಷ್ಟವನ್ನು ಸಭೆಯಲ್ಲಿ ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತಿಳಿಸಿದರು.
- **ಮೆಸ್ಕಾಂ:** ಮೆಸ್ಕಾಂ ವ್ಯಾಪ್ತಿಯಲ್ಲಿ ಪ್ರಾಕೃತಿಕ ವಿಕೋಪದಿಂದಾಗಿ ಸುಮಾರು 1088.46 ಲಕ್ಷಗಳ ಹಾನಿಯುಂಟಾಗಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ವಿದ್ಯುತ್ ಕಂಬಗಳು ಮತ್ತು ಟ್ರಾನ್ಸ್ ಪಾರ್ಮರ್ ಗಳು ಹಾನಿಯಾಗಿದ್ದಲ್ಲಿ ತಕ್ಷಣ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಮೆಸ್ಕಾಂ ಅಧಿಕಾರಿಗಳು ತಿಳಿಸಿದರು.
- **ಬಂದರು / ಮೀನುಗಾರಿಕೆ:** ಕಡಲು ಕೊರೆತ ಹಾಗೂ ಸಮುದ್ರ ಕೊರೆತದ ಬಗ್ಗೆ ಮಂಜಾಗ್ರತಾ ಕ್ರಮಗಳನ್ನು ಅನುಸರಿಸಲಾಗಿದ್ದು, ಸಮುದ್ರ ತೀರದ ಜನವಸತಿ ಪ್ರದೇಶಗಳಲ್ಲಿ ಸಮರ್ಪಕ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಹಾಗೂ ಸಂಭವನೀಯ ಪ್ರದೇಶಗಳನ್ನು ಗುರುತಿಸಿ ಪ್ರತಿ ಬಂಧಕ ತಡೆಗೋಡೆ ನಿರ್ಮಿಸುವ ಸಲುವಾಗಿ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಬಾರತೀಯ ಹವಾಮಾನ ಕೇಂದ್ರ ನೀಡುವ ಹವಾಮಾನ ಮುನ್ಸೂಚನೆಯನ್ನು

ಆಧರಿಸಿ ಪ್ರತಿಕೂಲ ಹವಾಮಾನವಿದ್ದಲ್ಲಿ ಮೀನುಗಾರರಿಗೆ ಮೀನುಗಾರಿಕೆ ಹೋಗದಂತೆ ನೀಡುವ ವ್ಯವಸ್ಥೆ ಮಾಡಿರುವ ಬಗ್ಗೆ ಮೀನುಗಾರಿಕಾ ಉಪ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

- **ಲೋಕೋಪಯೋಗಿ ಇಲಾಖೆ:** ಪ್ರಾಕೃತಿಕ ವಿಕೋಪದಿಂದಾಗಿ ರಸ್ತೆಗಳು ಸೇತುವೆಗಳು ಹಾಗೂ ಇತರ ಸಾರ್ವಜನಿಕ ಹಾನಿಗಳಿಗೆ ಸಂಬಂಧಿಸಿದಂತೆ ಸುಮಾರು 7000 ಲಕ್ಷಗಳಷ್ಟು ನಷ್ಟ ಉಂಟಾಗಿರುವ ಬಗ್ಗೆ ಲೋಕೋಪಯೋಗಿ ಇಲಾಖಾ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದ್ದು, ಅನುದಾನ ಕೋರಿ ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವಾಗಿ ಸಭೆಯಲ್ಲಿ ಲೋಕೋಪಯೋಗಿ ಇಲಾಖಾ ಅಧಿಕಾರಿಗಳು ಉತ್ತರಿಸಿದರು.

- **ಜಿಲ್ಲಾ ಪಂಚಾಯತ್ :**ಪ್ರಸಕ್ತ ಸಾಲಿನ ಮಳೆಹಾನಿಯಿಂದಾಗಿ ರಸ್ತೆಗಳು, ಸೇತುವೆಗಳು , ಅಂಗನವಾಡಿಗಳು, ಹಾಗೂ ಮೂಲಭೂತ ಸೌಕರ್ಯಗಳ ಹಾನಿಯುಂಟಾದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯುತು. ಸುಮಾರು 5184.00 ಲಕ್ಷಗಳಷ್ಟು ಹಾನಿಯುಂಟಾಗಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿತು. ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿರುವ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು.

- **ಜಿಲ್ಲಾ ನಗರಾಭಿವೃದ್ಧಿ ಕೋಶ:** ಜಿಲ್ಲೆಯ ನಗರಾಭಿವೃದ್ಧಿ ಕೋಶದ ವ್ಯಾಪ್ತಿಯಲ್ಲಿ ಮಳೆಹಾನಿಯಿಂದಾಗಿ ಸುಮಾರು 14.50 ಕೋಟಿಗಳಷ್ಟು ನಷ್ಟವಾಗಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ವಿವರವಾದ ನಷ್ಟದ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ಸಭೆಯ ಗಮನಕ್ಕೆ ತಂದರು..

- **ಮನೆಗಳ ಪುನರ ನಿರ್ಮಾಣ/ದುರಸ್ಥಿ:** ಮಳೆಯಿಂದ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣ/ ದುರಸ್ಥಿ ಕಾರ್ಯಕ್ಕೆ ಸಂಬಂಧಿಸಿದಂತೆ ಹಾನಿಯಾದ ಮನೆಗಳ ವಿವರವಾದ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 30.11.2020 ರೊಳಗೆ ಜಿಲ್ಲೆಯ ತಹಶೀಲ್ದಾರರುಗಳ ಲಾಗಿನ್ ನಲ್ಲಿ ನಮುದಿಸುವ ಕಾರ್ಯ ಮುಗಿದಿದ್ದು, ಜಿಲ್ಲಾದಿಕಾರಿಯವರ ಲಾಗಿನ್ ನಿಂದ ಅನುಮೋದನೆ ನೀಡಿ ರಾಜೀವ್ ಗಾಂದಿ ವಸತಿ ನಿಗಮಕ್ಕೆ ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಬಿಡುಗಡೆಯಾದ ಮನೆಗಳ ಪುನರ್ ನಿರ್ಮಾಣ/ ದುರಸ್ಥಿ ಕಾರ್ಯಕ್ಕೆ ಸಂಬಂಧಿಸಿದ ಸರ್ಕಾರದಿಂದ 471.77 ಲಕ್ಷಗಳ ಅನದಾನ ಬಿಡುಗಡೆಯಾಗಿದ್ದು, ಸರ್ಕಾರದ ಆದೇಶದಂತೆ ಸದ್ರಿ ಮೊತ್ತದಲ್ಲಿ ರೂ. 188.81 ಲಕ್ಷವನ್ನು ರಾಜೀವ್ ಗಾಂದಿ ವಸತಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಇವರ ಉಳಿತಾಯ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು.

- **ಕಂದಾಯ ಇಲಾಖೆ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2020-21 ನೇ ಸಾಲಿನಲ್ಲಿ ಸರ್ಕಾರಿ / ಸಾರ್ವಜನಿಕ ಉದ್ದೇಶಗಳಿಗೆ ಒಟ್ಟು 180.15 ಎಕರೆ ಜಮೀನು ಮೀಸಲಿಡಲಾಗಿದೆ. ಇದರಲ್ಲಿ ಸರ್ಕಾರಿ ಕಛೇರಿ ಕಟ್ಟಡಕ್ಕಾಗಿ 87.25 ಎಕರೆ, ಮನೆನಿವೇಶನಕ್ಕಾಗಿ 31.38 ಎಕರೆ, ಶಾಲೆಗಳಿಗಳಿಗಾಗಿ 18 ಎಕರೆ, ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ 18 ಎಕರೆ, ಸ್ಮಶಾನಕ್ಕಾಗಿ 16.15 ಎಕರೆ, ಅಂಗನವಾಡಿ ಕೇಂದ್ರಗಳಿಗಾಗಿ 2.92 ಎಕರೆ, ಗ್ರಾಮ ಪಂಚಾಯತ್ ಕಟ್ಟಡ ಗಳಿಗಾಗಿ 2.65, ಡಾ. ಬಿ.ಆರ್ ಅಂಬೇಡ್ಕರ್ ಭವನಕ್ಕಾಗಿ

3.36 ಹಾಗೂ 0.44 ಎಕರೆ ಜಮೀನನ್ನು ಆರೋಗ್ಯ ಉಪಕೇಂದ್ರಕ್ಕಾಗಿ ಮೀಸಲಿಡಲಾಗಿದೆ ಎಂದು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರಲಾಯಿತು.

- **ಸಾಮಾಜಿಕ ಭದ್ರತಾ ಯೋಜನೆ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಸಿಕ ವೇತನ ಯೋಜನೆಯಡಿ ಯೋಜನೆಯ ಪ್ರಾರಂಭದಿಂದ ಅಕ್ಟೋಬರ್ 2020 ರ ಅಂತ್ಯಕ್ಕೆ 13959 ವೃದ್ಧಾಪ್ಯ ವೇತನದಾರರು, 46383 ವಿಧವಾ ವೇತನದಾರರು, 17782 ಅಂಗವಿಕಲ ವೇತನದಾರರು 59712 ಸಂಧ್ಯಾ ಸುರಕ್ಷಾ ವೇತನದಾರರು, 5798 ಮನಸ್ವಿನಿ ವೇತನದಾರರು, 23 ಮೈತ್ರಿ ವೇತನದಾರರು, 23 ರೈತ ಆತ್ಮಹತ್ಯೆ ವಿಧವಾ ವೇತನದಾರರ ಫಲಾನುಭವಿಗಳು ಸಾಮಾಜಿಕ ಭದ್ರತಾ ಯೋಜನೆಯಡಿ ಮಾಸಿಕ ವೇತನ ಪಡೆಯುತ್ತಿದ್ದಾರೆ. ಒಂದು ಬಾರಿ ಪರಿಹಾರ ಧನ ಯೋಜನೆಯಡಿ 20866 ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಫಲಾನುಭವಿಗಳು ಹಾಗೂ 41501 ಅಂತ್ಯ ಸಂಸ್ಕಾರ ಯೋಜನೆಯ ಫಲಾನುಭವಿಗಳು ಪರಿಹಾರ ಧನವನ್ನು ಪಡೆದಿರುವುದಾಗಿ ಸಭೆಯಲ್ಲಿ ತಿಳಿಸಲಾಗಿ, ವಿವಿಧ ಪಿಂಚಣಿ ವೇತನಗಳಿಗೆ ಸಂಬಂಧಿಸಿದಂತೆ, ಬಾಕಿ ಇರುವ ಪ್ರಕರಣಗಳಲ್ಲಿ ಕೂಡಲೇ ಕ್ರಮ ವಹಿಸುವಂತೆ ಸೂಚಿಸಲಾಯಿತು.

- **ಸಕಾಲ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರೆಗೆ 88063 ಸಕಾಲ ಸ್ವೀಕೃತವಾಗಿದ್ದು, 88607 ಅರ್ಜಿಗಳು ವಿಲೇವಾರಿಯಾಗಿದ್ದು, 204 ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದು, ದಕ್ಷಿಣ ಕನ್ನಡ ಜಿಲ್ಲೆಯು ಆರನೇ ಸ್ಥಾನದಲ್ಲಿದೆಯೆಂದು ಸಭೆಯಲ್ಲಿ ತಿಳಿಸಲಾಗಿ, ಸಕಾಲ ಅರ್ಜಿಗಳನ್ನು ನಿಗದಿತ ಕಾಲಮಿತಿಯೊಳಗೆ ವಿಲೇಗೊಳಿಸಲು ಕ್ರಮ ವಹಿಸುವಂತೆ ಎಲ್ಲಾ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು.

ಪ್ರಾಕೃತಿಕ ವಿಕೋಪದಂತಹ ಸಂದರ್ಭಗಳಲ್ಲಿ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಲು ಹಾಗೂ ಜಿಲ್ಲೆಯಲ್ಲಿ ಪ್ರಾಕೃತಿಕ ವಿಕೋಪದಿಂದ ಉಂಟಾಗಿರುವ ಹಾನಿಯ ಸಮಗ್ರ ವಿವರಗಳನ್ನು ಜಿಲ್ಲಾಧಿಕಾರಿಯವರ ಮೂಲಕ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು.

ಕೊನೆಯದಾಗಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ವಿ.ಪೊನ್ನುರಾಜ್)
ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

-ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

ಡಾ. ಎಂ.ಟಿ ರೇಜು ಭಾ.ಆ.ಸೇ , ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: **05.12.2020** ರಂದು ಜರುಗಿದ ಉಡುಪಿ ಕೋವಿಡ್ **19** ನ ಇತ್ತೀಚಿನ ವಸ್ತುಸ್ಥಿತಿಯ ಬಗ್ಗೆ ಹಾಗೂ ಉಡುಪಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:

ಸಮಯ: ಪೂರ್ವಾಹ್ನ **10.30** ಗಂಟೆ ಸ್ಥಳ: ಡಾ. ವಿ.ಎಸ್ ಆಚಾರ್ಯ ಸಭಾಂಗಣ

ಉಪಸ್ಥಿತರು:

1) ಡಾ. ಎಂ.ಟಿ ರೇಜು ಭಾ.ಆ.ಸೇ , ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ ಅಭಿಯಾನ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀ ನವೀನ್ ಭಟ್, ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ವಿಷ್ಣುವರ್ಧನ್, ಭಾ.ಪೋ.ಸೆ, ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ ಹಾಗೂ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಕೋವಿಡ್ -19 ನಿಯಂತ್ರಣದಲ್ಲಿ ಈವರಗೆ ಜಿಲ್ಲಾಡಳಿತ ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ಸ್ಥಿತಿಗತಿಗಳ ಬಗ್ಗೆ ಮಾಹಿತಿ ನೀಡುವಂತೆ ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರಿಗೆ ಸೂಚಿಸಲಾಯಿತು. ಕೋವಿಡ್ -19 ನೋಡಲ್ ಅಧಿಕಾರಿಯವರು ಕೋವಿಡ್ -19 ವೈರಸ್ ನಿಯಂತ್ರಣದ ಬಗ್ಗೆ ಮಾರ್ಚ್ 2020 ರಿಂದ ಈವರೆಗೆ ಕೈಗೊಂಡ ಕ್ರಮಗಳ ಮತ್ತು ಈಗಿನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳೊಂದಿಗೆ , ಕ್ವಾರೈಂಟೈನ್ ಮಾಡಿದ ಬಗ್ಗೆ ವಿವರ , SARI Cases , Swab test , Death Rate, Recovery Rate ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿದರು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳನ್ನು ಶ್ಲಾಘಿಸಲಾಯಿತು.
- ಮುಂದುವರಿದು ಈಗಾಗಲೇ ಕೊವಿಡ್ 19 ಪ್ರಕರಣಗಳು ಕಡಿಮೆಯಾಗಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ನೀಡಲು ಹಾಗೂ ತೀವ್ರ ಪ್ರಕರಣಗಳನ್ನು ಮಾತ್ರ ಖಾಸಗಿ ಆಸ್ಪತ್ರೆಗಳಿಗೆ ABARK ಅಡಿ ಉಲ್ಲೇಖಿಸಲು ಕರ್ನಾಟಕ ಸರಕಾರದಿಂದ ಸೂಚನೆ ಇರುವ ಹಿನ್ನಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಕೊವಿಡ್ 19 ಪ್ರಕರಣಗಳನ್ನು ಉಲ್ಲೇಖ ಮಾಡಲು ಅಡಚಣೆ ಇರುತ್ತದೆ. ಆದರೆ ರಾಜ್ಯದಲ್ಲಿ ಕೇವಲ ಉಡುಪಿ ಜಿಲ್ಲೆಯಲ್ಲಿ ಮಾತ್ರ DCH ಆಗಿ ಟಿ.ಎಂ.ಎ ಪೈ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, ABARK ಅಡಿಯಲ್ಲಿ ತೀವ್ರ ಪ್ರಕರಣಗಳನ್ನು refer ಮಾಡಲು ಅನಾನುಕೂಲವಾಗಿದ್ದು, ಇದೊಂದು ಆಸ್ಪತ್ರೆಗೆ ಈ ನಿಯಮದಿಂದ

ವಿನಾಯಿತಿ ದೊರೆತಲ್ಲಿ ಅನುಕೂಲವಾಗುವುದನ್ನು ಚರ್ಚಿಸಲಾಯಿತು. ಈ ವಿಷಯವನ್ನು ಸರಕಾರದ ಗಮನಕ್ಕೆ ತರುವ ಬಗ್ಗೆ ವಿವರವಾದ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಯಿತು.

(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)

- ಈಗಾಗಲೇ ಕೋವಿಡ್ 19 ರಡಿಯಲ್ಲಿ ಸರ್ವೆಲೆನ್ಸ್ ಗೋಸ್ಕರ ಹಲವು ತಾತ್ಕಾಲಿಕ ಹುದ್ದೆಗಳನ್ನು ತೆಗೆದುಕೊಂಡಿದ್ದು, ಕೇವಲ 6 ತಿಂಗಳ ಅವಧಿಗೆ ಮಾತ್ರ ಬಳಸುವಂತೆ ಸರಕಾರದ ಸೂಚನೆ ಇರುತ್ತದೆ. ಈ 6 ತಿಂಗಳು ಡಿಸೆಂಬರ್‌ನಲ್ಲಿ ಕೊನೆಗೊಳ್ಳಲಿದ್ದು, ದೇಶದ ಹಲವೆಡೆ 2 ನೇ ಹಾಗೂ 3 ನೇ ಹಂತ ಬಂದಿರುವ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿಯೂ, ಕೋವಿಡ್ ಸರ್ವೆಲೆನ್ಸ್ ತೀವ್ರಗೊಳಿಸುವ ಅಗತ್ಯ ಇರುವುದರಿಂದ ಮುಂದಿ 6 ತಿಂಗಳು ಸದ್ರಿ ತಾತ್ಕಾಲಿಕ ಹುದ್ದೆಗಳ ಸೇವೆಯನ್ನು ಮುಂದುವರಿಸಲು ಸರ್ಕಾರದಿಂದ ಅನುವು ಮಾಡಿಕೊಡುವಂತೆ ಚರ್ಚಿಸಲಾಯಿತು. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

  (ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)

- ಜಿಲ್ಲೆಯಲ್ಲಿ ಮಾಸ್ಕ್ ಹಾಗೂ ಗ್ಲೌಸ್‌ಗಳ ಸಾಕಷ್ಟು ಲಭ್ಯತೆ ಇಲ್ಲದಿರುವ ಬಗ್ಗೆ ಚರ್ಚಿಸಲಾಗಿ ಈ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

  (ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)

<u>ಇತರೆ ವಿಷಯಗಳು :</u>

- <u>ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶದಲ್ಲಿನ ಮರಳು ದಿಬ್ಬ ತೆರವುಗೊಳಿಸುವ ಪ್ರಕ್ರಿಯೆಯ ಪ್ರಗತಿ ಕುರಿತು:</u>

  ಕರಾವಳಿ ನಿಯಂತ್ರಣ ವಲಯ ಪ್ರದೇಶದಲ್ಲಿನ ಮರಳು ದಿಬ್ಬ ತೆರವುಗೊಳಿಸುವ ಬಗ್ಗೆ ಚರ್ಚಿಸಲಾಗಿ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ಬೆಂಗಳೂರು (KSCZMA) ರವರ ಪತ್ರ ಸಂಖ್ಯೆ: ಅಪಜೀ ಸಿಆರ್‌ಝಡ್ 2020, ದಿನಾಂಕ: 11.03.2020 ರಂತೆ 2020-21 ನೇ ಸಾಲಿನಲ್ಲಿ ಕರಾವಳಿ ನಿಯಂತ್ರಣ ವಲಯದ ನದಿ ಪಾತ್ರಗಳಲ್ಲಿ ನಿಗಧಿಪಡಿಸಲಾಗಿರುನ 7,13,090 ಮೆ.ಟನ್ ಮರಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಜಿಲ್ಲಾ 07 ಸದಸ್ಯರ ಸಮಿತಿ (CRZ) ಸಭೆಯಲ್ಲಿ ತೀರ್ಮಾನಿಸಿರುವಂತೆ ದಿನಾಂಕ: 05.12.2020 ರ ವರೆಗೆ ಸಾಂಪ್ರದಾಯಿಕವಾಗಿ ಮರಳು ದಿಬ್ಬ ತೆರವುಗೊಳಿಸುವ 168 ಪರವಾನಿಗೆದಾರರಿಗೆ ಮರಳು ದಿಬ್ಬ ತೆರವುಗೊಳಿಸಲು ಅನುಮತಿ ನೀಡಲಾಗಿದ್ದು, ದಿನಾಂಕ: 30.11.2020 ರ ವರೆಗೆ 3,14,052 ಮೆ.ಟನ್ ಮರಳನ್ನು ಸಾರ್ವಜನಿಕರಿಗೆ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಸ್ಯಾಂಡ್ ಆ್ಯಪ್ ಮೂಲಕ ಪೂರೈಕೆ ಮಾಡಲಾಗಿರುತ್ತದೆ ಎಂಬ ಮಾಹಿತಿಯನ್ನು ಮಾನ್ಯ ಜಿಲ್ಲಾಧಿಕಾರಿಯವರು ಸಭೆಯ ಗಮನಕ್ಕೆ ತಂದರು.

- <u>ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non CRZ) ಪ್ರದೇಶದಲ್ಲಿ ಮರಳುಗಾರಿಕೆ ಬಗ್ಗೆ:</u>

  ಜಿಲ್ಲಾ ವ್ಯಾಪ್ತಿಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ ((Non CRZ) ಪ್ರದೇಶದಲ್ಲಿ ಗುರುತಿಸಲಾಗಿರುವ 19 ಮರಳು ಬ್ಲಾಕ್‌ಗಳನ್ನು ಅಧಿಸೂಚನೆ ಹೊರಡಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ

ಪ್ರಕಟಿಸಲಾಗಿದ್ದು, ಸದರಿ ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಲು ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ರವರಿಗೆ ದಿನಾಂಕ: 04.12.2020 ರಂದು ಕಾರ್ಯಾದೇಶ ನೀಡಲಾಗಿರುತ್ತದೆ ಆದರೆ ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್ ರವರ ಪತ್ರ ದಿನಾಂಕ: 01.12.2020 ರಂತೆ ಕನಿಷ್ಠ ಪ್ರಮಾಣದ ಮರಳು ಬ್ಲಾಕ್‌ಗಳಿಗೆ ಟೆಂಡರ್ ಮೂಲಕ ಮರಳು ಉತ್ಪಾದನೆ ಮತ್ತು ವಿಲೇವಾರಿ ಮಾಡುವ ವೆಚ್ಚ ಹೆಚ್ಚಾಗಿರುವುದರಿಂದ ಮರು ಪರಿಶೀಲಿಸಿ ಅಗತ್ಯವಿದ್ದಲ್ಲಿ ಸಾಧ್ಯವಿರುವ ಬ್ಲಾಕ್‌ಗಳಿಗೆ Amalgamation ನಕ್ಷೆಯೊಂದಿಗೆ ಕನಿಷ್ಠ 5.00 ಎಕರೆ ವಿಸ್ತೀರ್ಣಕ್ಕಿಂತ ಕಡಿಮೆಯಿಲ್ಲದಂತೆ ಅಥವಾ ಕನಿಷ್ಠ 30000 ಮೆ.ಟನ್ ಮರಳು ಲಭ್ಯವಿರುವ ಪ್ರದೇಶವನ್ನು ಗುರುತಿಸಿ ಮರು ನಕ್ಷೆ ತಯಾರಿಸಿ ಅಧಿಸೂಚನೆ ಹೊರಡಿಸಲು ಕೋರಿರುತ್ತಾರೆ. ಆದುದರಿಂದ ಸದರಿ ಮರಳು ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಲು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ ಸರ್ಕಾರಿ ಕಾಮಗಾರಿಗಳಿಗೆ/ ಖಾಸಗಿ ವ್ಯಕ್ತಿಗಳಿಗೆ ನೀಡಲು ಕ್ರಮ ಕೈಗೊಳ್ಳುವಂತೆ ಮಾನ್ಯ ಜಿಲ್ಲಾಧಿಕಾರಿಯವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಲ್ಲಿ ಕೋರಿದರು. ಈ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

(ಕ್ರಮ : ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಡುಪಿ )

- <u>ಪರಿಸರ ಅತೀ ಸೂಕ್ಷ್ಮ ವಲಯ ಕುಂದಾಪುರ ವ್ಯಾಪ್ತಿಯಲ್ಲಿ ಮರಳು ದಿಬ್ಬ ತೆರವುಗೊಳಿಸಲು ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಕ್ಕೆ (DCZMA) ಶಿಫಾರಸ್ಸು ಮಾಡುವ ಕುರಿತು</u>

ಪರಿಸರ ಅತೀ ಸೂಕ್ಷ್ಮ ವಲಯ ಕುಂದಾಪುರ ವ್ಯಾಪ್ತಿಯಲ್ಲಿನ ಸೌಪರ್ಣಿಕ, ವಾರಾಹಿ ಮತ್ತು ಎಡಮಾವಿನಹೊಳೆ ನದಿಗಳಲ್ಲಿ ಒಟ್ಟು 15 ಮರಳು ದಿಬ್ಬಗಳನ್ನು ಗುರುತಿಸಲಾಗಿದ್ದು, ಎನ್.ಐ.ಟಿ.ಕೆ ಸುರತ್ಕಲ್ ರವರು ತಾಂತ್ರಿಕ ವರದಿಯನ್ನು ನೀಡಿದ್ದು, ದಿನಾಂಕ: 26.11.2020 ರಂದು ನಡೆದ ಜಿಲ್ಲಾ 07 ಸದಸ್ಯರ ಸಮಿತಿ (CRZ) ಸಭೆಯಲ್ಲಿ ಅನುಮೋದಿಸಲಾಗಿದ್ದು, ಜಿಲ್ಲಾ ಕರಾವಳಿ ನಿರ್ವಹಣಾ ಸಮಿತಿ (DCZMA) ಗೆ ಕಳುಹಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಮೂಲಕ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ ರವರಿಗೆ ಅನುಮತಿ ಕೋರಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ಸದರಿ ಮರಳು ದಿಬ್ಬಗಳನ್ನು ತೆರವುಗೊಳಿಸಲು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದಿಂದ ಶೀಘ್ರದಲ್ಲಿ ಅನುಮತಿ ದೊರಕಿಸಲು ಮಾನ್ಯ ಜಿಲ್ಲಾಧಿಕಾರಿಯವರು ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಲ್ಲಿ ಕೋರಿದರು.

## ತೋಟಗಾರಿಕಾ ಇಲಾಖೆ:

ತೋಟಗಾರಿಕಾ ಇಲಾಖೆಗೆ ನಿಗಧಿಪಡಿಸಿದ ಭೌತಿಕ ಹಾಗೂ ಆರ್ಥಿಕ ಗುರಿಗಳ ಎಂಪಿಕ್ ಪ್ರಕಾರ ಪ್ರಗತಿ ಸಾಧಿಸುತ್ತಿರುವುದಾಗಿ ಹಾಗೂ 2019-20 ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸಹಾಯಧನ ಪಾವತಿಸಲು ಬಾಕಿ ಇರುವ ಅರ್ಜಿಗಳಿಗೆ ಪ್ರಸಕ್ತ ಅನುದಾನ ಬಿಡುಗಡೆಯಾಗಿದ್ದು, ಅರ್ಜಿಗಳನ್ನು ಇತ್ಯರ್ಥಗೊಳಿಸುತ್ತಿರುವುದಾಗಿ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕರು ತಿಳಿಸಿದರು. 2020 ನೇ ಅಕ್ಟೋಬರ್ ಮಾಹೆಯಲ್ಲಿ ಸುರಿದ ಅಧಿಕ ಮಳೆಯಿಂದಾಗಿ 6.68 ಹೆಕ್ಟೇರ್ ಪ್ರದೇಶದಲ್ಲಿ ಮಟ್ಟುಗಳ್ಳ ಬೆಳೆ

ಹಾನಿಯಾಗಿದ್ದು, ಸದರಿ ಬೆಳಗಳನ್ನು ಬೆಳೆಯುವ ರೈತರು 5 ರಿಂದ 10 ಸೆಂಟ್ಸ್ ಜಾಗದಲ್ಲಿ ಬೆಳೆ ಬೆಳೆಯುತ್ತಿದ್ದು, SDRF/NDRF ಮಾರ್ಗಸೂಚಿ ಪ್ರಕಾರ ಸೆಂಟ್ಸ್ ಗೆ ರೂ. 26 ಪರಿಹಾರ ನೀಡಲಾಗುತ್ತಿದ್ದು, ವಿಶೇಷ ಪ್ರಕರಣ ಎಂದು ಪರಿಗಣಿಸಿ ಹೆಕ್ಟೇರಿಗೆ ರೂ. 50,000 ದಂತೆ ಒಟ್ಟು ರೂ. 3.34 ಲಕ್ಷ ಪರಿಹಾರ ಪಾವತಿಸಲು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕಂದಾಯ ಇಲಾಖೆಯಿಂದ ಅನುಮೋದನೆ ಬಂದಿರುವುದಿಲ್ಲವೆಂದು ತಿಳಿಸಿದರು. ಈ ಬಗ್ಗೆ ಕಂದಾಯ ಇಲಾಖೆಗೆ ಸಲ್ಲಿಸಿದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:

**ಉದ್ಯೋಗಿನಿ ಯೋಜನೆ:-**

2020-21ನೇ ಸಾಲಿನಲ್ಲಿ ಜಿಲ್ಲೆಗೆ ಒಟ್ಟು 29 ಭೌತಿಕ ಗುರಿ ನಿಗದಿಪಡಿಸಲಾಗಿದೆ. ಸದರಿ ಯೋಜನೆಯಡಿ ಮಾನ್ಯ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಮಹಿಳಾ ಫಲಾನುಭವಿಗಳ ಅರ್ಜಿಗಳನ್ನು ಆಯ್ಕೆ ಮಾಡಿ ಬ್ಯಾಂಕ್‌ನಿಂದ ಸಾಲ ಮಂಜೂರಾದ ಪ.ಜಾ/ಪ.ಪಂ ಫಲಾನುಭವಿಗಳಿಗೆ ಸಾಲದ ಶೇಕಡಾ 50 ಗರಿಷ್ಠ ರೂ.1.50 ಲಕ್ಷ ಹಾಗೂ ಇತರೆ ಫಲಾನುಭವಿಗಳಿಗೆ ಶೇಕಡಾ 30, ಗರಿಷ್ಠ ರೂ.90000/- ಸಹಾಯಧನ ನೀಡಲಾಗುತ್ತಿದೆ ಎಂದು ಸಭೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯವರು ಸಭೆಗೆ ತಿಳಿಸಿದರು. ಪ್ರಸ್ತುತ 3 ವಿಧಾನ ಸಭಾ ಕ್ಷೇತ್ರದಲ್ಲಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅರ್ಜಿಗಳನ್ನು ಈಗಾಗಲೇ ಬ್ಯಾಂಕುಗಳಿಗೆ ಸಾಲ ಮಂಜೂರಾತಿಗೆ ಕಳುಹಿಸಲಾಗಿದೆ. ಆಯ್ಕೆ ಪ್ರಕ್ರಿಯೆಗೆ ಬಾಕಿಯಿರುವ ಕುಂದಾಪುರ ಹಾಗೂ ಬೈಂದೂರು ಕ್ಷೇತ್ರಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡಲು ತಿಳಿಸಲಾಯಿತು. ಸಾಲ ಸೌಲಭ್ಯ ಪಡೆದ ಫಲಾನುಭವಿಗಳ ಘಟಕಗಳಿಗೆ ಮಹಿಳಾ ಶಕ್ತಿ ಕೇಂದ್ರದ ಸಿಬ್ಬಂದಿಗಳು ಭೇಟಿ ನೀಡಿ ಯಶಸ್ವಿ ಕಥೆಯನ್ನು ತಯಾರಿಸಲು ಸೂಚಿಸಲಾಯಿತು.

(ಕ್ರಮ: ಉಪನಿರ್ದೇಶಕರು ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

**ಸಮೃದ್ಧಿ ಯೋಜನೆ:-**ಮಹಿಳಾ ಬೀದಿ ಬದಿ ವ್ಯಾಪಾರಿಗಳಿಗೆ ರೂ.10000/- ಪ್ರೋತ್ಸಾಹಧನ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಯಡಿ ಯಾವುದೇ ಗುರಿ ನಿಗದಿಯಾಗಿರುವುದಿಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಒಟ್ಟು ಪರಿಶಿಷ್ಟ ಜಾತಿ-7 ಹಾಗೂ ಪರಿಶಿಷ್ಟ ಪಂಗಡ-124 ಭೌತಿಕ ಗುರಿ ನಿಗಧಿಪಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯವರು ಸಭೆಗೆ ತಿಳಿಸಿದರು. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶದಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಪಡೆದು ಮಹಿಳಾ ಅಭಿವೃದ್ಧಿ ನಿಗಮದಿಂದ ಪ್ರೋತ್ಸಾಹಧನ ನೀಡಲು ಕ್ರಮಕೈಗೊಳ್ಳಲು ತಿಳಿಸಲಾಯಿತು.

(ಕ್ರಮ: ಉಪನಿರ್ದೇಶಕರು ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

**ಚೇತನಾ ಯೋಜನೆ:-**2020-21ನೇ ಸಾಲಿನಲ್ಲಿ 2 ಭೌತಿಕ ಗುರಿ ನಿಗದಿಪಡಿಸಿದ್ದು, ದಮನಿತ ಮಹಿಳೆಯರಿಗೆ (ಲೈಂಗಿಕ ಕಾರ್ಯಕರ್ತೆಯರಿಗೆ) ಮಹಿಳಾ ಅಭಿವೃದ್ಧಿ ನಿಗಮದಿಂದ ರೂ.25000 ಬಡ್ಡಿ ರಹಿತ ನೇರ ಸಾಲ ಹಾಗೂ ರೂ.25000 ಸಹಾಯಧನ ನೀಡಲಾಗುತ್ತದೆ. ಈಗಾಗಲೇ ಈ ಯೋಜನೆಯ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿದ್ದು, ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. ಜಿಲ್ಲೆಯಲ್ಲಿ ಯಾವುದೇ ಸಮುದಾಯ ಆಧಾರಿತ ಸಂಸ್ಥೆ ಕಾರ್ಯನಿರ್ವಹಿಸದೇ ಇರುವುದರಿಂದ ಹಾಗೂ ಉಡುಪಿ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಿಂದ (DAPCO) ಜಿಲ್ಲಾ ಏಡ್ಸ್ ತಡೆಗಟ್ಟುವ ಹಾಗೂ ನಿಯಂತ್ರಣಾ

ಘಟಕದಿಂದ ಅನುಷ್ಠಾನಗೊಳ್ಳುತ್ತಿರುವ Target Intervention Programme £Àr AiÀiÁªÀÅzÉÃ (CBO) ಸಮುದಾಯ ಆಧಾರಿತ ಸಂಸ್ಥೆ (ಅಧಿಕೃತ ಸಂಸ್ಥೆ) ಕಾರ್ಯನಿರ್ವಹಿಸದೇ ಇರುವುದರಿಂದ ಹಾಗೂ (FSW) ಮಹಿಳಾ ಲೈಂಗಿಕ ಕಾರ್ಯಕರ್ತೆಯರು ನೇರವಾಗಿ ಸಂಪರ್ಕಿಸಲು ಅವಕಾಶವಿಲ್ಲದಿರುವುದಿಂದ ಅರ್ಜಿ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯವರು ಸಭೆಗೆ ತಿಳಿಸಿದರು. ಈ ಬಗ್ಗೆ ಸದರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಸ್ವಯಂಸೇವಾ ಸಂಸ್ಥೆಯನ್ನು ಗುರುತಿಸಿ ಯೋಜನೆಯ ಸವಲತ್ತನನು ಒದಗಿಸಲು ಕ್ರಮಕೈಗೊಳ್ಳಲು ತಿಳಿಸಲಾಯಿತು.

(ಕ್ರಮ: ಉಪನಿರ್ದೇಶಕರು ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

**ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:**

ಜಿಲ್ಲೆಯಲ್ಲಿ ಸದರಿ ಸಮುದಾಯದವರ ಪರವಾಗಿ ಆಶ್ರಯ ಸಮುದಾಯ ಸಂಘಟನೆ ಕಾರ್ಯನಿರ್ವಹಿಸುತ್ತಿದ್ದು, ಈಗಾಗಲೇ 256 ಜನ ಸಮಾಜದಲ್ಲಿ ಗುರುತಿಸಿಕೊಂಡಿರುತ್ತಾರೆ. ಪ್ರಸ್ತುತ ಮತ್ತೊಂದು ಸಂಸ್ಥೆಯಾದ ಪ್ರತಿಬಿಂಬ ಸಂಘಟನೆಯವರು ತಮ್ಮ ಸಂಸ್ಥೆಯನ್ನು ನೊಂದಾಯಿಸಿಕೊಳ್ಳುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಸಲಹಾ ಸಮಿತಿಯಲ್ಲಿ ಸದರಿ ವಿಷಯವನ್ನು ಮಂಡಿಸಿ ಕ್ರಮ ಕೈಗೊಳ್ಳಲು ತಿಳಿಸಲಾಯಿತು. ಜಿಲ್ಲೆಯಲ್ಲಿ ಈಗಾಗಲೇ 5 ಮಂದಿಗೆ ಗುರುತು ಚೀಟಿಯನ್ನು ಒದಗಿಸಲಾಗಿದ್ದು, ನಿವೇಶನ ಹಾಗೂ ವಸತಿ ಕಲ್ಪಿಸಲಾಗಿದೆ.

(ಕ್ರಮ: ಉಪನಿರ್ದೇಶಕರು ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

**ಅಂಗನವಾಡಿ ಫಲಾನುಭವಿಗಳಿಗೆ ವಿತರಿಸುವ ಮೊಟ್ಟೆ ದರದ ಬಗ್ಗೆ:-**

3-6 ವರ್ಷದ ಸಾಧಾರಣ ಮಕ್ಕಳಿಗೆ ವಾರದಲ್ಲಿ ಎರಡು ದಿನ, ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ, ಗರ್ಭಿಣಿ ಬಾಣಂತಿಯರಿಗೆ ಪ್ರತಿ ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಸರ್ಕಾರದಿಂದ ಪ್ರತಿ ಮೊಟ್ಟೆಗೆ ರೂ.5 ರಂತೆ ದರ ನಿಗದಿಪಡಿಸಿದ್ದು, ಅಂಗನವಾಡಿ ಕಾರ್ಯಕರ್ತೆಯರ ಖಾತೆಗೆ ಜಮಾ ಮಾಡಲಾಗುತ್ತಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಮೊಟ್ಟೆ ದರ ಹೆಚ್ಚಳವಾಗಿರುವುದರಿಂದ ಮೊಟ್ಟೆಗಳ ಖರೀದಿ ವೆಚ್ಚದ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಅನುಕೂಲವಾಗುವಂತೆ ವ್ಯತ್ಯಾಸದ ಮೊತ್ತವನ್ನು ಗ್ರಾಮಪಂಚಾಯತ್‌ನಿಂದ ಭರಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಅನುಮೋದನೆ ಕೋರಿ ಪತ್ರ ಬರೆದಿರುವುದಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ಸಭೆಗೆ ತಿಳಿಸಿದರು. ಈ ಬಗ್ಗೆ ಪಂಚಾಯತ್ ರಾಜ್ ಕಾರ್ಯದರ್ಶಿಗಳೊಂದಿಗೆ ಚರ್ಚಿಸುವುದಾಗಿ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

- ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ಮಾತನಾಡಿ ತಮ್ಮ ಅಧೀನದಲ್ಲಿರುವ ಸಿಬ್ಬಂದಿಗಳಿಗೆ ಜುಲೈ ಮಾಹೆಯಿಂದ ವೇತನ ಬಿಡುಗಡೆಯಾಗಿರುವುದಿಲ್ಲವೆಂದು ಈ ಬಗ್ಗೆ ಸರಕಾರಕ್ಕೆ ಪತ್ರ ಬರೆದಿರುವುದಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ತಿಳಿಸಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಿದ ಪತ್ರದ ಪ್ರತಿಯನ್ನು ನೀಡುವಂತೆ ಸರಕಾರದ ಹಂತದಲ್ಲಿ ಈ ಬಗ್ಗೆ ಚರ್ಚಿಸುವುದಾಗಿ ತಿಳಿಸಲಾಯಿತು.

## ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಘಟಕ:

- ಕೊರಗ ಸಮುದಾಯದವರ ವಸತಿ ಸೌಲಭ್ಯ: ಉಡುಪಿ ಜಿಲ್ಲೆಯ ಕೊರಗ ಸಮುದಾಯದವರ ವಸತಿ ಸೌಲಭ್ಯಕ್ಕೆ ಘಟಕ ವೆಚ್ಚ ರೂ 3.50ಲಕ್ಷದಲ್ಲಿ ಕೇವಲ 108 ಮನೆಗಳಿಗೆ ಮಾತ್ರ ಮಂಜೂರಾತಿ ದೊರೆತಿರುತ್ತದೆ. ಈ ಹಿಂದೆ ಘಟಕ

ವೆಚ್ಚ ರೂ 1.75 ಲಕ್ಷ ಹಾಗೂ 2.00ಲಕ್ಷದಲ್ಲಿ ಮನೆ ಮಂಜೂರಾದ ಹೆಚ್ಚಿನ ಫಲಾನುಭವಿಗಳು ಅನುದಾನದ ಕೊರತೆಯಿಂದ ವಸತಿ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸಿರುತ್ತಾರೆ. ಆದುದರಿಂದ ಐಟಿಡಿಪಿ ಇಲಾಖೆಯ ಈ ಹಿಂದಿನ ವಸತಿ ಯೋಜನೆಗಳಿಗಾಗಿ ಬಿಡುಗಡೆಯಾಗಿ ಉಳಿಕೆಯಾದ ರೂ 9,01,60,000/-ಪ್ರಗತಿಯಲ್ಲಿರುವ 183 ಮನೆಗಳಿಗೆ ಘಟಕವೆಚ್ಚವನ್ನು ರೂ 3.50ಲಕ್ಷಕ್ಕೆ ಏರಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದರೂ ಸದ್ರಿ ಪ್ರಸ್ತಾವನೆಯು ಅನುಮೋದನೆಗೊಂಡಿರುವುದಿಲ್ಲ. ಮುಂದುವರೆದು ಹೊಸದಾಗಿ ಮನೆ ನಿರ್ಮಾಣ ಮಾಡಲು ಅರ್ಜಿ ಸಲ್ಲಿಸಿದ ಒಟ್ಟು 324 ಫಲಾನುಭವಿಗಳಿಗೆ ಘಟಕವೆಚ್ಚ ರೂ 3.50ಲಕ್ಷದಲ್ಲಿ ಹೊಸದಾಗಿ ಮನೆ ಮಂಜೂರು ಮಾಡುವಂತೆಯೂ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ಇವರಿಗೆ ಪ್ರಸ್ತಾವನೆ ಕಳುಹಿಸಲಾಗಿದೆ. ಆದರೆ ಸದ್ರಿ ಪ್ರಸ್ತಾವನೆಯೂ ಅನುಮೋದನೆಗೊಂಡಿರುವುದಿಲ್ಲವೆಂದು ಸದ್ರಿ ಇಲಾಖೆಯ ಅಧಿಕಾರಿಯವರು ಸಭೆಗೆ ತಿಳಿಸಿದರು. ಸದ್ರಿ ಪ್ರಸ್ತಾವನೆಗಳನ್ನು ಸರಕಾರದ ಮಟ್ಟದಲ್ಲಿ ಮಂಜೂರಾತಿಗೊಳಿಸಲು ಕ್ರಮವಹಿಸಲು ಸದರಿ ಪತ್ರದ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.

**ಮೀನುಗಾರಿಕಾ ಇಲಾಖೆ:**

ಮೀನುಗಾರ ಮಹಿಳೆಯರು ದಿನಾಂಕ: 01.04.2017 ರಿಂದ 31.03.2019 ರವರೆಗೆ ಶೇಕಡಾ 2 ರ ಬಡ್ಡಿ ದರದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಪಡೆದ ಸಾಲ ರೂ. 50,000/- ಗರಿಷ್ಠ ಮನ್ನಾ ಆಗಿದ್ದು, ಇದರಲ್ಲಿ ಗರಿಷ್ಠ 20297 ಫಲಾನುಭವಿಗಳು ಉಡುಪಿ ಜಿಲ್ಲೆಯವರಾಗಿದ್ದು ಈಗಾಗಲೇ ರಾಜ್ಯ ಮಟ್ಟದ 15099 ಜನರ ಸಾಲದ ಖಾತೆಗೆ ರೂ 38.09 ಕೋಟಿ ಸಾಲ ಮನ್ನಾದ ಹಣವನ್ನು ಜಮಾ ಮಾಡಲು ಕಳುಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ಮಾಹಿತಿ ನೀಡಿದರು. ಇದರಲ್ಲಿ ರೂ 31.00 ಕೋಟಿ ಸಾಲದ ಖಾತೆಗೆ ಜಮಾ ಆಗಿದ್ದು, 4050 ಜನರ ಹಣವನ್ನು ಜಮೆ ಮಾಡಲು ಆಧಾರ್ ತಾಳೆ ಹೊಂದುತ್ತಿಲ್ಲ, ಸಾಲದ ಖಾತೆ ಮುಕ್ತಾಯವಾಗಿದೆ ಇತ್ಯಾದಿ ಕಾರಣಗಳಿಗಾಗಿ ವಾಪಸಾಗಿರುತ್ತದೆ ಎಂದು ತಿಳಿಸಿದರು. ಇದನ್ನು ಸರಿಪಡಿಸಿ ಸಾಲಮನ್ನಾದ ಹಣವು ಫಲಾನುಭವಿಗಳಿಗೆ ಶೀಘ್ರದಲ್ಲಿ ನೀಡಲು ಕ್ರಮವಹಿಸಬೇಕೆಂದು ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

(ಕ್ರಮ: ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ ಅವೈಜ್ಞಾನಿಕ ಮೀನುಗಾರಿಕೆ ಪದ್ಧತಿಗಳನ್ನು ನಿಷೇಧಿಸಿದ್ದರೂ, ಎಲ್ಲ ವರ್ಗದ ಮೀನುಗಾರರು ನಿಯಮಗಳನ್ನು ಉಲ್ಲಂಘಿಸಿ ಮೀನುಗಾರಿಕೆಯಲ್ಲಿ ತೊಡಗಿರುವುದಾಗಿ ದೂರುಗಳು ಸ್ವೀಕೃತವಾಗುತ್ತಿರುವ ಹಿನ್ನಲೆಯಲ್ಲಿ ಎಲ್ಲ ವರ್ಗದ ಮೀನುಗಾರರ ಸಭೆ ಕರೆದು ಸೂಕ್ತ ಕ್ರಮ ಕೈಗೊಳ್ಳಲು ಉಪನಿರ್ದೇಶಕರು ಮೀನುಗಾರಿಕಾ ಇಲಾಖೆ ಇವರಿಗೆ ಸೂಚಿಸಲಾಯಿತು. . ಇಲಾಖೆಯಲ್ಲಿನ ಸೀಮಿತ ಸಿಬ್ಬಂದಿ ಬಲದಿಂದಾಗಿ ಉಲ್ಲಂಘನೆ ಪ್ರಕರಣಗಳನ್ನು ಹತ್ತಿಕ್ಕಲು ತೊಡಕಾಗಿದೆ ಹಾಗೂ ಪ್ರತ್ಯೇಕ Enforcement Wing ನ್ನು ಸ್ಥಾಪಿಸಲು ಸರಕಾರಕ್ಕೆ ಪ್ರಸ್ತಾವನೆ ಹೋಗಿದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಮುಂದುವರೆದು ಈ ಹಿಂದೆ Tracking ಉಪಪಕರಣ ಅಳವಡಿಸಲು ಪ್ರಾತ್ಯಕ್ಷಿಕೆ ನಡೆಸಿ ಸರಕಾರಕ್ಕೆ ಬರೆದಿದ್ದು, ಈಗ ಎಲ್ಲಾ ಬೋಟು/ದೋಣಿಗಳಿಗೂ ದ್ವಿಮುಖ ಸಂವಹನ ಸಾಧನವನ್ನು ಕಡ್ಡಾಯವಾಗಿ ಅಳವಡಿಸಲು ಸರಕಾರದ ಆದೇಶವಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ಮಾಹಿತಿ ನೀಡಿದರು.
- (ಕ್ರಮ: ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ, ಉಡುಪಿ)

## ಕಂದಾಯ ಇಲಾಖೆ:

- ಹೆಬ್ರಿ ತಾಲೂಕಿನಲ್ಲಿ ಹೋಬಳಿ ರಚನೆಯ ಕುರಿತು ಚರ್ಚಿಸಲಾಗಿ, ಈ ಬಗ್ಗೆ ಹೆಬ್ರಿ ಹೋಬಳಿ ರಚಿಸುವ ಕುರಿತು ಈಗಾಗಲೇ ಪ್ರಸ್ತಾವನೆ ಸರಕಾರದ ಹಂತದಲ್ಲಿ ಇರುವುದಾಗಿ ಅಪರ ಜಿಲ್ಲಾಧಿಕಾರಿವರು ತಿಳಿಸಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಯ ಪ್ರತಿಯನ್ನು ನೀಡಿದಲ್ಲಿ ಸರಕಾರದ ಹಂತದಲ್ಲಿ ಅನುಮೋದನೆಯ ಕುರಿತು ಚರ್ಚಿಸುವುದಾಗಿ ತಿಳಿಸಲಾಯಿತು.
- ಸರಕಾರದ ಅನುಮತಿಯೊಂದಿಗೆ ಉಡುಪಿ ಜಿಲ್ಲಾ ಕಂದಾಯ ಘಟಕದಲ್ಲಿ ನೇಮಿಸಲಾದ ಹೊರಗುತ್ತಿಗೆ ಆಧಾರದ ಡಿ ಗ್ರೂಫ್ , ವಾಹನ ಚಾಲಕರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಮಾಸಿಕ ವೇತನ ಪಾವತಿಸಲು ಅನುದಾನದ ಲಭ್ಯತೆ ಇಲ್ಲದೇ ಇರುವುದರಿಂದ , ವೇತನ ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಈಗಾಗಲೇ ಉಡುಪಿ ಜಿಲ್ಲಾ ಕಂದಾಯ ಘಟಕಕ್ಕೆ 2020-21 ನೇ ಸಾಲಿಗೆ ಯೋಜನೇತರ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವಂತೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಕಂದಾಯ ಇಲಾಖೆ ಇವರಿಗೆ ಪತ್ರವನ್ನು ಬರೆಯಲಾಗಿರುತ್ತದೆ. ಈ ಬಗ್ಗೆ ಸರಕಾರದ ಹಂತದಲ್ಲಿ ಅನುಮೋದನೆಗೆ ಸಹಕರಿಸುವಂತೆ ಅಪರ ಜಿಲ್ಲಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.
- ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ 35 ಗ್ರಾಮಕರಣಿಕರ ಹುದ್ದೆಗಳು ಖಾಲಿಯಿದ್ದು, ಈ ಪೈಕಿ 18 ಹುದ್ದೆಗಳನ್ನು ಭರ್ತಿ ಮಾಡುವ ಪ್ರಕಿಕೆಯು ಅಂತಿಮ ಹಂತದಲ್ಲಿರುವುದರಿಂದ, ಈಗಾಗಲೇ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಅನುಮತಿ ಕೊಡುವಲ್ಲಿ ಸರಕಾರದ ಹಂತದಲ್ಲಿ ಸಹಕರಿಸುವಂತೆ ಜಿಲ್ಲಾಧಿಕಾರಿಯವರು ಕೋರಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.
- ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಮತ್ತು ಹೆಬ್ರಿ ಎಂಬ ಏಳು ತಾಲೂಕುಗಳಿದ್ದು, ಸದ್ರಿ ಏಳು ತಾಲೂಕುಗಳಿಗೆ ಒಂದೇ ಉಪವಿಭಾಗ ಕಛೇರಿ ಇರುತ್ತದೆ. ಕುಂದಾಪುರ ಸಹಾಯಕ ಕಮೀಷನರ್‌ರವರು ಏಳು ತಾಲೂಕುಗಳ ಮೇಲ್ವಿಚಾರಣೆ ನಡೆಸಬೇಕಾಗಿರುತ್ತದೆ. ಈ ಎಲ್ಲಾ ಕೆಲಸಗಳ ನಿರ್ವಹಣೆಯನ್ನು ಒಂದೇ ಉಪವಿಭಾಗದ ಕಛೇರಿಯಿಂದ ನಿರ್ವಹಿಸಲು ಆಡಳಿತಾತ್ಮಕವಾಗಿ ಸಮಸ್ಯೆಗಳಾಗುತ್ತಿವೆ. ಸಾರ್ವಜನಿಕರ ಕೆಲಸಗಳಿಗೆ ಸಕಾಲದಲ್ಲಿ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಆಡಳಿತಾತ್ಮಕ ದೃಷ್ಠಿಯಿಂದ ಹಾಗೂ ಸಾರ್ವಜನಿಕರ ಕಛೇರಿ ಕೆಲಸಗಳು ತ್ವರಿತಗತಿಯಲ್ಲಿ ನಡೆಸುವಂತಾಗಲು ಕುಂದಾಪುರ ಉಪವಿಭಾಗವನ್ನು ವಿಂಗಡಿಸಿ ಹೊಸತಾಗಿ ಉಡುಪಿ ಉಪವಿಭಾಗವನ್ನು ರಚಿಸಿ ತಾಲೂಕುಗಳ ಮೇಲ್ವಿಚಾರಣೆಯನ್ನು ಮರುಹಂಚಿಕೆ ಮಾಡುವುದು ಸೂಕ್ತವಾಗಿರುತ್ತದೆ. ಈ ಬಗ್ಗೆ ಈ ಕಛೇರಿಯ ಪತ್ರ ಸಂಖ್ಯೆ: ಎಡಿಎಂ (1)ಸಿಆರ್ 47/2019 (E 45422) ದಿನಾಂಕ: 25.05.2019, 29.11.2019 ಮತ್ತು 04.01.2020 ರಂತೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು , ಕಂದಾಯ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಬಗ್ಗೆ ಸರಕಾರದ ಹಂತದಲ್ಲಿ ಅನುಮೋದನೆಗೆ ಸಹಕರಿಸುವಂತೆ ಜಿಲ್ಲಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.

- ಉಡುಪಿ ಜಿಲ್ಲಾಧಿಕಾರಿಯವರಿಗೆ ಕಾನೂನು ಸಲಹೆಗಾರರಾಗಿ ನೇಮಕಾತಿ ಮಾಡಿರುವ ಕಾನೂನು ಸಲಹೆಗಾರರ (ನಿವೃತ್ತ ಜಿಲ್ಲಾ ನ್ಯಾಯಾಧೀಶರು)ಡಾಟಾ ಎಂಟ್ರಿ ಆಪರೇಟರ್ ಹಾಗೂ ದಲಾಯತ್ ಗಳ , ಮಾಸಿಕ ಸಂಭಾವನೆಯು ಪಾವತಿ ಮಾಡಲು 2 ವರ್ಷದಿಂದ ಬಾಕಿಯಿದ್ದು ಸಂಭಾವನೆಯನ್ನು ಪಾವತಿ ಮಾಡಲು ಅನುದಾನವನ್ನು ಮಂಜೂರು ಮಾಡುವಂತೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರಿಗೆ ತಿಳಿಸಿದರು. ಈ ಬಗ್ಗೆ ಸರಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.

- ಜಿಲ್ಲಾ ಸಂಕೀರ್ಣವು ಜಿಲ್ಲೆಯ ಮಾದರಿ ಕಛೇರಿಯಾಗಿದ್ದು, 2011 ರಲ್ಲಿ ಉದ್ಘಾಟನೆಯಾದ ನಂತರ ಇಲ್ಲಿಯವರೆಗೆ ಸದರಿ ಕಟ್ಟಡಕ್ಕೆ ಬಣ್ಣ ಬಳಿಯದೇ ಕಟ್ಟಡವು ಕಳೆಗುಂದಿದ್ದು, ಬಣ್ಣ ಬಳಿಯುವುದು ತೀರಾ ಅವಶ್ಯಕವಾಗಿರುತ್ತದೆ. ಆದುದರಿಂದ ಶೀಘ್ರವಾಗಿ ರೂ. 95.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವಂತೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಬಗ್ಗೆ ಅನುಮೋದನೆ ದೊರಕುವಲ್ಲಿ ಸಹಕರಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರನ್ನು ಜಿಲ್ಲಾಧಿಕಾರಿವರು ಕೋರಿದರು. ಸರಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.

- ಬ್ರಹ್ಮಾವರ ತಾಲೂಕು ವ್ಯಾಪ್ತಿಯ ಕೋಟ ಹೋಬಳಿ ಹೊಸಬೆಂಗ್ರೆ ಮತ್ತು ಬೆಂಗ್ರೆ ಪ್ರದೇಶಗಳಲ್ಲಿ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿ ಮನೆಕಟ್ಟಿಕೊಂಡಿರುವವರ ಸಂಖ್ಯೆ 381 ಮತ್ತು ಕೃಷಿ ಜಮೀನು ಒತ್ತುವರಿ ಮಾಡಿರುವವರ ಸಂಖ್ಯೆ 110 ಒಟ್ಟು 491 ಅತಿಕ್ರಮಣದಾರರು ಇದ್ದು, ಜಾಗದ ಈ ಕೆಳಗಿನ ವಿವರವನ್ನು ಅಪರ ಜಿಲ್ಲಾಧಿಕಾರಿಯವರು ಸಭೆಗೆ ತಿಳಿಸಿದರು.

1. ಪೊರಂಬೋಕು - 38.54 ಎಕ್ರೆ
2. ಸರಕಾರಿ ಅನಾಧೀನ - 45.19 ಎಕ್ರೆ
3. ಸಮುದ್ರ ಒತ್ತುವರಿ - 41.15 ಎಕ್ರೆ

ಒಟ್ಟು - 124.88 ಎಕ್ರೆ

ಇವುಗಳಲ್ಲಿ ಕೆಲವು ಸರ್ವೆ ನಂಬರ್‌ಗಳು ಪೊರಂಬೋಕು ಆಗಿದ್ದು ಈ ಜಮೀನು ವಿರಹಿತಗೊಳಿಸಬೇಕಾಗಿರುವುದಾಗಿ, ಹಾಗೂ 41.15 ಎಕ್ರೆ ವಿಸ್ತೀರ್ಣವು ಸಮುದ್ರ ವಲಯದಲ್ಲಿದ್ದು, ಈ ವಿಸ್ತೀರ್ಣ ಪ್ರದೇಶಗಳನ್ನು ಕಂದಾಯ ಗ್ರಾಮಕ್ಕೆ ಸೇರಿಸಿ ಹೊಸದಾಗಿ ಸರ್ವೆ ನಂಬ್ರ ನೀಡಬೇಕಾಗಿದ್ದು, ಹೊಸದಾಗಿ ಸರ್ವೆ ನಂಬರ್ ನೀಡುವುದಕ್ಕೆ ಅನುಮತಿಯನ್ನು ಸರಕಾರ ಮಟ್ಟದಲ್ಲಿ ನೀಡಬೇಕಾಗಿರುವುದಾಗಿ ಈ ಬಗ್ಗೆ ಈ ಕಛೇರಿಯಲ್ಲಿ ಈಗಾಗಲೇ ಸಭೆಯನ್ನು ನಡೆಸಿ ಹೊಸ ಸರ್ವೆ ನಂಬರ್ ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಭೂದಾಖಲೆಗಳ ಉಪನಿರ್ದೇಶಕರಿಗೆ ನಿರ್ದೇಶಿಸಿರುವುದಾಗಿ ಜಿಲ್ಲಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರಿಗೆ ಮಾಹಿತಿ ನೀಡಿದರು.

- ಕಳೆದ ಅಕ್ಟೋಬರ್‌ನಲ್ಲಿ ಉಂಟಾದ ನೆರೆಹಾನಿಯಿಂದ 3600 ಕ್ಕೂ ಅಧಿಕ ಮನೆಗಳು ಜಿಲ್ಲೆಯಲ್ಲಿ ಮುಳುಗಡೆಯಾಗಿದ್ದು, ಇಂತಹ ಸನ್ನಿವೇಶಗಳು ಎದುರಾದ ಸಂದರ್ಭದಲ್ಲಿ ಕ್ಷಿಪ್ರಗತಿಯಲ್ಲಿ ಪರಿಸ್ಥಿಯನ್ನು ಎದುರಿಸುವ ಕುರಿತು ಈ ದಿನ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಸಹಯೋಗದೊಂದಿಗೆ ಉದ್ಯಾವರ ಪಾಪನಾಶಿನಿ ಹೊಳೆಯಲ್ಲಿ ಅಣಕು ಕಾರ್ಯಾಚರಣೆ ನಡೆಸಲಾದ ವಿಷಯವನ್ನು ಅಪರ ಜಿಲ್ಲಾಧಿಕಾರಿಯವರು ಸಭೆಗೆ ತಿಳಿಸಿದರು.
- ಉಡುಪಿ ಜಿಲ್ಲೆಯಲ್ಲಿ ಹೊಸ ತಾಲೂಕುಗಳು ರಚನೆಯಾಗಿದ್ದು, ಭೂಮಾಪಕರು ಅವಶ್ಯಕ ಸಂಖ್ಯೆಯಲ್ಲಿ ಲಭ್ಯವಿಲ್ಲದೇ ಇರುವುದರಿಂದ, ಅಳತೆಗೆ ಅರ್ಹವಿರುವ ಭೂಮಾಪನಾ ಅರ್ಜಿಗಳು ಬಾಕಿಯಾಗಲು ಕಾರಣವಾಗಿದೆ.

ಹೊಸ ತಾಲೂಕುಗಳಿಗೆ ಅನ್ವಯವಾಗುವಂತೆ ತಹಶೀಲ್ದಾರರ ಕಛೇರಿಗಳಿಗೆ ಸಂಬಂಧಿಸಿದಂತೆ ಹುದ್ದೆ ಮಂಜೂರಿಯಾಗಿರುತ್ತದೆ ಆದರೆ ಭೂಮಾಪನಾ ಶಾಖೆಗೆ ಸಂಬಂಧಿಸಿದಂತೆ ಈವರೆಗೂ ಯಾವುದೇ ಹುದ್ದೆಯನ್ನು ಮಂಜೂರಿ ಮಾಡಿರುವುದಿಲ್ಲ. ಹುದ್ದೆ ಮಂಜೂರಿ ಮಾಡುವಂತೆ ಮಾನ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಭೂದಾಖಲೆಗಳ ಉಪನಿರ್ದೇಶಕರು ಕೋರಿರುವುದಾಗಿದೆ.

- ಈಗಾಗಲೇ ಮಾನ್ಯ ಆಯುಕ್ತರು ಭೂಮಾಪನಾ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಇವರು ಹೊಸದಾಗಿ ಪರವಾನಗಿ ಭೂಮಾಪಕರ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ದಿನಾಂಕ: 27.12.2020 ರಂದು ಪರೀಕ್ಷೆ ನಡೆಸುವುದಾಗಿ ತಿಳಿಸಿರುತ್ತಾರೆ. ಆದರೆ ಚುನಾವಣಾ ನೀತಿ ಸಂಹಿತೆ ಜ್ಯಾರಿಯಾದ ಕಾರಣ ಹೊಸದಾಗಿ ಪರೀಕ್ಷೆ ನಡೆಸಲು ದಿನಾಂಕ ನಿಗಧಿಪಡಿಸಲು ಸರ್ಕಾರಕ್ಕೆ ಕೋರಿಕೆ ಸಲ್ಲಿಸುವಂತೆ ಮನವಿ ಸಲ್ಲಿಸಿದರು.

## ಪ್ರವಾಸೋದ್ಯಮ ಇಲಾಖೆ:

- ಜಿಲ್ಲಾಡಳಿತದ ವತಿಯಿಂದ ಎಲ್ಲಾ ಕಡಲ ತೀರಗಳನ್ನು ಅಂತರಾಷ್ಟ್ರೀಯ ಮಟ್ಟದ Blue Flag ಮಾನ್ಯತೆಗೆ ಪ್ರಯತ್ನಿಸುತ್ತಿರುವುದಾಗಿ ಜಿಲ್ಲಾಧಿಕಾರಿಯವರು ತಿಳಿಸಿದರು.
- ಪಡುವರಿ – ಸೋಮೇಶ್ವರ ಬೀಚ್‌ಗೆ 5 ಕೋಟಿ ಅಂದಾಜು ಪಟ್ಟಿ ತಯಾರಿಸಿ ಪ್ರವಾಸೋದ್ಯಮ ಇಲಾಖೆಯ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ಬಿಡುಗಡೆಗೆ ಬಾಕಿ ಇದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಈ ಬಗ್ಗೆ ಕೇಂದ್ರ ಕಛೇರಿಗೆ ಸಲ್ಲಿಸಿದ ಪ್ರಸ್ತಾವನೆಯ ಪ್ರತಿಯನ್ನು ನೀಡುವಂತೆ ಸೂಚಿಸಲಾಯಿತು.
- ಎರಡನೇ ಹಂತದ ಬ್ಲೂ ಫ್ಲಾಗ್ ಪ್ರಮಾಣ ಪತ್ರಕ್ಕಾಗಿ ಕೋಡಿ ಕಂದಾಪುರ ಬೀಚನ್ನು ತೆಗೆದುಕೊಳ್ಳುವುದು ಸೂಕ್ತವಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.
- ಮರವಂತೆ ಬೀಚ್ ಅಭಿವೃದ್ಧಿಗೆ ರೂ . 5 ಕೋಟಿ ಅನುಮೋದನೆಯಾಗಿದ್ದು, ಇದು DPR ಹಂತದಲ್ಲಿರುವುದಾಗಿ ಜಿಲ್ಲಾಧಿಕಾರಿಯವರು ತಿಳಿಸಿದರು.
- ಮಲ್ಪೆ ಜಟ್ಟಿ ನಿರ್ಮಿಸಲು ಸೀಆರ್‌ಝಡ್ ಅನುಮೋದನೆ ಬಾಕಿ ಇದೆ. ಇದಕ್ಕಾಗಿ Rapid EIA ತಯಾರಿಸಬೇಕಾಗಿದ್ದು, MIT ಅಥವಾ NITK ಯಿಂದ ತಯಾರಿಸಬಹುದಾಗಿದ್ದು, ಈ ಬಗ್ಗೆ ಪಿಡಬ್ಲೂಡಿ ಇಂಜಿನಿಯರ್‌ಗೆ ಮಾಹಿತಿ ನೀಡಲಾಗಿದೆಯೆಂದು ಶ್ರೀ ಚಂದ್ರಶೇಖರ್ ನಾಯ್ಕ್, ಉಪನಿರ್ದೇಶಕರು ಕೃಷಿ ಇಲಾಖೆ ಇವರು ಮಾಹಿತಿ ನೀಡಿದರು.
- ಮಲ್ಪೆ Sea-Walk ಬಳಿ ಹೊಸದಾಗಿ Open theatre ನಿರ್ಮಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

## ಇತರ ಸೂಚನೆಗಳು:

- ಸರಕಾರ ಪ್ರಸ್ತುತ ಬಜೆಟ್‌ನಲ್ಲಿ ಜನಸಾಮಾನ್ಯ ಕಲ್ಯಾಣ ಯೋಜನೆ ಸೇರಿದಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅನೇಕ ಯೋಜನೆಗಳು, ಕಾರ್ಯಕ್ರಮಗಳನ್ನು ರೂಪಿಸಿದ್ದು, ಇವುಗಳ ಅನುಷ್ಠಾನ ಕೋವಿಡ್ ಸಾಂಕ್ರಾಮಿಕ ರೋಗದಿಂದ ನಿಗದಿತ ಮಟ್ಟದಲ್ಲಿ ಆಗಿಲ್ಲ. ಡಿಸೆಂಬರ್ ಹಾಗೂ ಜನವರಿ ಮಾಹೆಯಲ್ಲಿ

ಸಂಪೂರ್ಣಗೊಳಿಸಲು ಕಾರ್ಯಪ್ರವೃತರಾಗಬೇಕು ಎಂದು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಯಿತು.

- ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರಿನ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು, ಶೀಘ್ರದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದರೊಂದಿಗೆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕಾಗಿ ಸೂಚಿಸಲಾಯಿತು.
- ಉದ್ಯೋಗ ಖಾತ್ರಿ ಯೋಜನೆಯಡಿ ಬಡ ಜನರಿಗೆ ಉದ್ಯೋಗ ನೀಡುವ ಜೊತೆಗೆ ಶಾಶ್ವತ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿ ಸೂಚಿಸಲಾಯಿತು.
- ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯ ಜಾರಿ ಸೇರಿದಂತೆ ಅಂಗನವಾಡಿ ಮಕ್ಕಳಿಗೆ ಹಾಲಿನ ಪೌಡರ್ ವಿತರಣೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.
- ರಾಜ್ಯ ಮಟ್ಟದಲ್ಲಿ ಜಿಲ್ಲೆಯಲ್ಲಿ ಬರುವ ಮಾಹಿತಿಗಳ ಆಧಾರದ ಮೇಲೆ ಮುಂಬರುವ ಬಜೆಟ್‌ನಲ್ಲಿ ಯೋಜನೆಗಳನ್ನು ತಯಾರಿಸಲಾಗುವುದು. ಇದರ ಹಿನ್ನೆಲೆ ಪ್ರತಿಯೊಂದು ಇಲಾಖೆಯವರು ತಮ್ಮ ಇಲಾಖೆಗಳಲ್ಲಿನ ಯೋಜನೆಗಳ ಮಾಹಿತಿಯನ್ನು ನಿಗಧಿತ ಸಮಯದಲ್ಲಿ ರಾಜ್ಯ ಮಟ್ಟದ ಕಚೇರಿಗಳಿಗೆ ತಲುಪಿಸಬೇಕೆಂದು ಸೂಚಿಸಲಾಯಿತು.
- ವಿಧಾನಸಭಾ ಅಧಿವೇಶನದಲ್ಲಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ಉತ್ತರವನ್ನು ವಿಳಂಬವಿಲ್ಲದೇ ನಿಖರ ಮಾಹಿತಿಗಳನ್ನು ಶೀಘ್ರವಾಗಿ ಕಳುಹಿಸಬೇಕು ಎಂದು ಸೂಚನೆ ನೀಡಲಾಯಿತು.
- ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ಅವಕಾಶಗಳಿದ್ದು, ಪ್ರವಾಸಿಗರ ಅನುಕೂಲಕ್ಕಾಗಿ ಅಗತ್ಯ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕಲ್ಪಿಸಲು ಸೂಚಿಸಲಾಯಿತು.
- ಕೋವಿಡ್ 19 ನ 2 ನೇ ಮತ್ತು 3 ನೇ ಹಂತವನ್ನು ತಡೆಗಟ್ಟುವ ನೆಲೆಯಲ್ಲಿ ಸಾಮಾಜಿಕ ಅಂತರ ಹಾಗೂ ಮುಖಕವಚ ಉಪಯೋಗಿಸುವುದನ್ನು ಕಡ್ಡಾಯಗೊಳಿಸಲು ಸೂಚಿಸಲಾಯಿತು.

ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

( ಡಾ. ಎಂ.ಟಿ ರೇಜು ಭಾ.ಆ.ಸೇ )

ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಜೀವನೋಪಾಯ

ಅಭಿಯಾನ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ

ಕಾರ್ಯದರ್ಶಿಯವರು

Date: 19-12-2020

## Review of COVID-19 prevention and mitigation measures taken in Uttara Kannada district

Uttara Kannada District has around 16 Lakh population (As per projections from 2011 census). The geographical area of the district is 10,291km$^2$ out of which 80% is forest and 20% is non forest area. The district has 12 taluks, 3 CMCs, 4 TMCs, 5 TPs, 12 Taluk Panchayats, and 231 GPs. 71% of population are in rural areas and 29% in urban areas. The density of the district is 140/km$^2$. The rural population is scattered and population density is low in rural areas. Apart from District Magistrate, there are 4 Assistant Commissioners, 12 Tahsildars, and 35 Revenue Inspectors.

In Uttara Kannada district, the total positive cases reported are 14106. The total deaths due to covid-19 stands at 184 of which death audit is done for 164 cases, 18 deaths occurred outside the district and only 2 are pending for death audit. The active hospitalized cases as on 18-12-2020 is 20 cases and home isolation is 78 cases. Taluk wise abstract is given below:

| Taluk Name | Cured | | Active | | | | Death | | Grand Total |
|---|---|---|---|---|---|---|---|---|---|
| | | | Today | Hospitalized | Home Isolation | Total | | | |
| | Today | till 18-12-2020 | | till 18-12-2020 | till 18-12-2020 | till 18-12-2020 | Today | till 18-12-2020 | |
| Karwar | 1 | 1916 | 5 | 13 | 17 | 30 | 0 | 21 | 1967 |
| Ankola | 3 | 888 | 0 | 0 | 0 | 0 | 0 | 10 | 898 |
| Kumta | 2 | 1867 | 3 | 1 | 12 | 13 | 0 | 27 | 1907 |
| Honnavar | 0 | 1282 | 0 | 0 | 7 | 7 | 0 | 24 | 1313 |
| Bhatkal | 0 | 1179 | 0 | 2 | 2 | 4 | 0 | 18 | 1201 |
| Sirsi | 1 | 1585 | 4 | 3 | 11 | 14 | 0 | 20 | 1619 |
| Siddapur | 5 | 662 | 0 | 0 | 16 | 16 | 0 | 7 | 685 |
| Yellapur | 6 | 898 | 3 | 0 | 7 | 7 | 0 | 8 | 913 |
| Mundgod | 1 | 1491 | 1 | 0 | 4 | 4 | 0 | 12 | 1507 |
| Haliyal | 0 | 1810 | 0 | 0 | 0 | 0 | 0 | 34 | 1844 |
| Joida | 1 | 247 | 1 | 1 | 2 | 3 | 0 | 2 | 252 |
| **Grand Total** | **20** | **13825** | **17** | **20** | **78** | **98** | **0** | **183** | **14106** |

The total Case Fatality Rate (CFR) is reported to be 1.3% and the total positivity rate to be 6.4%. Last 7 days trend of positivity rate is 1.36% which is much lower than the state prescribed rate. Taluk wise details are given below:

| Samples positivity rate (Last 7 Days) | | | | |
|---|---|---|---|---|
| S.No | Date | Total Tests | Samples Positive | Positivity(%) |
| 1 | 12/12/2020 | 894 | 17 | 1.9 |
| 2 | 13/12/2020 | 756 | 11 | 1.46 |

| | | | | |
|---|---|---|---|---|
| 3 | 14/12/2020 | 651 | 14 | 2.15 |
| 4 | 15/12/2020 | 690 | 14 | 2.03 |
| 5 | 16/12/2020 | 1754 | 18 | 1.03 |
| 6 | 17/12/2020 | 1652 | 14 | 0.85 |
| 7 | 18/12/2020 | 935 | 1 | 0.11 |
| | **Total** | **7332** | **89** | **1.36** |

* Data Abstract from ICMR Portal

On an average the district is conducting 1300 RT-PCR tests per day and 250-270 RAT tests per day. Till now, a total of 1,55,088 RT-PCR tests are done and 66811 RAT tests are done. Taluk wise abstract is given below:

**Sample Tested Per Lakh Population Detail**

| Sl. No. | Taluka | Population | RTPCR | RAT | Total | Positive | Death | Sample/Lakh Population | Positivity % | Fatality% |
|---|---|---|---|---|---|---|---|---|---|---|
| 1 | Ankola | 126804 | 12925 | 5564 | 18489 | 898 | 10 | 14580.8 | 4.9 | 1.1 |
| 2 | Bhatkal | 165595 | 17718 | 5495 | 23213 | 1201 | 18 | 14017.9 | 5.2 | 1.5 |
| 3 | Haliyal | 171913 | 18193 | 9389 | 27582 | 1844 | 34 | 16044.2 | 6.7 | 1.8 |
| 4 | Honnavar | 175408 | 15863 | 4789 | 20652 | 1313 | 24 | 11773.7 | 6.4 | 1.8 |
| 5 | Joida | 48109 | 6135 | 2645 | 8780 | 252 | 2 | 18250.2 | 2.9 | 0.8 |
| 6 | Karwar | 156170 | 16866 | 7437 | 24303 | 1967 | 21 | 15561.9 | 8.1 | 1.1 |
| 7 | Kumta | 166651 | 14028 | 5069 | 19097 | 1907 | 27 | 11459.3 | 10 | 1.4 |
| 8 | Mundgod | 143034 | 16843 | 9285 | 26128 | 1507 | 12 | 18267 | 5.8 | 0.8 |
| 9 | Siddapur | 107213 | 9964 | 4326 | 14290 | 685 | 7 | 13328.6 | 4.8 | 1 |
| 10 | Sirsi | 202679 | 15438 | 5656 | 21094 | 1619 | 20 | 10407.6 | 7.7 | 1.2 |
| 11 | Yellapur | 86060 | 11115 | 7156 | 18271 | 913 | 8 | 21230.5 | 5 | 0.9 |
| **Total** | | **1549636** | **155088** | **66811** | **221899** | **14106** | **183** | **14319.4** | **6.4** | **1.3** |

The district has sufficient number of facilities at Dedicated Covid Hospital which is at District level. A total of 375 beds for covid positive patients, 72 ICU beds, 232 Oxygenated beds, 115 oxygen cylinders, and 31 ventilators are available with the dedicated covid hospital. Apart from this, the district is having enough resources in dedicated covid health centre which is at taluk level. The district abstract of all combined is given below:

| **District Facility Abstract** | | | |
|---|---|---|---|
| **Sl No** | **Particular** | **Total Number** | **Remarks** |
| 1 | Total Number of beds FOR COVID POSITIVE | 950 | Details includes DCH and DCHC |
| 2 | Total ICU Beds | 96 | Details includes DCH and DCHC |

| | | | |
|---|---|---|---|
| 3 | Total Oxygenated Beds | 449 | Details includes DCH and DCHC |
| 4 | Total ventilators | 48 | Details includes DCH and DCHC |

The ground work for the Covid-19 vaccine roll out has started in the district. Two committees are formed one under Deputy Commissioner and the other under the District Health Officer. Under the chairmanship of Deputy Commissioner - District Task Force for Immunization (DTFI) is formed and under the chairmanship of HOD, Pediatric Department, KRIMS – Adverse Event Following Immunization (AEFI) committee. 4 meetings of DTFI and 1 meeting of AEFI are already conducted.

As per the Governments' instruction, the vaccine will be first administered to Health Care workers (HCW), Frontline workers and to people aged above 50 years with co-morbidities. The Central Government has developed a platform (Co-WIN) to update the beneficiaries list of each district. The abstract of the progress of the data entry of Uttara Kannada district is given below:

| **Total Facilities** | | **Facilities Added To CoWIN** | | **HCW Beneficiaries** | **Total Beneficiaries uploaded To CoWIN** | **%** |
|---|---|---|---|---|---|---|
| GOVT | 101 | 101 | 100% | 6676 | 7287 | 109% |
| PRIVATE | 479 | 479 | 100% | 4778 | 4597 | 96% |
| TOTAL | 580 | 580 | 100% | 11454 | 11884 | 104% |

The district has sufficient cold storage facility to store and transport the vaccines. The total available Ice Lined Refrigerators (ILR) are 106 and Deep Freezer 105. The details of the cold storage in the district are given below:

| **ILR & De Freezer Capacity Details** | | | | | |
|---|---|---|---|---|---|
| **Sl No** | **Equipment** | **Model No** | **Capacity (Ltr)** | **Doses Capacity** | **Total No Of Model ILR** |
| 1 | ILR | V.L.S 300 | 98 LTRS | 22,000 | 22 |
| 2 | ILR | V.L.S 400 | 145 LTRS | 40,000 | 2 |
| 3 | ILR | H.B.C 200 | 145 LTRS | 40,000 | 5 |
| 4 | ILR | M.K. 304 | 145 LTRS | 40,000 | 3 |
| 5 | ILR | H.B.C 70 | 45 LTRS | 16,000 | 30 |
| 6 | ILR | M.K. 144 | 45 LTRS | 16,000 | 41 |
| 7 | ILR | M.K. 142 | 45 LTRS | 16,000 | 3 |
| **TOTAL NO OF ILR** | | | | | **106** |

| | | |
|---|---|---|
| 1 | ILR LARGE | 10 |
| 2 | ILR SMALL | 96 |
| 3 | WIC WALK IN COOLER | 1 |

| Sl No | Equipment | Model No | Capacity (Ltr) | Ice Packs Capacity | Total No Of Model DE Freezer |
|---|---|---|---|---|---|
| 1 | DE FREEZER | H.B.D 116 | 97 LTRS | 150 | 59 |
| 2 | DE FREEZER | H.B.D 286 | 258 LTRS | 300 | 3 |
| 3 | DE FREEZER | M.F 114 | 97 LTRS | 150 | 20 |
| 4 | DE FREEZER | M.F 144 | 97 LTRS | 150 | 18 |
| 5 | DE FREEZER | M.F 314 | 258 LTRS | 300 | 4 |
| 6 | DE FREEZER | S.B 140 | 97 LTRS | 150 | 1 |
| TOTAL NO OF D/F | | | | | 105 |

| | | |
|---|---|---|
| 1 | D/F LARGE | 7 |
| 2 | D/F SMALL | 98 |

By and large, the arrangements and activities undertaken for covid is satisfactory

KPM 18/12/20

(K P Mohan Raj IAS)
Inspector General of Registration
& Commissioner of Stamps,
&
District Incharge Secretary,
Uttara Kannada district, Karwar

# ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಮಂಜೂರಿ/ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ವಿವರ

| ಕ್ರ ಸಂ | ವಿಧಾನಸಭಾ/ಪರಿಷತ್ ಕ್ಷೇತ್ರ | ವರ್ಷ | ಮಂಜೂರಿ ನೀಡಿದ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿದ ಕಾಮಗಾರಿಗಳ ಮೊತ್ತ | ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿ ಆಡಳಿತಾತ್ಮಕ ಮಂಜೂರಿ ನೀಡಿದ ಕಾಮಗಾರಿಗಳ ಮೊತ್ತ | ಆಡಳಿತಾತ್ಮಕ ಮಂಜೂರಿ ನೀಡಲು ಬಾಕಿ ಇರುವ ಕಾಮಗಾರಿಗಳ ಸಂಖ್ಯೆ | ಮಂಜೂರಿ ನೀಡಿದ ಆಡಳಿತಾತ್ಮಕ ಮಂಜೂರಿ ನೀಡಲು ಬಾಕಿ ಇರುವ ಕಾಮಗಾರಿಗಳ ಮೊತ್ತ | ಷರಾ |
|---|---|---|---|---|---|---|---|---|---|
| ೧ | ಕಾರವಾರ-ಅಂಕೋಲಾ | 2017-18 | 65 | 178.64 | 62 | 170.6387 | 3 | 8.0013 | |
| | | 2018-19 | 7 | 39.02 | 4 | 26.52 | 3 | 12.50 | |
| | | 2019-20 | 1 | 30.40 | 0 | 0.00 | 1 | 30.40 | |
| ೨ | ಕುಮಟಾ-ಹೊನ್ನಾವರ | 2017-18 | 40 | 155.57 | 32 | 128.43 | 8 | 27.14 | |
| | | 2018-19 | 44 | 149.52 | 34 | 119.37 | 10 | 30.15 | |
| | | 2019-20 | 12 | 33.37 | 12 | 33.37 | 0 | 0.00 | |
| ೩ | ಭಟ್ಕಳ-ಹೊನ್ನಾವರ | 2017-18 | 44 | 195.00 | 43 | 190.00 | 1 | 5.00 | |
| | | 2018-19 | 30 | 121.95 | 30 | 121.95 | 0 | 0.00 | |
| | | 2019-20 | 11 | 49.5 | 11 | 49.50 | 0 | 0.00 | |
| ೪ | ಶಿರಸಿ ಸಿದ್ದಾಪುರ | 2017-18 | 40 | 103.33 | 40 | 103.33 | 0 | 0.00 | |
| | | 2018-19 | 60 | 80.165 | 57 | 75.665 | 3 | 4.5 | |
| | | 2019-20 | 10 | 47.5 | 10 | 47.5 | 0 | 0.00 | |
| ೫ | ಮುಂಡಗೋಡ-ಬನವಾಸಿ | 2017-18 | 71 | 91.5 | 71 | 91.5 | 0 | 0.00 | |
| | | 2018-19 | 45 | 39.00 | 42 | 29.50 | 3 | 9.50 | |
| | | 2019-20 | 1 | 46.5 | 1 | 46.5 | 0 | 0.00 | |
| ೬ | ಹಳಿಯಾಳ-ಜೋಯಿಡಾ | 2017-18 | 25 | 146.55 | 21 | 124.05 | 0 | 22.50 | |
| | | 2018-19 | 29 | 153.19 | 26 | 136.09 | 0 | 17.10 | |
| | | 2019-20 | 7 | 41.64 | 7 | 41.64 | 0 | 0.00 | |
| 7 | ವಿಧಾನ ಪರಿಷತ್ ಸದಸ್ಯರು ಕಾರವಾರ | 2017-18 | 28 | 106.85 | 23 | 79.85 | 5 | 27.00 | ಮಂಜೂರಿ ನೀಡಿದ 64 ಕಾಮಗಾರಿಗಳಲ್ಲಿ 46 ಮಾತ್ರ ಆಡಳಿತಾತ್ಮಕ ಮಂಜೂರಿ ನೀಡಿದ್ದು 18 ಕಾಮಗಾರಿಗಳು ಬಾಕಿ ಇದ್ದು ಅವುಗಳಲ್ಲಿ 12 ಕಾಮಗಾರಿಗಳು ಈ ಕಾರ್ಯಾಲಯಕ್ಕೆ ಸ್ವೀಕೃತವಾಗಿದ್ದು ಚುನಾವಣೆ ನಿಮಿತ್ತ ಆಡಳಿತಾತ್ಮಕ ಅನುಮೋದನೆಗೆ ಬಾಕಿ ಇರುತ್ತವೆ. |
| | | 2018-19 | 29 | 126.25 | 17 | 79.75 | 12 | 46.50 | |
| | | 2019-20 | 7 | 28.00 | 6 | 23.00 | 1 | 5.00 | |
| | | ಒಟ್ಟು | 606 | 1963.445 | 549 | 1718.1537 | 50 | 245.2913 | |

| 2019–20 ನೇ ಸಾಲಿನ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳ ಪ್ರಗತಿ ಮಾಹಿತಿ | | | | | | |
|---|---|---|---|---|---|---|
| ಜಿಲ್ಲೆ:ಉತ್ತರ ಕನ್ನಡ | | | | | | |
| ಕ್ರ.ಸಂ | ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಭೌತಿಕ ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಷರಾ |
| 1 | ಉದ್ಯೋಗಿನಿ ಯೋಜನೆ | 85 | 33.18 | 47 | 36.72 | ಸಹಾಯಧನ ಬಿಡುಗಡೆ ಮಾಡಲು ಅನುದಾನದ ಕೊರತೆಯಿಂದಾಗಿ 24 ಫಲಾನುಭವಿಗಳ ಅರ್ಜಿಗಳು ಬಾಕಿ ಇರುತ್ತವೆ. ಹೆಚ್ಚುವರಿ ಅನುದಾನ ರೂ. 21,32,000/– ಅನುದಾನಕ್ಕಾಗಿ ಕೇಂದ್ರ ಕಚೇರಿಗೆ ಕೋರಲಾಗಿದೆ. |
| 2 | ಕಿರುಸಾಲ ಯೋಜನೆ | 6 | 12.00 | 6 | 11.30 | – |
| 3 | ಸಮೃದ್ಧಿ ಯೋಜನೆ | 107 | 10.70 | 93 | 9.30 | – |
| 4 | ಚೇತನ ಯೋಜನೆ | 8 | 5.56 | 7 | 4.52 | ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 08 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು 1 ಫಲಾನುಭವಿಯು ಇ.ಡಿ.ಪಿ ತರಬೇತಿಯನ್ನು ಪಡೆಯದ ಕಾರಣ ಕೇಂದ್ರಕಚೇರಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ. |
| 5 | ಧನಶ್ರೀ ಯೋಜನೆ | 10 | 5.07 | 8 | 4.06 | ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 10 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು 02 ಫಲಾನುಭವಿಗಳು ಇ.ಡಿ.ಪಿ ತರಬೇತಿಯನ್ನು ಪಡೆಯದ ಕಾರಣ ಕೇಂದ್ರಕಚೇರಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ. |
| 6 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | 5 | 2.53 | 1 | 0.50 | – |

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಕಾರವಾರ (ಉ.ಕ.)

Cell - 9980651542

## 2019–20ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯ ಬಳಕೆಯಾಗದ ಅನುದಾನದಡಿ ಸಾಧಿಸಿದ ಪ್ರಗತಿಯ ವಿವರ

| ಕ್ರ.ಸಂ | ಯೋಜನೆಯ ಹೆಸರು | ಪರಿಶಿಷ್ಟ ಜಾತಿ | | | | ಪರಿಶಿಷ್ಟ ಪಂಗಡ | | | | ಷರಾ |
|---|---|---|---|---|---|---|---|---|---|---|
| | | ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಗುರಿ | ಆರ್ಥಿಕ ಗುರಿ | ಭೌತಿಕ ಸಾಧನೆ | ಆರ್ಥಿಕ ಸಾಧನೆ | |
| 1 | ಉದ್ಯೋಗಿನಿ ಯೋಜನೆ | 5 | 17.53 | 5 | 0 | 2 | 7.01 | 2 | 0 | ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ಸಂಬಂಧಿಸಿದ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಮಂಜೂರಾತಿ ಬಂದ ನಂತರ ಸಹಾಯಧನ ಬಿಡುಗಡೆ ಮಾಡಲಾಗುವುದು. |
| 2 | ಕಿರುಸಾಲ ಯೋಜನೆ | 2 | 10.00 | 7 | 10.00 | 1 | 5.00 | 2 | 5.00 | – |
| 3 | ಸಮೃದ್ಧಿ ಯೋಜನೆ | 34 | 3.40 | 34 | 3.40 | 16 | 1.60 | 16 | 1.60 | – |

## ದಿನಾಂಕ:16-12-2020 ರಲ್ಲಿದ್ದಂತೆ ವಿದ್ಯಾರ್ಥಿ ನಿಲಯಗಳಿಗೆ ಹಾಜರಾದ ನೈಜ ವಿದ್ಯಾರ್ಥಿಗಳ ವಿವರ

ಜಿಲ್ಲೆ: ಉತ್ತರ ಕನ್ನಡ ಜಿಲ್ಲೆ

| ಕ್ರ.ಸಂ | ಪ್ರಾರಂಭಿಸಲಾದ ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ನೈಜವಾಗಿ ವಾಸ್ತವ್ಯವಿರುವ ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|
| 1 | 2 | 3 | 4 | 5. |
| 1 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕಾರವಾರ | 1 | 1 | |
| 2 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಕಾರವಾರ | 1 | 1 | |
| 3 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕುಮಟಾ | 2 | 2 | |
| 4 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಶಿರಸಿ | 23 | 23 | |
| 5 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಶಿರಸಿ | 15 | 15 | |
| 6 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಮುಂಡಗೋಡ | 1 | 1 | |
| | ಒಟ್ಟು | 43 | 43 | |

ಸಹಿ ಇದೆ/-

ಉಪನಿರ್ದೇಶಕರು

ಸಮಾಜ ಕಲ್ಯಾಣ ಇಲಾಖೆ

ಉತ್ತರಕನ್ನಡ ಜಿಲ್ಲೆ, ಕಾರವಾರ

ದಿನಾಂಕ:17-12-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಾರ್ಯನಿರ್ವಹಣ ಬಗ್ಗೆ ನಡೆಸಿದ ಸಭೆಯ ವರದಿ.

1) ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು 42 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ ಇಲಾಖಾವಾರು ವಿದ್ಯಾರ್ಥಿನಿಲಯಗಳ ವಿವರ ಈ ಕೆಳಗಿನಂತಿರುತ್ತದೆ.
   - ಸಮಾಜ ಕಲ್ಯಾಣ ಇಲಾಖೆ – 06 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
   - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – 33 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
   - ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – 03 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು
2) ಎಲ್ಲಾ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳನ್ನು ಉನ್ನತ ಶಿಕ್ಷಣ ಇಲಾಖೆ ದಿನಾಂಕ:09-11-2020 ರ ಆದೇಶದಂತೆ ದಿನಾಂಕ:17-11-2020 ರಿಂದಲೇ ಪ್ರಾರಂಭ ಮಾಡಲಾಗಿರುತ್ತದೆ.
3) ಇದುವರೆಗೂ ಸದರಿ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಈ ಕೆಳಗಿನಂತೆ ಕೇವಲ ಅಂತಿಮ ವರ್ಷದಲ್ಲಿ ಪದವಿ/ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.
   - ಸಮಾಜ ಕಲ್ಯಾಣ ಇಲಾಖೆ – 43 ಮೆಟ್ರಿಕ್ ನಂತರ ವಿದ್ಯಾರ್ಥಿಗಳು
   - ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ – 414 ಮೆಟ್ರಿಕ್ ನಂತರ ವಿದ್ಯಾರ್ಥಿಗಳು
   - ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – ಯಾರೂ ಇರುವುದಿಲ್ಲ.
4) ಮೂರು ಇಲಾಖೆಗಳ ವಿದ್ಯಾರ್ಥಿನಿಲಯಗಳನ್ನು ಸರ್ಕಾರ ಹೊರಡಿಸಿರುವ ಪ್ರಮಾಣಿತ ಕಾರ್ಯಾಚರಣೆಯ ವಿಧಾನದಂತೆ ಪ್ರಾರಂಭಿಸಿರುತ್ತಾರೆ. ಎಲ್ಲಾ ವಿದ್ಯಾರ್ಥಿನಿಲಯದಲ್ಲಿ ಕಡ್ಡಾಯವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುತ್ತಿರುವ ಬಗ್ಗೆ ವರದಿ ಸಲ್ಲಿಕೆಯಾಗಿರುತ್ತದೆ.
5) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ಕೊಠಡಿಯಲ್ಲಿ ಗರಿಷ್ಟ 03 ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಲಾಗಿರುತ್ತದೆ.
6) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆ ಸುಮಾರು 3900 ಇದ್ದು, ಇದುವರೆಗೂ ಕೇವಲ 457 ವಿದ್ಯಾರ್ಥಿಗಳು ಮಾತ್ರ ದಾಖಲಾಗಿರುವುದರಿಂದ ಸಾಮಾಜಿಕ ಅಂತರ ಕಾಯ್ದುಕೊಂಡು, ನಿಲಯಗಳಲ್ಲಿ ಶುಚಿತ್ವ ಕಾಪಾಡಿಕೊಂಡು ನಿರ್ವಹಣೆ ಮಾಡುತ್ತಿದ್ದು, ಸದರಿ ನಿರ್ವಹಣೆಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ.
7) ಬಾಡಿಗೆ ಕಟ್ಟಡದಲ್ಲಿಯೂ ಸಹ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕಡಿಮೆ ಇರುವುದರಿಂದ SOP ಅನ್ವಯ ಕಾರ್ಯನಿರ್ವಹಣೆ ಮಾಡುವುದು ಸುಲಭ ಸಾಧ್ಯವಾಗಿದೆ.
8) ಸದರಿ ವಿದ್ಯಾರ್ಥಿನಿಲಯಗಳಲ್ಲಿ ಅಡುಗೆ ಕೋಣೆ ಹಾಗೂ ಊಟದ ತಯಾರಿಕೆಯಲ್ಲಿಯೂ ಸಹ ಸಂಬಂಧಪಟ್ಟ ಆಡಳಿತ ಇಲಾಖೆಗಳು ಹೊರಡಿಸಿರುವ SOP ಅನ್ವಯ ಎಲ್ಲಾ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.
9) ದಾಖಲಾದ ಎಲ್ಲಾ ವಿದ್ಯಾರ್ಥಿಗಳಿಗೆ ಕುಡಿಯಲು ಬಿಸಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.
10) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಪ್ರತ್ಯೇಕವಾಗಿ Isolation ಕೊಠಡಿಯ ವ್ಯವಸ್ಥೆಯನ್ನು ಕಲ್ಪಿಸಲಾಗಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲಾಗಿರುತ್ತದೆ.
11) ಮುಖ್ಯವಾಗಿ ವಿದ್ಯಾರ್ಥಿನಿಲಯಗಳಲ್ಲಿನ ಶೌಚಾಲಯಗಳನ್ನು SOP ಅನ್ವಯ ನಿಯಮಿತವಾಗಿ ಸ್ವಚ್ಛಗೊಳಿಸುತ್ತಿರುವ ಬಗ್ಗೆ ದೃಢಪಡಿಸಿಕೊಳ್ಳಲಾಗಿರುತ್ತದೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಮಾರ್ಗಸೂಚಿಯನುಸಾರ ಪ್ರವೇಶ ಕಲ್ಪಿಸಿರುವ ಬಗ್ಗೆ

| ಕ್ರ.ಸಂ | ತಾಲೂಕು | ದಿನಾಂಕ: 17.12.2020 | |
|---|---|---|---|
| | | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ನೈಜವಾಗಿ ವಾಸ್ತವ್ಯವಿರುವ ವಿದ್ಯಾರ್ಥಿಗಳ ಸಂಖ್ಯೆ |
| 1 | ಕಾರವಾರ | 73 | 73 |
| 2 | ಅಂಕೋಲಾ | 2 | 2 |
| 3 | ಕುಮಟಾ | 5 | 5 |
| 4 | ಹೊನ್ನಾವರ | 17 | 17 |
| 5 | ಭಟ್ಕಳ | 3 | 3 |
| 6 | ಶಿರಸಿ | 39 | 39 |
| 7 | ಸಿದ್ದಾಪುರ | 50 | 50 |
| 8 | ಯಲ್ಲಾಪುರ | 9 | 9 |
| 9 | ಮುಂಡಗೋಡ | 17 | 17 |
| 10 | ಹಳಿಯಾಳ | 195 | 195 |
| 11 | ಜೋಯಿಡಾ | 4 | 4 |
| | ಒಟ್ಟು | 414 | 414 |

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಉತ್ತರಕನ್ನಡ, ಕಾರವಾರ

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ

ದೂರವಾಣಿ : 08539 – 220844 ಫ್ಯಾಕ್ಸ್ : 221235 ಇ-ಮೇಲ್ : dco.koppal@gmail.com

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು, ಕೊಪ್ಪಳ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ 2021ರ ಸಂಬಂಧ ವಿವಿಧ ಅಧಿಕಾರಿಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯ ನಡವಳಿಗಳು

ಹಾಜರಿದ್ದವರು:

1. ಶ್ರೀಮತಿ ರಶ್ಮಿ ವಿ. ಮಹೇಶ ಭಾ.ಆ.ಸೇ, ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು, ಕೊಪ್ಪಳ ಜಿಲ್ಲೆ
2. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಕೊಪ್ಪಳ ಜಿಲ್ಲೆ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ
4. ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ
5. ಸಹಾಯಕ ಆಯುಕ್ತರು ಹಾಗೂ ಮತದಾರರ ನೊಂದಣಾಧಿಕಾರಿಗಳು, ಕೊಪ್ಪಳ
6. ತಹಶೀಲ್ದಾರರು ಕುಷ್ಟಗಿ/ಕನಕಗಿರಿ/ಕಾರಟಗಿ/ಗಂಗಾವತಿ/ಯಲಬುರ್ಗಾ/ಕುಕನೂರು/ಕೊಪ್ಪಳ
7. ಹಾಜರಾತಿ ಪುಸ್ತಕದಲ್ಲಿದ್ದಂತೆ

*****

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಕೊಪ್ಪಳ ಇವರು ದಿನಾಂಕ:01.01.2021ರ ಅರ್ಹತಾ ದಿನಾಂಕದ ಆಧಾರದ ಮೇಲೆ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಪ್ರಗತಿ ಪರಿಶೀಲನೆ ಸಭೆಗೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು ಕೊಪ್ಪಳ ಜಿಲ್ಲೆ ಇವರನ್ನು ಮತ್ತ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ಕೊಪ್ಪಳ ಇವರು ಮತದಾರರ ಪಟ್ಟಿ ಪರಿಷ್ಕರಣೆ 2021ರ ಸಂಬಂಧ ಭಾರತ ಚುನಾವಣಾ ಆಯೋಗವು ನೀಡಿರುವ ವೇಳಾಪಟ್ಟಿಯನ್ನು ಸಭೆಗೆ ತಿಳಿಸಿದರು.

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು ಮಾತನಾಡಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಜಿಲ್ಲೆಯ ಎಲ್ಲಾ ಮತಗಟ್ಟೆಗಳಿಗೆ ಬೂತ್ ಮಟ್ಟದ ಏಜೆಂಟರನ್ನು ನೇಮಿಸುವಂತೆ ಮತ್ತು ಬೂತ್ ಮಟ್ಟದ ಅಧಿಕಾರಿಗಳ ಸಹಯೋಗದೊಂದಿಗೆ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ಮತದಾರರ ಸೇರ್ಪಡೆಗೊಳಿಸಲು ಮತ್ತು ಖಾಯಂ ಸ್ಥಳಾಂತರಗೊಂಡ/ಮರಣ ಹೊಂದಿದ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಮತ್ತು ಮತದಾರರ ವಿವರಗಳಲ್ಲಿನ ದೋಷಗಳನ್ನು ಸರಿಪಡಿಸಿ, ಶುದ್ಧವಾದ ಮತದಾರರ ಪಟ್ಟಿಯನ್ನು ತಯಾರಿಸುವಲ್ಲಿ ಸಹಕರಿಸಲು ಕೋರಿದರು.

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು ಪ್ರತಿವಾರ ಸ್ವೀಕೃತವಾದ ಹಕ್ಕು ಮತ್ತು ಆಕ್ಷೇಪಣೆಗಳ ಪಟ್ಟಿಯನ್ನು ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳಿಗೆ ನೀಡುವಂತೆ ಮತ್ತು ಪ್ರತಿವಾರ ರಾಜಕೀಯ ಪಕ್ಷಗಳ ಸಭೆ ನಡೆಸಿ ಸ್ವೀಕೃತವಾದ ಅರ್ಜಿಗಳ ಬಗ್ಗೆ ಮಾಹಿತಿಯನ್ನು ನೀಡಲು ಮತ್ತು ರಾಜಕೀಯ ಪಕ್ಷಗಳ ಸಲಹೆಗಳನ್ನು ಪಡೆಯಲು ಮತದಾರರ ನೊಂದಣಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

Scanned with CamScanner

ಭಾರತೀಯ ಜನತಾ ಪಕ್ಷದ ಪ್ರತಿನಿಧಿ ಮಾತನಾಡಿ ಹಲವಾರು ಮತದಾರರು ಆಯಾ ಮತಗಟ್ಟೆಯ ಸಾಮಾನ್ಯ ನಿವಾಸಿಗಳಾಗಿರದೇ ಬೇರೆ ಕಡೆ ವಾಸವಿದ್ದರೂ, ಖಾಯಂ ಸ್ಥಳಾಂತರಗೊಂಡಿದ್ದರೂ ಮತ್ತು ಮರಣ ಹೊಂದಿದ್ದರೂ ಅಂತಹ ಹಲವಾರು ಹೆಸರುಗಳು ಮತದಾರರ ಪಟ್ಟಿಯಲ್ಲಿ ಇರುತ್ತವೆ ಮತ್ತು ಸದರಿ ಹೆಸರುಗಳನ್ನು ತೆಗೆದುಹಾಕಲು ಕ್ರಮ ಜರುಗಿಸಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು ಇವರು ಮತದಾರರ ನೊಂದಣಾಧಿಕಾರಿಗಳಿಗೆ ಮತ್ತು ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ಈ ಬಗ್ಗೆ ಲಿಖಿತವಾಗಿ ಅರ್ಜಿಯನ್ನು ಪಡೆದು, ಇಂತಹ ಪ್ರಕರಣಗಳಿದಲ್ಲಿ ಆದ್ಯತೆಯ ಮೇರೆಗೆ ಸ್ಥಳ ಪರಿಶೀಲನೆ ಮಾಡಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದರು.

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮತದಾರರ ಪಟ್ಟಿ ವೀಕ್ಷಕರು ಇವರು ಕೊಪ್ಪಳ ಜಿಲ್ಲೆಯ 62-ಗಂಗಾವತಿ, 61-ಕನಕಗಿರಿ ಮತ್ತು 64-ಕೊಪ್ಪಳ ವಿಧಾನಸಭಾ ಕ್ಷೇತ್ರಗಳ ಹಲವು ಮತಗಟ್ಟೆಗಳಿಗೆ ಆಕಸ್ಮಿಕವಾಗಿ ಭೇಟಿ ನೀಡಿ ಬೂತ್ ಮಟ್ಟದ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಮತ್ತು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಸಂಬಂಧ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದರು ಮತ್ತು ಕೆಲವು ನ್ಯೂನ್ಯತೆಗಳನ್ನು ಗುರುತಿಸಿ, ಮತದಾರರ ನೊಂದಣಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರರು ಸದರಿ ನ್ಯೂನ್ಯತೆಗಳನ್ನು ಸರಿಪಡಿಸಲು ಮತ್ತು ಕೆಳಗಿನಂತೆ ಕ್ರಮ ಕೈಗೊಳ್ಳಲು ನಿರ್ದೇಶನಗಳನ್ನು ನೀಡಿದರು.

1. ಮತದಾರರ ಪಟ್ಟಿ ಪರಿಷ್ಕರಣೆ 2021ರ ಸಂಬಂಧ ಸಾರ್ವಜನಿಕರಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು.
2. ಜಿಲ್ಲಾಧಿಕಾರಿಗಳ ಕಛೇರಿಯಿಂದ ನೀಡಿದ ಬಿ.ಎಲ್.ಓ ಕಿಟ್‌ಗಳನ್ನು ಮತ್ತು ಬಿ.ಎಲ್.ಓ ರೆಜಿಸ್ಟರ್‌ಗಳನ್ನು ತಪ್ಪದೇ ನಿರ್ವಹಿಸುವುದು.
3. ಎಲ್ಲಾ ಬಿ.ಎಲ್.ಓಗಳಿಗೆ ಅವರು ನಿರ್ವಹಿಸಬೇಕಾದ ಕಾರ್ಯಗಳ ಪಟ್ಟಿಯನ್ನು ತಯಾರಿಸಿ ನೀಡುವುದು.
4. ಎಲ್ಲಾ ಬೂತ್ ಮಟ್ಟದ ಅಧಿಕಾರಿಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ನಮೂನೆ-6, 7, 8 ಮತ್ತು 8ಎಗಳನ್ನು ಒದಗಿಸುವುದು.
5. ಎಲ್ಲಾ ಬೂತ್ ಮಟ್ಟದ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಬರುವ ಮತದಾರರ ಮನೆ-ಮನೆಗೆ ಭೇಟಿ ನೀಡಿ, ಹೊಸದಾಗಿ ಸೇರ್ಪಡೆ, ಮರಣ ಹೊಂದಿದ/ಖಾಯಂ ಸ್ಥಳಾಂತರಗೊಂಡ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಕ್ರಮವಹಿಸುವುದು.
6. ಬೂತ್ ಮಟ್ಟದ ಅಧಿಕಾರಿಗಳು ತಮ್ಮ ಮತಗಟ್ಟೆಯ ಮತದಾರರ ಪಟ್ಟಿಯಲ್ಲಿನ ಎಲ್ಲಾ ಮತದಾರರ ಮನೆ-ಮನೆಗೆ ಭೇಟಿ ನೀಡಿ ಅಗತ್ಯ ನಮೂನೆಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುವುದು.
7. ಬೂತ್ ಮಟ್ಟದ ಅಧಿಕಾರಿಗಳು ಬೂತ್ ಮಟ್ಟದ ಏಜೆಂಟರುಗಳಿಗೆ ಅಗತ್ಯ ಸಹಕಾರ ನೀಡಲು ಸೂಕ್ತ ನಿರ್ದೇಶನಗಳನ್ನು ನೀಡುವುದು.
8. ~~ಪ್ರತಿವಾರ ಬೂತ್ ಮಟ್ಟದ ಅಧಿಕಾರಿಗಳಿಗೆ ನಮೂನೆಗಳನ್ನು ಸ್ವೀಕರಿಸಲು ಗುರಿ ನಿಗದಿಪಡಿಸುವುದು.~~

ಈಗಾಗಲೇ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲು ನಿಗದಿಪಡಿಸಲಾದ ಅವಧಿಯಲ್ಲಿ ಶೇ.50 ರಷ್ಟು ಅವಧಿ ಮುಕ್ತಾಯವಾಗಿದ್ದು ಉಳಿದ ಅವಧಿಯೊಳಗಡೆ ನಿರೀಕ್ಷಿತ ಮಟ್ಟದ ಪ್ರಗತಿಯನ್ನು ಸಾಧಿಸುವಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮತದಾರರ ನೊಂದಣಾಧಿಕಾರಿಗಳಿಗೆ ಹಾಗೂ ತಹಶೀಲ್ದಾರರಿಗೆ ಸೂಚಿಸಿದರು.

Scanned with CamScanner

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಎಲ್ಲಾ ಅಗತ್ಯ ಸಹಕಾರ ನೀಡಲು ಮತ್ತು ಭಾರತ ಚುನಾವಣಾ ಆಯೋಗದ ಉದ್ದೇಶಿತ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜಕೀಯ ಪಕ್ಷಗಳ ಪ್ರತಿನಿಧಿಗನ್ನು ಕೋರಲಾಯಿತು. ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಚುನಾವಣಾಧಿಕಾರಿಗಳು
ಕೊಪ್ಪಳ

ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ
ಮತದಾರರ ಪಟ್ಟಿ ವೀಕ್ಷಕರು, ಕೊಪ್ಪಳ ಜಿಲ್ಲೆ

ಸಂ:ಕಂದಾಯ:ಚುನಾವಣೆ:15:2020-21

ದಿನಾಂಕ:04-12-2020

ಪ್ರತಿಯನ್ನು:

1. ಮಾನ್ಯ ಮುಖ್ಯ ಚುನಾವಣಾಧಿಕಾರಿಗಳು ಕರ್ನಾಟಕ ಹಾಗೂ ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿ.ಆ.ಸು.ಇ (ಚುನಾವಣೆಗಳು), ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, #02, ನೆಲಮಹಡಿ, ವಿಕಾಸಸೌಧ, ಬೆಂಗಳೂರು ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಸಹಾಯಕ ಆಯುಕ್ತರು ಹಾಗೂ ಮತದಾರರ ನೊಂದಣಾಧಿಕಾರಿಗಳು, ಕೊಪ್ಪಳ ಇವರಿಗೆ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ತಹಶೀಲ್ದಾರರು ಕುಷ್ಟಗಿ/ಕನಕಗಿರಿ/ಕಾರಟಗಿ/ಗಂಗಾವತಿ/ಯಲಬುರ್ಗಾ/ಕುಕನೂರು/ಕೊಪ್ಪಳ
6. ಅಧ್ಯಕ್ಷರು, ಭಾರತೀಯ ಜನತಾ ಪಕ್ಷ, ಜಿಲ್ಲಾ ಘಟಕ, ಕೊಪ್ಪಳ.
7. ಅಧ್ಯಕ್ಷರು, ಇಂಡಿಯನ್ ನ್ಯಾಷನಲ್, ಕಾಂಗ್ರೆಸ್, ಜಿಲ್ಲಾ ಘಟಕ, ಕೊಪ್ಪಳ
8. ಅಧ್ಯಕ್ಷರು, ಬಹುಜನ ಸಮಾಜ ಪಕ್ಷ, ಕೊಪ್ಪಳ ಜಿಲ್ಲಾ ಘಟಕ, ಕೊಪ್ಪಳ.
9. ಕಾರ್ಯದರ್ಶಿಗಳು, ಭಾರತೀಯ ಕಮ್ಯುನಿಸ್ಟ್ ಪಾರ್ಟಿ, ಜಿಲ್ಲಾ ಘಟಕ ಕೊಪ್ಪಳ.
10. ಕಾರ್ಯದರ್ಶಿಗಳು, ಭಾರತೀಯ ಕಮ್ಯುನಿಸ್ಟ್ ಪಾರ್ಟಿ [ಮಾರ್ಕಿಸ್ಟ್], ಜಿಲ್ಲಾ ಘಟಕ ಕೊಪ್ಪಳ.
11. ಅಧ್ಯಕ್ಷರು, ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ, ಜಿಲ್ಲಾ ಘಟಕ ಕೊಪ್ಪಳ.
12. ಅಧ್ಯಕ್ಷರು, ಜನತಾದಳ (ಜಾತ್ಯಾತೀತ), ಜಿಲ್ಲಾ ಘಟಕ ಕೊಪ್ಪಳ.

Scanned with CamScanner

ಡಾ: ಶಾಲಿನಿ ರಜನೀಶ್, IAS., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ದಿನಾಂಕ: 09-12-2020 ರಂದು ಮಧ್ಯಾಹ್ನ 12.00 ಗಂಟೆಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳೊಂದಿಗೆ ನಡೆಸಿದ ವಿಡಿಯೋ ಸಂವಾದದ ಟಿಪ್ಪಣಿ

*****

| ಕ್ರ.ಸಂ. | ಚರ್ಚಿಸಿದ ವಿಷಯಗಳು | ಸೂಚನೆಗಳು | ಕ್ರಮವಹಿಸಬೇಕಾದ ಅಧಿಕಾರಿ |
|---|---|---|---|
| I | <u>ಕೋವಿಡ್ ವಿಷಯ</u><br>1. ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ರವರ ಪತ್ರದಂತೆ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಆದೇಶದಂತೆ SOP ಯಲ್ಲಿನ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ | ಕಾಲೇಜುಗಳನ್ನು ಪುನರಾರಂಭಗೊಳಿಸುವ ನಿಟ್ಟಿನಲ್ಲಿ ಕೋವಿಡ್ ಮುಂಜಾಗ್ರತಾ ಕ್ರಮದ ಬಗ್ಗೆ ತಿಳಿಸಿರುವ SOP ಯಂತೆ ಜಿಲ್ಲೆಯಲ್ಲಿ ಸೂಕ್ತ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳುವಂತೆ ಸೂಚಿಸಲಾಯಿತು. | 1. ಜಿಲ್ಲಾಧಿಕಾರಿ<br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ,<br>3. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ |
| | 2. ಕೋವಿಡ್ ಪರೀಕ್ಷೆ ಹಾಗೂ ನಿಯಂತ್ರಣ ಕ್ರಮದ ಕುರಿತು | • ಜಿಲ್ಲೆಯಲ್ಲಿ ಈವರೆವಿಗೆ 1,73,543 ಪ್ರಕರಣಗಳಲ್ಲಿ ಕೋವಿಡ್ ಪರೀಕ್ಷೆ ಕೈಗೊಂಡಿದ್ದು, ಆ ಪೈಕಿ 13372 ಕೋವಿಡ್ ಸೋಂಕಿತರೆಂದು ದೃಢಪಡಿಸಿದ್ದು, 503 ಪ್ರಕರಣಗಳಲ್ಲಿ ಪ್ರಯೋಗಾಲಯ ಪರೀಕ್ಷಾ ವರದಿಗೆ ಬಾಕಿ ಇರುವುದನ್ನು ವಿಮರ್ಶಿಸಲಾಯಿತು.<br>• ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಹಣ್ಣು ಬಿಡಿಸುವ ಪ್ರಕ್ರಿಯೆ ಇರುವುದರಿಂದ ಈ ಕೆಲಸಕ್ಕೆ ಮಹಾರಾಷ್ಟ್ರ, ಅಸ್ಸಾಂ, ಪಶ್ಚಿಮ ಬಂಗಾಳ ರಾಜ್ಯಗಳಿಂದ ಹಾಗೂ ಬಳ್ಳಾರಿ ಜಿಲ್ಲೆಯಿಂದ ಕಾರ್ಮಿಕರು ಬರುವುದಾಗಿದ್ದು, ಅದೇ | 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ,<br>2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ<br>3. ಜಿಲ್ಲಾ ಸರ್ಜನ್<br>4. ಜಿಲ್ಲಾ ಸರ್ವೇಕ್ಷಣಾಧಿಕಾರಿ, ಜಿಲ್ಲಾ ಆಸ್ಪತ್ರೆ |

| | | | |
|---|---|---|---|
| | | ರೀತಿ ಪ್ರವಾಸಿಗರು ಸಾಕಷ್ಟು ಸಂಖ್ಯೆಯಲ್ಲಿ ಹೊರಗಿನಿಂದ ಬರುವುದರಿಂದ, ಕಾಫಿ ತೋಟಗಳಲ್ಲಿ ಹಾಗೂ ಹೋಟೆಲ್/ರೆಸಾರ್ಟ್/ಹೋಂ ಸ್ಟೇಗಳಲ್ಲಿ ಕಡ್ಡಾಯವಾಗಿ ಕೋವಿಡ್ ಪರೀಕ್ಷಾ ಕ್ರಮವನ್ನು ಕೈಗೊಂಡು, ಹರಡುವಿಕೆಯನ್ನು ನಿಯಂತ್ರಿಸುವ ಕ್ರಮವಹಿಸಲು ಸೂಚಿಸಲಾಯಿತು.<br>• ಕೋವಿಡ್ ಪರೀಕ್ಷೆಗೆ ಸಂಬಂಧಿಸಿದಂತೆ ಜನನಿಬಿಡ ಪ್ರದೇಶಗಳಾದ ಮಾರುಕಟ್ಟೆ, ಹೋಟೆಲ್, ರಸ್ತೆ ಬದಿ ವ್ಯಾಪಾರ ಪ್ರದೇಶಗಳಲ್ಲಿ ನಿರಂತರವಾಗಿ ಕೋವಿಡ್ ಪರೀಕ್ಷಾ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>• ಸೋಂಕಿತ ಪ್ರಕರಣಗಳು ಹೆಚ್ಚಾಗುತ್ತಿರುವ ಪ್ರದೇಶವನ್ನು ಪತ್ತೆ ಹಚ್ಚಿ, Cluster ಆಗಿ ಗುರುತಿಸುವುದು. | |
| | 3. ಲಸಿಕೆ ಹಾಕುವ ಪ್ರಕ್ರಿಯೆ | ಕೋವಿಡ್ ಚಿಕಿತ್ಸಾ ಸಂಬಂಧದ ಲಸಿಕೆ ಹಾಕುವ ವಿಚಾರದಲ್ಲಿ ಚುನಾವಣಾ ಮತಗಟ್ಟೆಗಳ ಹಂತದಲ್ಲಿ ಸೂಕ್ತ ಸ್ಥಳಗಳನ್ನು ಗುರುತಿಸಿ, ಲಸಿಕೆಯನ್ನು ಸೂಕ್ತಾನುಸಾರ ಹಾಕುವ ಬಗ್ಗೆ ಯೋಜನೆ ರೂಪಿಸಲು ಸೂಚಿಸಲಾಯಿತು. | 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ,<br>2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ<br>3. ಜಿಲ್ಲಾ ಸರ್ಜನ್<br>4. ಜಿಲ್ಲಾ ಸರ್ವೇಕ್ಷಣಾಧಿಕಾರಿ, ಜಿಲ್ಲಾ ಆಸ್ಪತ್ರೆ |
| | 4. Contact Tracing ಬಗ್ಗೆ | ಕೋವಿಡ್ ಸೋಂಕಿತ ಪ್ರಕರಣಗಳ ಸಂಪರ್ಕ ಮಾಹಿತಿಯನ್ನು ಸಂಗ್ರಹಿಸುವ ಬಗ್ಗೆ ಆರೋಗ್ಯ ಹಾಗೂ ಪೊಲೀಸ್ ಇಲಾಖಾ ಸಿಬ್ಬಂದಿಗಳ ಸಹಕಾರದೊಂದಿಗೆ ಪರಿಣಾಮಕಾರಿಯಾಗಿ ಸಂಪರ್ಕಿತರ ಮಾಹಿತಿಯನ್ನು ಸಂಗ್ರಹಿಸಲು ಸೂಚಿಸಲಾಯಿತು. | 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು<br>2. ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು<br>3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಚಿಕ್ಕಮಗಳೂರು |

| | | | |
|---|---|---|---|
| | 5. ALS ಆಂಬುಲೆನ್ಸ್ ಗಳನ್ನು ಖರೀದಿಸುವ ಬಗ್ಗೆ | ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೆ ಆಂಬುಲೆನ್ಸ್ ಖರೀದಿಸಲು ಅವಕಾಶ ಇರುವುದರಿಂದ ಅದರಂತೆ ಖರೀದಿಸುವ ಕ್ರಮವಹಿಸಲು ಸೂಚಿಸಲಾಯಿತು. | ಜಿಲ್ಲಾಧಿಕಾರಿ, ಚಿಕ್ಕಮಗಳೂರು |
| | 6. ಕಡ್ಡಾಯ ಮಾಸ್ಕ್ ಧರಿಸುವಿಕೆ | ಜನನಿಬಿಡ ಪ್ರದೇಶಗಳಲ್ಲಿ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಾಪಾಡುವ ಬಗ್ಗೆ ಸೂಕ್ತ ನಿಗಾ ವಹಿಸಿ ಕಡ್ಡಾಯವಾಗಿ ಈ ಅಂಶಗಳನ್ನು ಪಾಲಿಸುವ ಕ್ರಮವಹಿಸಲು ಸೂಚಿಸಲಾಯಿತು. | ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಮಗಳೂರು |
| II | ಅವಲೋಕನ ತಂತ್ರಾಂಶ | ಯೋಜನಾ ಇಲಾಖೆಯಿಂದ ಅವಲೋಕನ ಎಂಬ ತಂತ್ರಾಂಶವನ್ನು ರೂಪಿಸಿ ಜಾರಿಗೊಳಿಸಿದ್ದು, ಈ ತಂತ್ರಾಂಶದಲ್ಲಿ ರಾಜ್ಯ ಸರ್ಕಾರದ ಅನುದಾನ ವಿನಿಯೋಗಿಸಲು ಎಲ್ಲಾ ಅಧಿಕಾರಿಗಳು ಕಛೇರಿಗಳ ವಿವರವನ್ನು ತಂತ್ರಾಂಶದಲ್ಲಿ Mapping ಮಾಡಲಾಗುವುದೆಂದು ಆ ಪ್ರಕಾರ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಸುಮಾರು 150 ವಿವಿಧ ಯೋಜನೆಗಳಿದ್ದು, ಈ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ವಿವಿಧ ಪ್ರಾಧಿಕಾರಿಗಳು ಅನುಷ್ಠಾನ ಗೊಳಿಸುವರೆಂದು, ಅಂತಹ ಎಲ್ಲಾ ಯೋಜನೆಗಳ ಅನುದಾನ ಬಳಕೆ ಹಾಗೂ ಪ್ರಗತಿ ಮಾಹಿತಿಯನ್ನು ಈ ತಂತ್ರಾಂಶದಲ್ಲಿ ಅಳವಡಿಸಿ ಪ್ರಗತಿ ಗಮನಿಸಲಾಗುವುದೆಂದು, ಆದ ಕಾರಣ ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯ್ತಿ ರವರು ತಂತ್ರಾಂಶದ ಪೂರ್ಣ ಮಾಹಿತಿಯನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಯೋಜನಾಧಿಕಾರಿ ಮೂಲಕ ಪಡೆದು ಅದರಂತೆ ಇನ್ನು ಮುಂದೆ ಪ್ರಗತಿ ವಿಮರ್ಶಿಸಲು ಸೂಚಿಸಲಾಯಿತು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯ್ತಿ |

| | | | |
|---|---|---|---|
| III | ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ | ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಒಟ್ಟು ರೂ.1377.62 ಲಕ್ಷ ಬಾಕಿ ಇರುತ್ತದೆ.<br>1) 2 ವರ್ಷ ಮೇಲ್ಪಟ್ಟ ಕಾಮಗಾರಿಗಳು ಈವರೆವಿಗೂ ಅನುಷ್ಠಾನಗೊಳ್ಳದೇ ಇದ್ದಲ್ಲಿ ಕೂಡಲೇ ರದ್ದುಪಡಿಸಿ, ಸದರಿ ಕಾಮಗಾರಿಗಳ ಅನುದಾನವನ್ನು ಏಜೆನ್ಸಿಯಿಂದ ಹಿಂಪಡೆದು, ಸದರಿ ಹಿಂಪಡೆದ ಮೊತ್ತವನ್ನು ongoing ಕಾಮಗಾರಿಗಳಿಗೆ ಬಳಸಿಕೊಳ್ಳಲು ಸೂಚಿಸಲಾಯಿತು.<br>2) 2019-20ನೇ ಸಾಲಿನಲ್ಲಿ ಅನುಮೋದಿಸಿರುವ ಕ್ರಿಯಾ ಯೋಜನೆಗೆ ಅನುಗುಣವಾಗಿ ಏಜೆನ್ಸಿಗಳಿಂದ ಅಂದಾಜು ಪಡೆದು ಆಡಳಿತ ಮಂಜೂರಿ ನೀಡಿ, ಶೇಕಡ 75 ಹಣವನ್ನು ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಾಕಿ ಶೇಕಡ 25 ಹಣವನ್ನು ತ್ವರಿತವಾಗಿ ಏಜೆನ್ಸಿಗಳಿಗೆ ಬಿಡುಗಡೆ ಮಾಡಲು ಸೂಚಿಸಲಾಯಿತು.<br>3) 2020-21ನೇ ಸಾಲಿನಲ್ಲಿ ಎರಡನೇ ಕಂತಿನಲ್ಲಿ ಬಿಡುಗಡೆಗೊಂಡ ಅನುದಾನಕ್ಕೆ ಕೂಡಲೇ ಕ್ರಿಯಾಯೋಜನೆ ಅನುಮೋದಿಸುವುದು.<br>4) 2019-20ನೇ ಸಾಲಿನಲ್ಲಿ ಅನುಮೋದನೆ ನೀಡುವ ಕಾಮಗಾರಿಗಳಿಗೆ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಮೊತ್ತವನ್ನು ಬಳಸಿಕೊಂಡು ಕಾಮಗಾರಿ ಅನುಷ್ಠಾನ ಗೊಳಿಸಲು ಸೂಚಿಸಿದೆ. | 1. ಜಿಲ್ಲಾಧಿಕಾರಿ<br>2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, |
| IV | ಅತಿವೃಷ್ಟಿ ಮನೆಗಳ ಹಾನಿ ಬಗ್ಗೆ | 2019-20ನೇ ಸಾಲಿನ ಅತಿವೃಷ್ಟಿಯಿಂದ ಹಾನಿಗೊಂಡು ಮನೆಗಳ ಸಂತ್ರಸ್ಥರಿಗೆ ಪರಿಹಾರ ನೀಡುವ ಕುರಿತಂತೆ ಜಿಲ್ಲೆಯಲ್ಲಿ A ಮತ್ತು B ವರ್ಗದ ಒಟ್ಟು 84 ಮನೆಗಳು ಈವರೆವಿಗೂ ಪುನರ್ ನಿರ್ಮಾಣ/ಪ್ರಾರಂಭವಾಗದೆ ಇರುವುದನ್ನು ಕೂಡಲೇ ಪ್ರಾರಂಭಿಸಲು ಸೂಚಿಸಲಾಯಿತು. | ಜಿಲ್ಲಾಧಿಕಾರಿ |

| | | | |
|---|---|---|---|
| | | 2020-21ನೇ ಸಾಲಿನಲ್ಲಿ ಡಾಟಾ ಎಂಟ್ರಿ ಪೂರ್ಣಗೊಂಡಿರುವ ಪ್ರಕರಣಗಳಲ್ಲಿ ಕೂಡಲೇ ಪರಿಹಾರವನ್ನು ಪಾವತಿಸುವ ಕ್ರಮವಹಿಸಲು ಸೂಚಿಸಲಾಯಿತು. | |
| V | ಜಿಲ್ಲಾ ಪಂಚಾಯಿತಿ ಆಯವ್ಯಯದ ಕ್ರಿಯಾಯೋಜನೆ | ಜಿಲ್ಲಾ ಪಂಚಾಯಿತಿಯ ಕ್ರಿಯಾ ಯೋಜನೆಯನ್ನು ಡಿಸೆಂಬರ್ ಅಂತ್ಯದೊಳಗೆ ಅನುಮೋದನೆ ಮಾಡಿ 3ನೇ ಕಂತಿನ ಅನುದಾನವನ್ನು ಪಡೆದು ವಿನಿಯೋಗಿಸಲು ಸೂಚಿಸಲಾಯಿತು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ |
| VI | ಕೇಂದ್ರ ಯೋಜನೆಗಳಿಗೆ ಆದ್ಯತೆ | ಕೇಂದ್ರ ಸರ್ಕಾರದ ಯೋಜನೆಗಳತ್ತ ಆದ್ಯ ಗಮನಹರಿಸಿ ಸೂಕ್ತಾನುಸಾರ ಫಲಕಾರಿ ರೀತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ |

ವಂದನೆಗಳೊಂದಿಗೆ ಸಂವಾದವನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಶಾಲಿನಿ ರಜನೀಶ್, IAS.,)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕೋಲಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ದಿನಾಂಕ:14.12.2020 ರಂದು ನಡೆದ ಸಭೆಯ ನಡವಳಿಗಳು**

----

ಪ್ರಾರಂಭದಲ್ಲಿ ಉಪ ಕಾರ್ಯದರ್ಶಿ ಜಿಲ್ಲಾ ಪಂಚಾಯತ್ ಕೋಲಾರರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು ಸಭೆ ಮುಂದುವರೆಸಿದರು.

1. **ಕೋವಿಡ್-19:-**

ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಕೋವಿಡ್-19ನಡಿ ಕೋಲಾರ ಜಿಲ್ಲೆಗೆ ನಿಗಧಿಪಡಿಸಿರುವ ಗುರಿಗೆ ಅನುಗುಣವಾಗಿ ಸ್ಯಾಂಪಲ್ ಟೆಸ್ಟ್ ಪರೀಕ್ಷಿಸಲು ಕ್ರಮಕೈಗೊಳ್ಳಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರು, (ಎಸ್.ಎನ್.ಆರ್) ಆಸ್ಪತ್ರೆರವರಿಗೆ ಸೂಚಿಸಿದರು.

ಇದಕ್ಕೆ ಪ್ರತಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕರು, (ಎಸ್.ಎನ್.ಆರ್) ಆಸ್ಪತ್ರೆರವರು ಕೋಲಾರ ಜಿಲ್ಲೆಯಲ್ಲಿ 2400 ಸ್ಯಾಂಪಲ್ ಟೆಸ್ಟಿಂಗ್ ಗುರಿ ಇದ್ದು, ಅದರಂತೆ ಸ್ಯಾಂಪಲ್ ಟೆಸ್ಟ್ ಗಳನ್ನು ಹೆಚ್ಚು ಮಾಡಲು ತಿಳಿಸಿದರು. ಇದುವರೆವಿಗೂ ಕೋಲಾರ ಜಿಲ್ಲೆಯ ಕೋವಿಡ್-19 ರ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಮಾತನಾಡಿ ನಿಗದಿತ ಗುರಿಯಂತೆ ಎಸ್.ಎನ್.ಆರ್. ಆಸ್ಪತ್ರೆಯಲ್ಲಿ ಸ್ಯಾಂಪಲ್ ಟೆಸ್ಟ್ ಹೆಚ್ಚಾಗಿ ಮಾಡಲು ತಿಳಿಸಿದರು. ನಿರ್ಧಿಷ್ಟ ವರ್ಗಗಳಿಗೆ ಫೂಲ್ ಟೆಸ್ಟಿಂಗ್ ಹೆಚ್ಚುಹೆಚ್ಚಾಗಿ ಮಾಡಲು ತಿಳಿಸಿದರು. ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಹೆಚ್ಚಾಗಿ ನಿಗದಿತ ಗುರಿ ಆಧಾರಿತ ಸ್ಯಾಂಪಲ್ ಟೆಸ್ಟ್ ಮಾಡಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದರು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಐ.ಇ.ಸಿ

ಚಟುವಟಿಗಳನ್ನು ಮಾಡಿಸಿ ಜನರಲ್ಲಿ ಅರಿವು ಮೂಡಿಸಲು ಕ್ರಮವಹಿಸತಕ್ಕದೆಂದು ತಿಳಿಸಿದರು. ಕಾಲೇಜುಗಳು ಪ್ರಾರಂಭವಾಗಿರುವುದರಿಂದ ಎಸ್.ಓ.ಪಿ ಪ್ರಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದರು.

**2. ಓದುವ ಬೆಳಕು:-**

6-18ನೇ ವರ್ಷದ ಮಕ್ಕಳನ್ನು ಶಾಲೆಯ ಶಿಕ್ಷಕರ/ಗ್ರಂಥಾಲಯಗಳ ಮುಖಾಂತರ ನೋಂದಣಿ ಮಾಡಿಸಿ ಪ್ರತಿ ಮಕ್ಕಳಿಗೂ ಲೈಬ್ರರಿ ಕಾರ್ಡ್ ನ್ನು ವಿತರಿಸಬೇಕು ಇದನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಬೇಕು ಹಾಗೂ ಗ್ರಂಥಾಲಯದಿಂದ ಮಕ್ಕಳಿಗೆ ಕನ್ನಡ ಮತ್ತು ಅಂಗ್ಲಭಾಷೆಯ ನಿಘಂಟು, ಆಟ್ಲಾಸ್ ಮ್ಯಾಪ್ ಗಳನ್ನು ಕಥೆ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಮತ್ತು ಡಿಜಿಟಲ್ ಗ್ರಂಥಾಲಯಗಳನ್ನು ಪ್ರಾರಂಭಿಸಲು ಮತ್ತು ಅಂಗವಿಕಲ ಮಕ್ಕಳಿಗೆ ಅನುಕೂಲವಾಗುವಂತೆ Ramp ಅಳವಡಿಸಲು ಕ್ರಮಕೈಗೊಳ್ಳಲು ಹಾಗೂ ಸದರಿ ವೆಚ್ಚವನ್ನು ಗ್ರಾಮ ಪಂಚಾಯಿತಿಯ ಶೇ.5ರಷ್ಟು ಅನುದಾನದಲ್ಲಿ ಹಾಗೂ ಗ್ರಂಥಾಲಯ ಕರದಿಂದ ಭರಿಸಲು ಸಭೆಯಲ್ಲಿ ಸೂಚಿಸಿದರು.

ಕಡಿಮೆ ನೋಂದಣಿಯಾಗಿರುವ ಗ್ರಾಮ ಪಂಚಾಯಿತಿಗಳು ನಿಗದಿತ ಗುರಿಯಂತೆ ಮಕ್ಕಳನ್ನು ಶೇ.100ರಷ್ಟು ನೊಂದಣಿ ಮಾಡಿಸಲು ಕ್ರಮವಹಿಸಿ ವರದಿ ನೀಡಲು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕೋಲಾರರವರಿಗೆ ಸೂಚಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಪಂಚಾಯತ್ ರಾಜ್ ಕಾಯ್ದೆ 58ರಂತೆ ಕ್ರಮ ವಹಿಸಲು, ಪ್ರತಿ ವರ್ಷ ಮಕ್ಕಳ ಸಮೀಕ್ಷೆ ಮಾಡಬೇಕು, ನ್ಯಾಯಲಯದ ಆದೇಶದಂತೆ ಮಕ್ಕಳು ಶಾಲೆಯಿಂದ ಹೊರಗೆ ಇರುವ ಬಗ್ಗೆ ಸಮುದಾಯದವರು ಮಾಹಿತಿ ನೀಡಿ ಗ್ರಾಮ ಪಂಚಾಯಿತಿ/ಸ್ವ-ಸಹಾಯ ಗುಂಪುಗಳು/ಮಹಿಳಾ ಸಂಘಗಳು ಮತ್ತು ಗ್ರಾಮ ಶಿಕ್ಷಣ ಕಾರ್ಯಪಡೆಯ ಮೂಲಕ ಕ್ರಮವಹಿಸಲು ಸೂಚಿಸಿದರು ಹಾಗೂ ಮನೆ ಮನೆಯ ಸಮೀಕ್ಷೆ ಮಾಡಿ ದೇವದಾಸಿ ಮಕ್ಕಳು, ಜೀತದಾಳುಗಳ ಮಕ್ಕಳು, ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವಿಮುಕ್ತಿಹೊಂದಿದ ಕುಟುಂಬದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೊಂದಣಿಯನ್ನು ದಿನಾಂಕ:31.12.2020ರೊಳಗೆ ಕ್ರಮವಹಿಸಲು ತಿಳಿಸಿದರು.

**3. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-**

ನರೇಗಾ ಯೋಜನೆಯಡಿ ಎಲ್ಲಾ ಅನುಷ್ಠಾನಾಧಿಕಾರಿಗಳು ನಿಗದಿತ ಗುರಿಯಂತೆ ಪ್ರಗತಿ ಸಾಧಿಸಲು ತಿಳಿಸಿದರು. ಈ ಪೈಕಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅರಣ್ಯ ಇಲಾಖೆ ಮತ್ತು ರೇಷ್ಮೆ ಇಲಾಖೆ ಇವರುಗಳು ಕಡಿಮೆ ಪ್ರಗತಿ ಸಾಧಿಸಿರುವುದು ಕಂಡುಬಂದಿದ್ದು, ಹೆಚ್ಚಿನ ಪ್ರಗತಿ ಸಾಧಿಸಲು ತಿಳಿಸಿದರು. ನರೇಗಾ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಮಹಿಳೆಯರು ಹೆಚ್ಚಿಗೆ ಭಾಗವಹಿಸುವಂತೆ ಮಾಡಲು ಕ್ರಮವಹಿಸಲು ಹಾಗೂ ಗ್ರಾಮ ಪಂಚಾಯಿತಿವಾರು ಮಹಿಳೆಯರಿಗಾಗಿ ಗುರಿ ನಿಗದಿಪಡಿಸಿ ಪ್ರಗತಿ ಸಾಧಿಸಲು ತಿಳಿಸಿದರು.

**4. ಸ್ವಚ್ಛ ಭಾರತ್ ಮಿಷನ್:-**

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ 1769 ಅಂಗನವಾಡಿ ಕೇಂದ್ರಗಳಿದ್ದು, ಇವುಗಳ ಪೈಕಿ 1173 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯವಿದ್ದು, ಸದರಿ ಶೌಚಾಲಯಗಳು ಬಳಕೆಯಲ್ಲಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ತಿಳಿಸಿದರು. ಬಾಕಿ ಇರುವ 596 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಲು ತಿಳಿಸಿದರಲ್ಲದೆ ಮುಂದಿನ ಸಭೆಗೆ ಯಾವುದೇ ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ಇಲ್ಲವೆಂದು ತಿಳಿಸಬಾರದು ಎಂದು ಸೂಚಿಸಿದರು.

**5. ಎನ್.ಆರ್.ಎಲ್.ಎಂ :-**

ಘನ ತ್ಯಾಜ್ಯ ವಿಲೇವಾರಿ ಘಟಕ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ (GPLF) ಗುಂಪುಗಳಿಗೆ ನೀಡಲು ಸೂಚಿಸಿದರು ಸದರಿ ಘಟಕದ ಪೂರ್ಣ ನಿರ್ವಹಣೆಯನ್ನು (End to End) ಆಯ್ಕೆಯಾದ ಗುಂಪುಗಳು ಜವಾಬ್ದಾರಿಯಿಂದ ನಿರ್ವಹಿಸಲು ತಿಳಿಸಿದರು.

ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಸ್ಥಳಗಳಲ್ಲಿ ನರೇಗಾ ಮತ್ತು 15ನೇ ಹಣಕಾಸು ಯೋಜನೆ ಅಥವಾ ಬೇರೆ ಯಾವುದೇ ಅನುದಾನವನ್ನು ಹೊಂದಾಣಿಕೆ ಮಾಡಿಕೊಂಡು ಮಳಿಗೆಗಳನ್ನು

ನಿರ್ಮಾಣ ಮಾಡಿ ಸದರಿ ಮಳಿಗೆಗಳನ್ನು ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಲು ತಿಳಿಸಿದರು.

ಸಮುದಾಯ ಶೌಚಾಲಯಗಳ ನಿರ್ವಹಣೆಯನ್ನು ಸ್ವ-ಸಹಾಯ ಗುಂಪುಗಳಿಗೆ ವಹಿಸಲು ಸೂಚಿಸಿದರು.

**6. <u>ತೆರಿಗೆ ವಸೂಲಾತಿ ಬಗ್ಗೆ :-</u>**

ಗ್ರಾಮ ಪಂಚಾಯಿತಿಯಗಳು ತೆರಿಗೆಯನ್ನು ನಿಯಮಾನುಸಾರ ಸಂಗ್ರಹ ಮಾಡಲು ಕ್ರಮವಹಿಸಲು ಹಾಗೂ ಪಂಚತಂತ್ರ ತಂತ್ರಾಂಶದಲ್ಲಿ ಇಂಧೀಕರಿಸಲು ಹಾಗೂ ಹೆಚ್ಚಿನ ತೆರಿಗೆ ವಸೂಲಿಯಲ್ಲಿ ಪ್ರಗತಿ ಸಾಧಿಸಲು ಸೂಚಿಸಿದರು.

**7. <u>ಕುಡಿಯುವ ನೀರು :-</u>**

ಗ್ರಾಮೀಣ/ನಗರ ಪ್ರದೇಶದಲ್ಲಿ ಯಾವುದೇ ಕುಡಿಯುವ ನೀರಿನ ಸಮಸ್ಯೆಗಳಿರುವುದಿಲ್ಲ. ಶುದ್ಧ ಕುಡಿಯುವ ನೀರಿನ 1099 ಆರ್.ಓ. ಪ್ಲಾಂಟ್ ಗಳಲ್ಲಿ 9 ಆರ್.ಓ.ಪ್ಲಾಂಟ್ ಗಳು ತುರ್ತಾಗಿ ದುರಸ್ಥಿ ಮಾಡಿ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೋಲಾರರವರಿಗೆ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ